# TATA INSTITUTE OF SOCIAL SCIENCES

## POST GRADUATE CERTIFICATE

## In

## Contemporary Education Perspectives

# PEDAGOGY OF LANGUAGE

**“6ನೇ ಮತ್ತು 7ನೇ ತರಗತಿಯಲ್ಲಿ ಪದ್ಯ ಬೋಧನೆ ಕುರಿತು**

**ಕನ್ನಡ ಭಾಷಾ ಶಿಕ್ಷಕರು ಹೊಂದಿರುವ ದೃಷ್ಟಿಕೋನ ಮತ್ತು ಸವಾಲುಗಳು “**

ಇವರಿಂದ

**ಕುಮಾರಿ. ವಿಜಯಲಕ್ಷ್ಮಿ ಕಟಕೆ**

**ಉಪನ್ಯಾಸಕಿ, ಡಯಟ್‌ಕಮಲಾಪೂರ, ಜಿಲ್ಲೆ: ಕಲಬುರಗಿ**

ಸಂಶೋಧನೆಯ ಮಾರ್ಗದರ್ಶಕರು

ಶ್ರೀಮತಿ. ಬೃಂದಾರಾವ್

TATA INSTITUTE OF SOCIAL SCIENCES

POST GRADUATE CERTIFICATE

In

Contemporary Education Perspectives

PEDAGOGY OF LANGUAGE

Name of the Student : VIJAYALAXMI KATKE

Enrolment Number : CEP20183661

Period of Research : March to August 2019

Name of Mentor : Smt.. BRINDA RAO

Research Project Title : **“ 6ನೇ ಮತ್ತು 7ನೇ ತರಗತಿಯಲ್ಲಿ ಪದ್ಯ ಬೋಧನೆ ಕುರಿತು ಕನ್ನಡ ಭಾಷಾ ಶಿಕ್ಷಕರು ಹೊಂದಿರುವ ದೃಷ್ಟಿಕೋನ ಮತ್ತು ಸವಾಲುಗಳು “**

**Date : 30-07-2019** **Signature**

## –: ಕೃತಜ್ಞತೆಗಳು :–

ಈ ಸಂಶೋಧನಾ ಕಾರ್ಯವನ್ನು ಕೈಗೊಳ್ಳಲು ಅವಕಾಶ ನೀಡಿದ ಮಾನ್ಯ ಶ್ರೀ. ಶಶಿಕಾಂತ ಮರ್ತುಳೆ, ಉಪನಿರ್ದೇಶಕರು (ಅಭಿವೃದ್ಧಿ) ಹಾಗೂ ಪಾಚಾರ್ಯರು, ಡಯಟ್ ಕಮಲಾಪೂರ, ಜಿ॥ ಕಲಬುರಗಿ ಇವರಿಗೆ ಹಾಗೂ ತಮ್ಮ ಅಮೂಲ್ಯ ಸಲಹೆ ಸೂಚನೆಗಳನ್ನು ನೀಡಿ ಸಹಕರಿಸಿದ ಮಾರ್ಗದರ್ಶಕರಾದ ಶ್ರೀಮತಿ. ಬೃಂದಾ ರಾವ ಮೇಡಂ ಇವರಿಗೆ ಹೃದಯ ಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಪೆಡಗೋಗಿ ಆಫ್ ಲ್ಯಾಂಗವೇಜ್ ಕೋರ್ಸಗೆ ಸಂಬಂಧಿಸಿದಂತೆ ಪ್ರತಿ ಹಂತದಲ್ಲಿ ಸೂಕ್ತ ಸಲಹೆ ಸೂಚನೆಗಳನ್ನು ನೀಡಿ ಸಹಕರಿಸಿದ ಶ್ರೀ.ಶಿವಾನಂದ ಹೊಂಬಾಳ, ಶ್ರೀಮತಿ. ಬೃಂದಾರಾವ ಹಾಗೂ ಶ್ರೀಮತಿ. ಜಾನೆ ಉಪನ್ಯಾಸಕರಿಗೆ ನನ್ನ ಹೃದಯ ಪೂರ್ವಕ ವಂದನೆಗಳನ್ನು ಸಲ್ಲಿಸುತ್ತೇನೆ.

ಅದೇ ರೀತಿ ಖಿಙಖಖ ಸಂಸ್ಥೆಯ ಶ್ರೀಮತಿ. ಸುಮನಾ, ಶ್ರೀ. ಸುನೀಲ ಹಾಗೂ ಇತರ ಎಲ್ಲರಿಗೂ ಅವರ ಅಮೂಲ್ಯ ಸಲಹೆ ಸೂಚನೆಗಳಿಗಾಗಿ ತುಂಬಾ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಪ್ರಸ್ತುತ ಸಂಶೋಧನಾಕಾರ್ಯಕ್ಕೆ ಸಂಬಂಧಿಸಿದಂತೆ ಅಗತ್ಯವಾದಂತಹ ಮಾಹಿತಿಯನ್ನು ನೀಡಿ ತಮ್ಮ ಅಭಿಪ್ರಾಯಗಳನ್ನು ಮುಕ್ತವಾಗಿ ವ್ಯಕ್ತಪಡಿಸಿದ ಕಲಬುರಗಿ ಜಿಲ್ಲೆಯ 8 ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳ ಕನ್ನಡ ಭಾಷಾ ಶಿಕ್ಷಕರಿಗೆ ವಂದನೆಗಳು.

ಕುಮಾರಿ. ವಿಜಯಲಕ್ಷ್ಮಿ ಕಟಕೆ

ಉಪನ್ಯಾಸಕಿ, ಡಯಟ್ ಕಮಲಾಪೂರ

## –: ಸಾರಾಂಶ :–

ಪದ್ಯ ಸೃಜನಾತ್ಮಕವಾದುದು, ಮಕ್ಕಳಲ್ಲೂ ಸೃಜನಶೀಲತೆ ಇರುವದು. ಶಿಕ್ಷಕರು ಪದ್ಯವನ್ನು ಮಕ್ಕಳ ಕಲ್ಪನೆ, ಸಂವೇದನೆಗಳನ್ನು ಪ್ರಚೋದಿಸುವಂತೆ ಬೋಧಿಸುವುದರಿಂದ ಮಕ್ಕಳಲ್ಲಿ ಪದ್ಯದ ಬಗ್ಗೆ ಆಸಕ್ತಿ ಮೂಡಿಸಬಹುದು. ಅವರ ಸೃಜನಾತ್ಮಕತೆಗೆ ಪ್ರೋತ್ಸಾಹ ದೊರಕುವದು. ಆದರೆ ಭಾಷಾ ಶಿಕ್ಷಕರು ತರಗತಿಯಲ್ಲಿ ಪದ್ಯವನ್ನು ಗದ್ಯದಂತೆಯೇ ಬೋಧಿಸುವುದನ್ನು ಕಾಣುತ್ತೇವೆ. ಕಾರಣ ಶಿಕ್ಷಕರು ಪದ್ಯವನ್ನು ಬೋಧಿಸುವುದರಲ್ಲಿ ಅನೇಕ ಸವಾಲುಗಳನ್ನು ಎದುರಿಸುತ್ತಿದ್ದದನ್ನು ಕಾಣುತ್ತೇವೆ.

6ನೇ ಮತ್ತು 7ನೇ ತರಗತಿ ಮಕ್ಕಳಿಗೆ ಶಿಕ್ಷಕರು ಬೋಧಿಸುವುದನ್ನು ತಿಳಿದುಕೊಳ್ಳುವ ಸಾಮರ್ಥ್ಯ ಇರುತ್ತದೆ. ಪ್ರಯುಕ್ತ ಶಿಕ್ಷಕರು ಪದ್ಯ ಬೋಧನೆ ಬಗ್ಗೆ ಹೊಂದಿರುವ ದೃಷ್ಟಿಕೋನ ಮತ್ತು ಎದುರಿಸುತ್ತಿರುವ ಸವಾಲುಗಳನ್ನು ತಿಳಿದುಕೊಳ್ಳುವುದು ಹಾಗೂ ಅದಕ್ಕೆ ಪರಿಹಾರ ಕೊಂಡುಕೊಳ್ಳಲು **"6ನೇ ಮತ್ತು 7ನೇ ತರಗತಿಯಲ್ಲಿ ಪದ್ಯ ಬೋಧನೆ ಕುರಿತು ಕನ್ನಡ ಭಾಷಾ ಶಿಕ್ಷಕರು ಹೊಂದಿರುವ ದೃಷ್ಟಿಕೋನ ಮತ್ತು ಸವಾಲುಗಳು."** ವಿಷಯ ಕುರಿತು ಕಲಬರಗಿ ಜಿಲ್ಲೆಯ 8 ಸ.ಹಿ.ಪ್ರಾ ಶಾಲೆಗಳ 6ನೇ ಮತ್ತು 7ನೇ ತರಗತಿಗೆ ಕನ್ನಡ ಬೋಧಿಸುವ ಭಾಷಾ ಶಿಕ್ಷಕರ ಸಂದರ್ಶನ ಹಾಗೂ ಅವರೊಂದಿಗೆ ಸಾಮೂಹಿಕ ಚರ್ಚೆ ಮಾಡಿ ಅವರಿಂದ ಮಾಹಿತಿ ಪಡೆದು ಚರ್ಚೆಯಲ್ಲಿ ಆ ಸವಾಲುಗಳನ್ನು ಅರ್ಥೈಸಿಕೊಳ್ಳಲು ಪ್ರಯತ್ನಿಸಲಾಯಿತು.

# –: ಪರಿವಿಡಿ :–

**ಅಧ್ಯಾಯ– 1 ಪೀಠಿಕೆ**

1.1 : ಪೀಠಿಕೆ

1.2 : ಸಂಶೋಧನೆಯ ಶೀರ್ಷಿಕೆ

1.3 : ಸಂಶೋಧನೆಯ ಅಗತ್ಯತೆ

1.4 : ಸಂಶೋಧನಾ ಪ್ರಶ್ನೆಗಳು

1.5 : ಸಂಶೋಧನೆಯ ಉದ್ದೇಶಗಳು

**ಅಧ್ಯಾಯ– 2 ಸಾಹಿತ್ಯ ಅವಲೋಕನ**

2.1 : ಪೀಠಿಕೆ

2.2 :ಅರ್ಥ ಮತ್ತು ವ್ಯಾಖ್ಯಾನ

2.3 : ಸಂಬಂಧಿತ ಸಾಹಿತ್ಯದ ಅವಲೋಕನದ ಅವಶ್ಯಕತೆ

2.4 : ಸಂಬಂಧಿತ ಸಾಹಿತ್ಯದ ಅವಲೋಕನದ ಮಹತ್ವ

2.5 : ಸಂಬಂಧಿತ ಸಾಹಿತ್ಯದ ಅಲೋಕನ

2.6 : ಉಪಸಂಹಾರ

**ಅಧ್ಯಾಯ– 3 ಸಂಶೋಧನಾ ಸ್ವರೂಪ**

3.1 : ಪೀಠಕೆ

3.2 : ನಮೂನೆಯ ಆಯ್ಕೆ

3.3 : ದತ್ತಾಂಶ ಸಂಗ್ರಹಣೆಗೆ ಬಳಸಿದ ಸಾಧನಗಳು

3.4 : ದತ್ತಾಂಶ ಸಂಗ್ರಹಣೆಯ ವಿಧಾನ

3.5 : ದತ್ತಾಂಶ ಸಂಗ್ರಹಣೆ

**ಅಧ್ಯಾಯ– 4 ಫಲಿತಾಂಶ ಮತ್ತುಚರ್ಚೆ**

4.1 : ಪೀಠಿಕೆ

4.2 : ದತ್ತಾಂಶ ವಿಶ್ಲೇಷಣೆ ಮತ್ತು ಅರ್ಥೈಸುವಿಕೆ

4.3 : ಸಂಶೋಧನೆಯ ಪ್ರಶ್ನೆವಾರು ವಿಶ್ಲೇಷನೆ

4.4 : ಸಂಶೋಧನೆಯ ಫಲಿತಾಂಶ

**ಅಧ್ಯಾಯ : 5 ತೀರ್ಮಾನಗಳು ಮತ್ತು ಶಿಫಾರಸುಗಳು**

5.1 : ಪೀಠಿಕೆ

5.2 : ಸಂಶೋಧನೆಯಲ್ಲಿ ಕಂಡುಬಂದ ಪ್ರಮುಖಾಂಶಗಳು

5.2.1 : ಸಂಶೋಧನಾ ಪ್ರಶ್ನೆಗಳು

5.2.2 : ಸಂಶೋಧನೆಯ ಪ್ರಶ್ನೆವಾರು ವಿಶ್ಲೇಷಣೆ

5.2.3 : ಸಂಶೋಧನೆಯ ಫಲಿತಾಂಶ

5.3 : ತೀರ್ಮಾನಗಳು

5.4 : ಶಿಫಾರಸ್ಸುಗಳು / ಸಲಹೆಗಳು

5.5 : ಉಪಸಂಹಾರ

**ಅಧ್ಯಾಯ– 6 ಉಲ್ಲೇಖಗಳು**

6.1 :ಗ್ರಂಥ ಸೂಚಿ

6.2 : ಅನುಬಂಧಗಳು

ಅ) ಪ್ರಶ್ನಾವಳಿ : ಶಿಕ್ಷಕರಿಂದ ಪಡೆದ ಮಾಹಿತಿ

ಆ) ಪ್ರಶ್ನೇವಾರು ವಿವರವಾದ ವಿಶ್ಲೇಷಣೆ

ಇ) ಫೋಟೋಗಳು

# ಅಧ್ಯಾಯ : 1 ಪೀಠಿಕೆ

## 1.1 : ಪೀಠಿಕೆ :

ಮಾನವನ ಸರ್ವತೋಮೂಖ ಬೆಳವಣಿಗೆಗೆ ಶಿಕ್ಷಣ ಪ್ರಬಲ ಸಾಧನ. ಇಂದಿನ ಮಕ್ಕಳು ನಾಳೆಯ ಪ್ರಜೆ ,ಉತ್ತಮ ಪ್ರಜೆಯ ಹಾಗೂ ಉತ್ತಮ ರಾಷ್ಟ್ರದ ನಿರ್ಮಾಣದಲ್ಲಿ ಶಿಕ್ಷಣದ ಪಾತ್ರ ಪ್ರಮುಖವಾದುದು. ಸಮಾಜದ ಎಲ್ಲ ಸಮಸ್ಯೆಗಳ ಪರಿಹಾರಕ್ಕೆ ಶಿಕ್ಷಣ ಉತ್ತಮ ಸಾಧನ. ಈ ದಿಶೆಯಲ್ಲಿ ಭಾಷಾ ವಿಷಯ ಶಿಕ್ಷಕರ ಪಾತ್ರ ಪ್ರಮುಖವಾದುದು. ಭಾಷಾ ಬೋಧನೆಯಲ್ಲಿ ಪದ್ಯ ಬೋಧನೆ ಬಹಳ ಮುಖ್ಯವಾದುದು. ಹಿರಿಯ ಪ್ರಾಥಮಿಕ ಶಾಲೆಯ 6ನೇ ಮತ್ತು 7ನೇ ತರಗತಿಯಲ್ಲಿ ಅಭ್ಯಸಿಸುವ ಮಕ್ಕಳು ಪದ್ಯಗಳನ್ನು ಅರ್ಥೈಸಿಕೊಳ್ಳುವಂಥ, ಸಂಬಂಧ ಕಲ್ಪಿಸಿಕೊಳ್ಳುವಂಥ, ಸ್ವಂತ ವಿಚಾರ ಮಾಡುವಂಥಹ ಸಾಮರ್ಥ್ಯ ಹೊಂದಿರುವುವು. ಇವರ ಸಾಮರ್ಥ್ಯಕ್ಕೆ ಅನುಗುಣವಾಗಿ ಹಾಗೂ ಅವರ ಆಸಕ್ತಿ, ಕಲ್ಪನೆ ಮತ್ತು ಸೃಜನಶೀಲತೆಗೆ ಅವಶ್ಯಕವಾದಂಥಹ ಕಲಿಕೆಯನ್ನು ಶಿಕ್ಷಕರು ಅನುಕೂಲಕರಿಸಲು ಪದ್ಯ ಬೋಧನೆಯನ್ನು ತರಗತಿಯಲ್ಲಿ ಮಾಡುವದು ಅವಶ್ಯಕ.

ಪದ್ಯಗಳನ್ನು ಎಲ್ಲರೂ ಇಷ್ಟ ಪಡುವರು. ಅದರಲ್ಲೂ ಮಕ್ಕಳಿಗೆ ಪದ್ಯಗಳೆಂದರೆ ಬಲು ಪ್ರೀತಿ. ಇವುಗಳು ಅವರಲ್ಲಿ ಆಸಕ್ತಿ, ಕಲ್ಪನೆ, ಸಂವೇದನೆಗಳನ್ನು ಪ್ರಚೋದಿಸುವವು. ಹಿರಿಯ ಪ್ರಾಥಮಿಕ ಶಾಲೆಯ 6ನೇ ಮತ್ತು 7ನೇ ತರಗತಿಯ ಮಕ್ಕಳಲ್ಲಿ ಪದ್ಯಗಳನ್ನು ಅರ್ಥೈಸಿಕೊಳ್ಳುವ ಸಾಮರ್ಥ್ಯ ಇರುವುದರಿಂದ ಅವರ ಸೃಜನಶಿಲತೆಗೆ ಸಹಾಯಕಾರಿಯಾಗುವದು.

ಇಂದಿನ ಮಕ್ಕಳು ನಾಳೆಯ ಪ್ರಜೆಗಳು. ಒಂದು ಉತ್ತಮ ದೇಶ ನಿರ್ಮಾಣವಾಗಬೇಕಾದರೆ ಆ ದೇಶದ ಪ್ರಜೆಗಳು ನೀತಿವಂತರು, ಪ್ರಗತಿಪರರು, ರಚನಾತ್ಮಕರು, ಸೃಜನಾತ್ಮಕರು ಆಗಿರಬೇಕಾದುದು ಅವಶ್ಯಕ. ಬೇರೆಯವರ ನೋವು, ಕಷ್ಟ, ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳುವ ಹಾಗೂ ಸಹಾಯ ಮಾಡುವ ಸಂವೇದನೆ ಅವರಲ್ಲಿರಬೇಕು. ಬಾಲ್ಯದಲ್ಲಿ ಮಕ್ಕಳಿಗೆ ಪದ್ಯವನ್ನು ಉತ್ತಮವಾಗಿ ಬೋಧಿಸಿದರೆ ಎಂದರೆ, ಮಕ್ಕಳ ಸೃಜನಾತ್ಮಕತೆಯನ್ನು, ಸಂವೇದನೆಗಳನ್ನು ಪ್ರೇರೇಪಿಸುವಂತೆ ಶಿಕ್ಷಕರು ಅರ್ಥಪೂರ್ಣವಾಗಿ ಬೋಧಿಸಿದರೆ ಅದು ಮಗುವಿಗೆ ಭವಿಷ್ಯದಲ್ಲಿಯೂ ಸಹಕಾರಿಯಾಗುವದು. ಪದ್ಯ ಮಗುವಿನಲ್ಲಿ ಕಲ್ಪನಾ ಶಕ್ತಿಯನ್ನು ವೃದ್ಧಿಸುವುದು. ಶಿಕ್ಷಕರು ಮಕ್ಕಳಿಗೆ ಸ್ವಂತ ಪದ್ಯ ಕಟ್ಟಲು ಪ್ರೋತ್ಸಾಹ ನೀಡಿದ್ದರೆ ಅದು ಮಗುವಿನಲ್ಲಿ ಕಲ್ಪಿಸಿಕೊಳ್ಳುವಿಕೆ, ವಿಚಾರ ಮಾಡುವಿಕೆ, ಅವನಲ್ಲಿಯ ಸಂವೇದನೆ ಬೆಳೆಯಲು ಸಹಾಯಕವಾಗುವದು. ಸಂವೇದನಾಶೀಲತೆ ಇತರರ ಕಷ್ಟಗಳಿಗೆ ಸ್ಪಂದಿಸಲು

ಸಹಾಯಕವಾಗುವದು. ಈ ಗುಣಗಳು ಚಿಕ್ಕಂದಿನಲ್ಲಿ ಮಕ್ಕಳಲ್ಲಿ ಬೆಳೆದರೆ ಅದು ಮಗುವನ್ನು ನೀತಿವಂತನನ್ನಾಗಿ ಮಾಡುವದು. ಆ ಮೂಲಕ ಉತ್ತಮ ಪ್ರಜೆಯನ್ನಾಗಿ ನಿರ್ಮಾಣ ಮಾಡುವುದು.

ಪದ್ಯ ಕಲಿಕೆ, ಪದ್ಯ ರಚನೆಯಿಂದ ಮಗುವಿನ ಕಲ್ಪನಾಶಕ್ತಿ ಬೆಳೆಯುವುದರಿಂದ ಮುಂದೆ ಭವಿಷ್ಯದಲ್ಲಿ ಹೊಸ ಹೊಸ ಯೋಜನೆಗಳನ್ನು ಸೃಷ್ಟಿಸಲು ಹಾಗೂ ಪ್ರಗತಿಪರ ಕಾರ್ಯಗಳನ್ನು ಮಾಡಲು ಸಾಧ್ಯವಾಗುವದು. ಹೇಳುವ ತಾತ್ಪರ್ಯವೇನೆಂದರೆ, ಬಾಲ್ಯದಲ್ಲಿ ಶಿಕ್ಷಕರು ಪದ್ಯವನ್ನು ಅರ್ಥಪೂರ್ಣವಾಗಿ, ಭಾವಪೂರ್ಣವಾಗಿ ಬೋಧಿಸಿದರೆ ಅದು ಮಗುವಿನಲ್ಲಿ ಕಲ್ಪನೆ, ನೈತಿಕತೆ, ಸಂವೇದನೆ, ಸೃಜನಾತ್ಮಕತೆ ಇತ್ಯಾದಿಗಳನ್ನು ಬೆಳೆಸಿ ಆತನನ್ನು ಉತ್ತಮ ಪ್ರಜೆಯನ್ನಾಗಿ ಮಾಡುವುದು. ಇಂಥ ವ್ಯಕ್ತಿಯ ಕೈಯಲ್ಲಿ ಅಧಿಕಾರ ದೊರೆತರೆ ಅದರಿಂದ ದೇಶಕ್ಕೆ ಅನುಕೂಲವಾಗುವದು. ಹಾಗಾಗಿ ಪದ್ಯ ಬೋಧನೆ ಕೇವಲ ಒಂದು ಪಠ್ಯವಾಗದೆ, ಉತ್ತಮ ಪ್ರಜೆಗಳನ್ನು ನಿರ್ಮಿಸುವಲ್ಲಿ ಸಹಾಯಕವಾಗುವ ಒಂದು ಸಾಧನವಾಗಿದೆ. ಆದರೆ 6ನೇ ಮತ್ತು 7ನೇ ತರಗತಿಯಲ್ಲಿ ಕನ್ನಡ ಬೋಧಿಸುವ ಶಿಕ್ಷಕರಿಗೆ ಪದ್ಯ ಬೋಧನೆ ಸವಾಲಾಗುತ್ತಿದೆ. ಅಲ್ಲದೆ ಸದರಿ ತರಗತಿಯ ಮಕ್ಕಳ ಸಾಮರ್ಥ್ಯಕ್ಕೆ ಅನುಗುಣವಾಗಿ, ಅವರ ಸೃಜನಶೀಲತೆ, ಕಲ್ಪನಾ ಶಕ್ತಿಯನ್ನು ಪ್ರಚೋದಿಸುವಂತೆ ಪದ್ಯ ಬೋಧನೆ ಮಾಡುವುದರಲ್ಲಿ ಶಿಕ್ಷಕರಿಗೆ ಅನೇಕ ಸವಾಲುಗಳು ಎದುರಾಗುತ್ತಿವೆ.

ಅನೇಕ ಶಿಕ್ಷಕರಿಗೆ ಪದ್ಯ ಬೋಧನೆ ಹೇಗೆ ಮಾಡುವುದು ಎಂಬುದೇ ಸಮಸ್ಯೆ. ಇದನ್ನು ಕೇವಲ ಒಂದು ಪಠ್ಯ ಎಂದು ಬೋಧಿಸಿದರೆ ಮಕ್ಕಳಿಗೆ ಅವಶ್ಯಕ ಕಲಿಕೆಯಾಗುವುದಿಲ್ಲ. ಆಸಕ್ತಿಯೂ ಮೂಡುವುದಿಲ್ಲ. ಹಾಗೂ ಅವರ ಕಲ್ಪನಾ ಶಕ್ತಿ ಮತ್ತು ಸಂವೇದನೆ, ಸೃಜನಶೀಲತೆಗೆ ಸಹಾಯಕಾರಿಯಾಗುವುದಿಲ್ಲ. ಶಿಕ್ಷಕರು ಪದ್ಯ ಬೋಧನೆ ಬಗ್ಗೆ ಹೊಂದಿರುವ ದೃಷ್ಟಿಕೋನ ಅವರ ಬೋಧನೆ ಮೇಲೆ ಪರಿಣಾಮ ಬೀರುವುದು.

ಮಕ್ಕಳ ಭಾಷಾಜ್ಞಾನದ ವೃದ್ಧಿ, ಹೊಸ ಹೊಸ ಪದಗಳ ಬಗ್ಗೆ ಮಕ್ಕಳಲ್ಲಿ ಅರಿವು ಮೂಡಿಸುವುದು, ಜೊತೆಗೆ ಸ್ವತಂತ್ರವಾಗಿ ವಿಚಾರ ಮಾಡುವಂತೆ ತಮ್ಮ ಕಲ್ಪನೆ ಬಳಸಿ ತಾವು ಪದ್ಯ ಕಟ್ಟಲು ಪ್ರಯತ್ನಿಸುವಂತೆ ಮಕ್ಕಳಲ್ಲಿ ಪ್ರೇರಣೆ ನೀಡುವ ಕೆಲಸ ಶಿಕ್ಷಕರ ಬೋಧನೆಯಿಂದಲೇ ಆಗುವಂತಿರಬೇಕು. 6ನೇ ಮತ್ತು 7ನೇ ತರಗತಿಯ ವಯಸ್ಸಿನ ಮಕ್ಕಳಿಗೆ ಓದಲು ಬರುವುದರಿಂದ ಮಕ್ಕಳು ಪದ್ಯವನ್ನು ತಾವೇ ಅರ್ಥ ಮಾಡಿಕೊಳ್ಳುವುದಕ್ಕೆ ಅವಕಾಶ ನೀಡುವುದನ್ನು ಸೇರಿಸಿ ಮಕ್ಕಳ ಅರ್ಥೈಸಿಕೊಳ್ಳುವಿಕೆಗೆ ಶಿಕ್ಷಕರು ಪೂರಕವಾಗಿ ತಮ್ಮ ಅಭಿಪ್ರಾಯವನ್ನು ಹಂಚಿಕೊಳ್ಳುವಂಥಹ ಮುಕ್ತ ವಾತಾವರಣ ಕಾವ್ಯಾಸ್ವಾದನೆಗೆ ಬಹಳ ಒಳ್ಳೆಯದು. ತರಗತಿಯಲ್ಲಿ ಪದ್ಯಬೋಧನೆ ಪರಿಣಾಮಕಾರಿಯಾಗಲು ಸ್ವತ: ಶಿಕ್ಷಕರೇ ಹಾಡುವುದರ ಮೂಲಕ, ಆಡಿಯೋ, ವೀಡಿಯೋಗಳನ್ನು ಬಳಸುವುದರ ಮೂಲಕ ಪ್ರಯತ್ನಿಸಬೇಕಾಗಿರುತ್ತದೆ. ಆದರೆ ಅನೇಕ ಶಿಕ್ಷಕರಿಗೆ ಹಾಡಲು ಬರುವುದಿಲ್ಲ ಹಾಗೂ ಪದ್ಯವನ್ನು ಅರ್ಥಪೂರ್ಣವಾಗಿ

ವಾಚನ ಮಾಡಲು ಸಾಧ್ಯವಾಗುವುದಿಲ್ಲ. ಇತರ ಸಾಧನಗಳ ಎಂದರೆ ಆಡಿಯೋ ಮತ್ತು ವೀಡಿಯೋಗಳ ಕೊರತೆ ಮತ್ತು ಅವುಗಳನ್ನು ತರಗತಿಯಲ್ಲಿ ಬಳಸುವ ಬಗ್ಗೆ ಅನಾಸಕ್ತಿ ಇದು ತರಗತಿಯಲ್ಲಿ ಪದ್ಯಬೋಧನೆ ನೀರಸವಾಗಿಸುತ್ತಿದೆ.

ಈ ದಿಶೆಯಲ್ಲಿ ಶಿಕ್ಷಕರು ಸದರಿ ತರಗತಿಯಲ್ಲಿ ಪದ್ಯಬೋಧನೆ ಕುರಿತು ಹೊಂದಿರುವ ದೃಷ್ಟಿಕೋನ ಹಾಗು ಅವರು ಎದುರಿಸುತ್ತಿರುವ ಸವಾಲುಗಳನ್ನು ಕುರಿತು ಅವುಗಳನ್ನು ಪರಿಹರಿಸುವ ಮೂಲಕ 6ನೇ ಮತ್ತು 7ನೇ ತರಗತಿಗಳಲ್ಲಿ ಪದ್ಯ ಬೋಧನೆಯನ್ನು ಪರಿಣಾಮಕಾರಿಯಾಗಿ ಮಾಡುವುದು ಅವಶ್ಯಕವಾಗಿರುತ್ತದೆ.

## 1.2 : ಸಂಶೋಧನೆಯ ಶೀರ್ಷಿಕೆ :

**" 6ನೇ ಮತ್ತು 7ನೇ ತರಗತಿಯಲ್ಲಿ ಪದ್ಯ ಬೋಧನೆ ಕುರಿತು ಕನ್ನಡ ಭಾಷಾ ಶಿಕ್ಷಕರು ಹೊಂದಿರುವ ದೃಷ್ಟಿಕೋನ ಮತ್ತು ಸವಾಲುಗಳು."**

## 1.3 : ಸಂಶೋಧನೆಯ ಅಗತ್ಯತೆ :

ಪದ್ಯ ರಚನೆ ಒಂದು ಸೃಜನಾತ್ಮಕ ಕ್ರಿಯೆ. ಪ್ರತಿಯೊಬ್ಬರಲ್ಲಿ ಸೃಜನಶೀಲತೆ ಇರುತ್ತದೆ. ಆದರೆ ಪ್ರೇರಣೆಯ ಕೊರತೆ, ನೀರಸ ಪ್ರತಿಕ್ರಿಯೆಗಳು, ಅವಕಾಶಗಳ ಕೊರತೆ ಇತ್ಯಾದಿಗಳಿಂದ ಮಗು ತನ್ನ ಸೃಜನಶೀಲತೆಯನ್ನು ಕಳೆದು ಕೊಳ್ಳುತ್ತ ಬರುವನು. ಪ್ರಯುಕ್ತ ವಿದ್ಯಾರ್ಥಿಗಳಲ್ಲಿ ಸಹಜವಾಗಿ ಇರುವ ಸೃಜನಶೀಲತೆಗೆ ಅನುಕೂಲ ಮಾಡಿಕೊಡಲು ಅಥವಾ ಪ್ರೇರೆಪಿಸಲು ಪದ್ಯ ಬೋಧನೆ ಒಂದು ಸಾಧನವಾಗಿರುವದು. ಇದನ್ನು ಶಿಕ್ಷಕರು ಅರ್ಥಪೂರ್ಣವಾಗಿ ಪದ್ಯಬೋಧನೆ ಮಾಡುವುದರ ಮೂಲಕ ಮಕ್ಕಳಲ್ಲಿಯ ಸೃಜನಶೀಲತೆಗೆ ಅನುವು ಮಾಡಕೊಡಬೇಕು. ಆದರೆ ಅನೇಕ ಶಿಕ್ಷಕರಿಗೆ ಪದ್ಯವನ್ನು ಯಾವ ರೀತಿ ಬೋಧಿಸಬೇಕು ಎಂಬುದೇ ಒಂದು ಸಮಸ್ಯೆ. ಅದನ್ನು ಒಂದು ಪಠ್ಯ ವಿಷಯದಂತೆ ಕೇವಲ ಓದಿ ಅರ್ಥವನ್ನು ವಿವರಿಸುವ ಶಿಕ್ಷಕರನ್ನೇ ಹೆಚ್ಚು ಸಂಖ್ಯೆಯಲ್ಲಿ ಕಾಣುತ್ತೇವೆ. ಇಂಥ ಶಿಕ್ಷಕರು ಪದ್ಯಬೋಧನೆ ಬಗ್ಗೆ ಹೊಂದಿರುವ ದೃಷ್ಟಿಕೋನ ತುಂಬಾ ಹಗುರವಾದಂತಹುದು. ಹಾಗೂ ಶಿಕ್ಷಕರು ಪದ್ಯ ಬೋಧನೆಯ ಬಗ್ಗೆ ನಿಷ್ಕಾಳಜಿ ಹೊಂದಿರುವದು ಕಂಡುಬರುವದು. ಇದರಿಂದ 6ನೇ ಮತ್ತು 7ನೇ ತರಗತಿಯ ತಿಳುವಳಿಕೆ ಹೊಂದಿದ ಮಕ್ಕಳಿಗೆ ಪದ್ಯ ಕಲಿಕೆಯಲ್ಲಿ ಆಸಕ್ತಿ ಕಡಿಮೆಯಾಗುವದನ್ನು ಕಾಣುತ್ತೇವೆ. ಪ್ರಯುಕ್ತ ಮಕ್ಕಳ ಸೃಜನಶೀಲತೆಗೆ ಸಹಾಯಕವಾಗುವಂತಹ ಪದ್ಯಬೋಧನೆಯನ್ನು ಶಿಕ್ಷಕರು ಹಾಡುವುದರ, ಅರ್ಥಪೂರ್ಣವಾಗಿ ವಾಚನ ಮಾಡುವುದರ ಮೂಲಕ, ಆಡಿಯೋ, ವೀಡಿಯೋಗಳನ್ನು ಬಳಸುವುದರ ಮೂಲಕ ಉತ್ತಮವಾಗಿ ಮಾಡಬಹುದು.

ಪದ್ಯರಚನೆ ಮತ್ತು ಪದ್ಯ ಬೋಧನೆಯೊಂದು ಸೃಜನಾತ್ಮಕ ಕ್ರಿಯೆಯಾಗಿದ್ದು, ಪದ್ಯದಲ್ಲಿ ಬರುವ ಪದಗಳು, ವಾಕ್ಯಗಳನ್ನು ನಮ್ಮ ತಿಳುವಳಿಕೆಗೆ, ಕಲ್ಪನೆ, ಸಂವೇದನೆಗಳಿಗೆ ಅನುಗುಣವಾಗಿ ಅರ್ಥೈಸಿಕೊಳ್ಳುವಂತೆ ಮಕ್ಕಳಿಗೆ ಬೋಧಿಸುವುದು ಶಿಕ್ಷಕರಿಗೆ ಸವಾಲುವಾಗಿರುವುದು. ಪದ್ಯದಲ್ಲಿ ಬಳಸಲಾಗುವ ಪದಗಳು, ವಾಕ್ಯಜೋಡಣೆ, ವ್ಯಾಕರಣ ಬಳಕೆ, ಕವಿ ಹೇಳಲು ಇಚ್ಚಸುವ ವಿಷಯ, ಓದುಗರು, ಕೇಳುಗರ ಕಲ್ಪನೆಗೆ ಮೂಡುವ ಅರ್ಥಗಳು, ಸ್ಪಂದಿಸುವ ಸಂವೇದನೆಗಳು ಇತ್ಯಾದಿ ಅನೇಕ ದೃಷ್ಟಿಯಿಂದ ಪದ್ಯವನ್ನು ಅರ್ಥೈಸಿಕೊಂಡು 6ನೇ ಮತ್ತು 7ನೇ ತರಗತಿ ಮಕ್ಕಳ ಸಾಮರ್ಥ್ಯಕ್ಕನುಗುಣವಾಗಿ ಎಂದರೆ ಅವರಿಗೆ ಅರ್ಥವಾಗುವಂತೆ, ಆಕರ್ಷಿಸುವಂತೆ ಹಾಗೂ ಅವರ ಸೃಜನಾತ್ಮಕತೆ ಪ್ರೇರೆಪಿಸುವಂಥದ್ದು ಶಿಕ್ಷಕರ ಜವಾಬ್ದಾರಿಯಾಗಿದೆ. ಆದರೆ ಈ ಮೇಲಿನ ಎಲ್ಲ ದಿಶೆಯಲ್ಲಿ ಶಿಕ್ಷಕರು ಸವಾಲುಗಳನ್ನು ಎದುರಿಸುವುದನ್ನು ಕಾಣುತ್ತೇವೆ. ಪ್ರಯುಕ್ತ ಶಿಕ್ಷಕರು ಎದುರಿಸುತ್ತಿರುವ ಸವಾಲುಗಳನ್ನು ಹಾಗೂ ಪದ್ಯ ಬೋಧಿಸುವ ಕುರಿತು ಅವರು ಹೊಂದಿರುವ ದೃಷ್ಟಿಕೋನ ವನ್ನು ಕಂಡುಹಿಡಿದು ಅವುಗಳಿಗೆ ಪರಿಹಾರವನ್ನು ಕಂಡುಕೊಂಡರೆ ಶಿಕ್ಷಕರು ಮಕ್ಕಳಿಗೆ ಉತ್ತಮವಾಗಿ ಪದ್ಯ ಬೋಧನೆ ಮಾಡಿ ಮಕ್ಕಳ ಅನುಭವ ಹಾಗೂ ಸೃಜನಾತ್ಮಕತೆಗೆ ಅನುಕೂಲಕರರಾಗಬಹುದು. ಇದರಿಂದ ಮಕ್ಕಳಿಗೆ ಪದ್ಯಬೋಧನೆ ಆಸಕ್ತಿಕರ ಹಾಗೂ ಅವರ ಕಲ್ಪನಾಶಕ್ತಿಯನ್ನು ಅನುಕೂಲಕಾರಕವಾಗಿ ಉತ್ತಮ ಕಲಿಕೆಯನ್ನು ಮೂಡಿಸಲು ಸಾಧ್ಯ.

## 1.4 : ಸಂಶೋಧನಾ ಪ್ರಶ್ನೆಗಳು :

ಶಿಕ್ಷಕರಿಗೆ ಪದ್ಯ ಬೋಧನೆ ಹೇಗೆ ಮಾಡಬೇಕೆಂಬುದೇ ಒಂದು ಸಮಸ್ಯೆ. ಅದನ್ನು ಒಂದು ಪಠ್ಯ ವಿಷಯದಂತೆ ಕೇವಲ ಓದಿ ಅರ್ಥವನ್ನು ವಿವರಿಸುವ ಶಿಕ್ಷಕರನ್ನೇ ಹೆಚ್ಚು ಸಂಖ್ಯೆಯಲ್ಲಿ ಕಾಣುತ್ತೇವೆ. ಇಂಥ ಶಿಕ್ಷಕರು ಪದ್ಯಬೋಧನೆ ಬಗ್ಗೆ ಹೊಂದಿರುವ ದೃಷ್ಟಿಕೋನ ತುಂಬಾ ಹಗುರವಾದಂತಹುದು. ಹಾಗೂ ಶಿಕ್ಷಕರು ಪದ್ಯ ಬೋಧನೆಯ ಬಗ್ಗೆ ನಿಷ್ಕಾಳಜಿ ಹೊಂದಿರುವದು ಕಂಡುಬರುವದು. ಅವರು ಪದ್ಯವನ್ನು ಕೇವಲ ಪಠ್ಯವೆಂದು ಬೋಧಿಸಿದರೆ ಅದು ಮಕ್ಕಳಿಗೆ ಪದ್ಯದಲ್ಲಿ ಆಸಕ್ತಿ ಮೂಡಿಸುವುದಿಲ್ಲ. ಹಾಗೂ ಮಕ್ಕಳ ಕಲ್ಪನಾ ಶಕ್ತಿ, ಸಂವೇದನೆ, ಸೃಜನಶೀಲತೆಗೆ ಸಹಾಯಕವಾಗುವುದಿಲ್ಲ. ಶಿಕ್ಷಕರು ಪದ್ಯ ಬೋಧನೆ ಬಗ್ಗೆ ಹೊಂದಿರುವ ದೃಷ್ಟಿಕೋನ ಅವರ ಬೋಧನೆ ಮೇಲೂ ಪರಿಣಾಮ ಬೀರುವುದು. ಅದೇ ರೀತಿ 6ನೇ ಮತ್ತು 7ನೇ ತರಗತಿಯ ಮಕ್ಕಳ ಸಾಮರ್ಥ್ಯಕ್ಕೆ ಅನುಗುಣವಾಗಿ ಅವರ ಸೃಜನಶೀಲತೆ, ಕಲ್ಪನಾ ಶಕ್ತಿಯನ್ನು ಪ್ರಚೋದಿಸುವಂತೆ ಪದ್ಯ ಬೋಧನೆ ಮಾಡುವುದಕ್ಕೆ ಶಿಕ್ಷಕರಿಗೆ ಅನೇಕ ಸವಾಲುಗಳು ಎದುರಾಗುತ್ತೀವೆ. ಪ್ರಯುಕ್ತ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಳ್ಳಲು ಸಂಶೋಧನೆಯನ್ನು ಕೈಗೊಳ್ಳಲಾಯಿತು.

1. ಶಿಕ್ಷಕರು ಪದ್ಯ ಬೋಧನೆ ಬಗ್ಗೆ ಹೊಂದಿರುವ ದೃಷ್ಟಿಕೋನ ಅಥವಾ ವಿಚಾರವೇನು ?

2. 6ನೇ ಮತ್ತು 7ನೇ ತರಗತಿಯ ಮಕ್ಕಳಿಗೆ ಪದ್ಯ ಬೋಧನೆ ಮಾಡುವಲ್ಲಿ ಶಿಕ್ಷಕರು ಯಾವ ಸವಾಲುಗಳನ್ನು ಎದುರಿಸುತ್ತಿರುವರು ?

3. ಮಕ್ಕಳು ಸ್ವತಂತ್ರವಾಗಿ ಅರ್ಥೈಸುವದು, ವಿಚಾರ ಮಾಡುವದು ಮತ್ತು ಸಂಬಂಧಿಕರಿಸುವ ಸಾಮರ್ಥ್ಯ ಹೊಂದುವಂತೆ ಪದ್ಯ ಬೋಧನೆ ಇದೆಯೇ ?

4. ಪದ್ಯ ಬೋಧನೆ ಕುರಿತು ಶಿಕ್ಷಕರು ಬಯಸುವ ಅವಶ್ಯಕತೆಗಳೇನು ?

## 1.5 : ಸಂಶೋಧನೆಯ ಉದ್ದೇಶ :

ಪ್ರಸ್ತುತ ಸಂಶೋಧನೆಯು ಈ ಕೆಳಗಿನ ಉದ್ದೇಶ ಹೊಂದಿದೆ,

1. ಶಿಕ್ಷಕರು ಮಕ್ಕಳು ಸ್ವತಂತ್ರವಾಗಿ ಅರ್ಥೈಸುವದು ಮತ್ತು ಸಂಬಂಧಿಕರಿಸುವ ಸಾಮರ್ಥ್ಯ ಹೊಂದುವಂತೆ ಬೋಧಿಸುವದು.
2. ಪದ್ಯ ಬೋಧನೆ ಕುರಿತು ಶಿಕ್ಷಕರ ವಿಚಾರವೇನೆಂಬುವದು.
3. ವಿದ್ಯಾರ್ಥಿಗಳು ಸ್ವತಂತ್ರವಾಗಿ ವಿಚಾರ ಮಾಡುವ, ತನ್ನ ಕಲ್ಪನಾ ಶಕ್ತಿಯನ್ನು, ಭಾವನೆಗಳನ್ನು ಸೃಜನಾತ್ಮಕವಾಗಿ ಬರವಣಿಗೆಯ ಮೂಲಕ ಪ್ರದರ್ಶಿಸಲು ಶಿಕ್ಷಕರು ಅರ್ಥಪೂರ್ಣವಾಗಿ ಪದ್ಯ ಬೋಧನೆ ಮಾಡುವದು ಹಾಗೂ ಪರಿಣಾಮಕಾರಿಯಾಗಿ ಸಾಧನಗಳ ಬಳಸಿಕೊಳ್ಳುವಂಥ ವಾತಾವರಣ ತರಗತಿಯಲ್ಲಿ ಇದೆಯೇ ಎಂಬುದನ್ನು ತಿಳಿದುಕೊಳ್ಳುವುದು.
4. ಮಕ್ಕಳು ಪದ್ಯ ಕಲಿಕೆಯಲ್ಲಿ ಆಸಕ್ತಿ ತೋರುವದು.
5. ಪದ್ಯ ಬೋಧನೆ ಮಕ್ಕಳ ಸೃಜನಶೀಲತೆಗೆ ಪ್ರೇರಕವಾಗುವದು.
6. ಇದು ಮಕ್ಕಳ ಕಲ್ಪನಾ ಶಕ್ತಿ, ಸಂವೇದನೆಗಳಿಗೆ ಸಹಕಾರಿಯಾಗುವದು.
7. ಕನ್ನಡ ಭಾಷೆಯ ಜ್ಞಾನವನ್ನು ಹೊಂದಲು ಇದು ಸಹಾಯಕವಾಗುವದು.

# ಅಧ್ಯಾಯ : 2 ಸಾಹಿತ್ಯ ಅವಲೋಕನ

## 1.1 : ಪೀಠಿಕೆ :

ಸಂಬಂಧಿತ ಸಾಹಿತ್ಯದ ಅವಲೋಕನ ಮಾಡುವುದು ಸಂಶೋಧಕನಿಗೆ ಅಗತ್ಯವಾಗಿರುವಂಥದ್ದು. ಕಾರಣ ಸಮಸ್ಯೆಯನ್ನು ವಿವರಿಸಿದ ನಂತರ ಉದ್ದೇಶ ತಿಳಿದು ಸಮಸ್ಯೆಗೆ ಸಂಬಂಧಿಸಿದಂತೆ ಸಾಹಿತ್ಯದ ಅವಲೋಕನ ಮಾಡುವುದು ಸಂಶೋಧಕನಿಗೆ ಅತ್ಯಂತ ಉಪಯುಕ್ತಕಾರಿಯಾಗಿದೆ. ಇದು ಸಂಶೋಧಕನಿಗೆ ಸಂಶೋಧನೆಗೆ ಬೇಕಾಗುವ ಹೆಚ್ಚಿನ ಮಾಹಿತಿಯನ್ನು, ಜ್ಞಾನವನ್ನು , ಸಮಸ್ಯೆ ಬಿಡಿಸುವ ಕೌಶಲ್ಯವನ್ನು ಹಲವಾರು ರೀತಿಯಿಂದಲೂ ವಿಚಾರ ಮಾಡುವ ಗುಣ ಬೆಳೆಸುತ್ತದೆ.

## 1.2 : ಅರ್ಥ ಮತ್ತು ವ್ಯಾಖ್ಯಾನ :

ನಾವು ಕೈಗೊಳ್ಳುವ ಸಂಶೋಧನಾ ವಿಷಯಕ್ಕೆ ಸಂಬಂಧಿತ ಸಾಹಿತ್ಯದ ಅಧ್ಯಯನವು ನಮ್ಮ ಸಂಶೋಧನಾ ಕಾರ್ಯಕ್ಕೆ ಸಂಬಂಧಿಸಿದಂತೆ ಪೂರ್ವಜ್ಞಾನವು ತಿಳುವಳಿಕೆಯನ್ನು ಪಡೆಯಲು ಸಹಾಯಕವಾಗಿದೆ. ಈ ರೀತಿಯ ಅಧ್ಯಯನವು ನೈಜ ಯೋಜನೆ ಕೈಗೊಳ್ಳಲು, ಅಧ್ಯಯನದ ನಿರ್ವಹಣೆಗೆ ಅಗತ್ಯವಾದ ಪೂರ್ವ ಅವಶ್ಯಕತೆಯಾಗಿದೆ.

**ಅರ್ಥ :–**

ಸಾಹಿತ್ಯವೆಂದರೆ ನಮ್ಮ ಸಂಶೋಧನಾ ವಿಷಯಕ್ಕೆ ಸಂಬಂಧಿಸಿದಂತೆ ನಾವು ಹಾಕಿಕೊಂಡಿರುವ ನಿರ್ದಿಷ್ಟ ಉದ್ದೇಶಗಳಿಗೆ ಅನುಗುಣವಾಗಿ ನಿರ್ದಿಷ್ಟ ಕ್ಷೇತ್ರದಲ್ಲಿ ಸಂಶೋಧನೆಯನ್ನು ನಡೆಸುವುದರ ಮೂಲಕ ಮಾಹಿತಿಯನ್ನು ಪಡೆದುಕೊಳ್ಳುವುದರ ಮೂಲಕ ವಿಷಯವನ್ನು ಅರ್ಥೈಸಿಕೊಳ್ಳುವ ಒಂದು ಜ್ಞಾನಕ್ಕೆ ಸಾಹಿತ್ಯ ಎನ್ನುವರು.

**ಪುನರಾವಲೋಕನ :–**

ಪಡೆದಂತಹ ಮಾಹಿತಿಯನ್ನು ಸಂಘಟಿಸುವುದು ಮತ್ತು ಸಂಶ್ಲೇಷಿಸುತ್ತಾ ತನ್ನ ಪ್ರಶ್ನೆಗಳಿಗೆ ಸ್ವತ: ಉತ್ತರ ಕಂಡುಕೊಳ್ಳುವುದು.

**ವ್ಯಾಖೆಗಳು :–**

ಅ) ಸ್ಕಾಟರ್ ಮತ್ತು ಗುಡ್ ಎಚ್.ಎಲ್ ಪ್ರಕಾರ " ಸಾಹಿತ್ಯಕ್ಕೆ ಸಂಬಂಧಪಟ್ಟ ಪುನರಾವಲೋಕನ ಎಂದರೆ ಒಬ್ಬ ಉತ್ತಮ ವೈದ್ಯನು ಹೇಗೆ ಹೊಸಹೊಸ ಔಷಧಿಗಳನ್ನು ಕಾಯಿಲೆಗೆ ಕಂಡುಹಿಡಿಯುತ್ತಾನೋ ಹಾಗೆಯೇ ಶಿಕ್ಷಣದ ಸಮಸ್ಯೆಗಳಿಗೆ ವಿದ್ಯಾರ್ಥಿ ಸಂಶೋಧಕನು ಸಹ ತಮ್ಮ ಸಮಸ್ಯೆಯ ಕುರಿತು ಮಾಹಿತಿಯು ಎಲ್ಲಿ ಲಭ್ಯವಿದೆ ಎಂಬುದನ್ನು ತಿಳಿದು ಅದನ್ನು ಉಪಯೋಗಿಸಿಕೊಳ್ಳುವುದಾಗಿದೆ."

ಬ) ಚಾರ್ಟರ್. ದಿ. ಗುಡ್‌ರ ಪ್ರಕಾರ " ಇದು ಸಂಶೋಧಕನಿಗೆ ಜ್ಞಾನದ ಉಗ್ರಾಣವನ್ನು ತೆಗೆಯುವ ಒಂದು ಬೀಗದ ಕೈ ಇದ್ದಂತೆ. ಇದರಿಂದ ಪ್ರಾಕಲ್ಪನೆ ರಚನೆ , ಸಮಸ್ಯೆಯ ವ್ಯಾಖ್ಯಾನ, ಸಮಸ್ಯೆಯ ಪರಿಹಾರ ಇದನ್ನು ಕಂಡುಕೊಳ್ಳಲು ಅನುಸರಿಸಬೇಕಾದ ವಿಧಾನದ ಹಿನ್ನಲೆ ಇವುಗಳನ್ನು ಒದಗಿಸುತ್ತವೆ. ದೊರೆತಂತಹ ಫಲಿತಾಂಶದ ಅರ್ಥೈಸುವಿಕೆ ಹಾಗೂ ವಿಷಯದ ಬಗ್ಗೆ ಇತರರು ನಡೆಸಿದ ಸಂಶೋಧನೆಯ ಫಲಿತಾಂಶವನ್ನು ಹೋಲಿಸಿ ತರ್ಕಬದ್ಧ ಮಾಹಿತಿ ಒದಗಿಸುತ್ತದೆ.

## 2.3 : ಸಂಬಂಧಿತ ಸಾಹಿತ್ಯದ ಅವಲೋಕನದ ಅವಶ್ಯಕತೆ :

ಒಬ್ಬ ಸಂಶೋಧಕನು ತಾನು ಸಂಶೋಧನೆಯನ್ನು ಮಾಡಲು ಒಂದು ವಿಷಯ ವಸ್ತುವನ್ನು ಆಯ್ಕೆ ಮಾಡಿಕೊಂಡಾಗ ಸಂಶೋದನೆಗೆ ಸಂಬಂಧಿಸಿದ ಸಾಮಗ್ರಿಗಳು , ಆಕರಗಳು ಎಲ್ಲೆಲ್ಲಿ ಸಿಗುತ್ತವೆ ಎಂದು ಹುಡುಕಲು ಪ್ರಾರಂಭಿಸಿ ಮಾಹಿತಿ ಸಂಗ್ರಹಿಸುವನು. ಇದಕ್ಕೆ ಪೂರಕ ಸಾಹಿತ್ಯದ ಅವಲೋಕನ ಎನ್ನುವರು. ಹಿಂದಿನ ಜ್ಞಾನದ ತಳಹದಿಯ ಮೇಲೆ ಹೊಸ ಜ್ಞಾನವನ್ನು ನೀಡುವುದು ಸಂಶೋಧನೆಯ ಕಾರ್ಯವಾಗಿದೆ. ಪ್ರಯುಕ್ತ ಸಂಶೋಧಕನು ಅನೇಕ ಕಡೆಗಳಿಂದ ಮಾಹಿತಿಯನ್ನು ಸಂಗ್ರಹಿಸಿ ಅದರಲ್ಲಿಯ ಮುಖ್ಯ ವಿಷಯಗಳನ್ನು ಮಾತ್ರ ಆಯ್ಕೆ ಮಾಡಿಕೊಂಡಿರುವ ವಿಷಯಕ್ಕೆ ಆಧಾರವಾಗಿ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಆ ವಿಷಯದ ಮೇಲೆ ಬೆಳಕು ಚೆಲ್ಲುವಂತಹ ಅನೇಕ ಗ್ರಂಥಗಳು , ದಾಖಲೆಗಳು , ನಿಯತಕಾಲಿಕಗಳು , ವಿಶ್ವಕೋಶ ನಿಘಂಟುಗಳು ಗ್ರಂಥಾಲಯದಲ್ಲಿ ದೊರೆಯುತ್ತವೆ.

## 2.4 : ಸಂಬಂಧಿತ ಸಾಹಿತ್ಯದ ಅವಲೋಕನದ ಮಹತ್ವ :

ಪ್ರತಿ ಸಂಶೋಧನೆಗೆ ಸಂಬಂಧಿತ ಸಾಹಿತ್ಯದ ಅವಲೋಕನವು ಮಾರ್ಗದರ್ಶಿಯಾಗಿ ಸಹಾಯ ಮಾಡುತ್ತದೆ. ಹೀಗಾಗಿ ಸಂಶೋಧನೆಯ ವಿವಿಧ ಹಂತಗಳಲ್ಲಿ ಸಂಬಂಧಿತ ಸಾಹಿತ್ಯದ ಅವಲೋಕನದ ಮಹತ್ವವನ್ನು ಈ ಕೆಳಗಿನಂತೆ ಕಾಣಬಹುದು.

1. ಸಂಶೋಧಕನಿಗೆ ದೊರಕಿರುವ ಸಮಯಾವಧಿಗೆ ಪೂರಕವಾಗಿ ತನ್ನ ಸಮಸ್ಯೆ ಕುರಿತು ಒಂದು ನಿರ್ಧಿಷ್ಟ ಯೋಜನೆ ತಯಾರಿಸಲು ಹಾಗೂ ಉತ್ತಮವಾಗಿ ವ್ಯಾಖ್ಯಾನಿಸಲು ಸಹಾಯಕವಾಗುತ್ತದೆ.
2. ಸಂಶೋಧನಾಕಾರರು ಸಮಸ್ಯೆಯನ್ನು ಕುರಿತು ಏಕೆ , ಹೇಗೆ ಎಂಬುದನ್ನು ಕಂಡುಕೊಳ್ಳಲು ಸಹಾಯ ಮಾಡುತ್ತದೆ.
3. ಸಂಶೋಧಕನು ಸಂಬಂಧಿತ ಸಾಹಿತ್ಯದ ಅವಲೋಕನ ಮಾಡುವುದರಿಂದ ಹಿಂದಿನ ಸಂಶೋಧನೆಗಳಲ್ಲಿ ಯಾವ ಅಂಶಗಳನ್ನು ಕೈಬಿಟ್ಟಿದ್ದಾರೆ ಎಂದು ಗಮನಿಸಿ , ತನ್ನ ಸಂಶೋಧನೆಯಲ್ಲಿ ಉತ್ತಮ, ಸಾಧಾರಣ ಮತ್ತು ಸೃಜನಾತ್ಮಕವಾದ ವಿಚಾರಗಳನ್ನು ಹೊರಹೊಮ್ಮಿಸಲು ಸಹಾಯಕವಾಗಿದೆ.
4. ಇದು ಸಮಸ್ಯೆಯ ಕುರಿತು ವಿಚಾರಗಳನ್ನು , ಸಿದ್ಧಾಂತಗಳನ್ನು ಮತ್ತು ಪರಿಕಲ್ಪನೆಗಳನ್ನು ದೊರಕಿಸಿಕೊಡುತ್ತದೆ.
5. ಸಂಬಂಧಿತ ಸಾಹಿತ್ಯದ ಅವಲೋಕನವು ಸಂಶೋಧಕನು ತಾನು ಮಾಡುವ ಸಂಶೋಧನೆಯ ವಿಧಾನ , ವ್ಯಾಪ್ತಿ, ವಿಷಯ ಮತ್ತು ಬಳಸುವ ಹೊಸ ಕ್ರಮಗಳ ಕಡೆಗೆ ಒಳನೋಟ ಬಿಡಲು ಸಹಾಯಕವಾಗುತ್ತದೆ. ಹಾಗೂ ಇದು ಸಂಶೋಧನಾ ವಿಧಾನಗಳನ್ನು ಬಳಸಿಕೊಂಡು ಸಮಸ್ಯೆಗೆ ತಕ್ಕಂತೆ ಪರಿಹಾರವನ್ನು ಹುಡುಕಲು ಸಹಾಯಮಾಡುತ್ತದೆ.
6. ಇದು ಯಾವ ಸಂಖ್ಯಾಶಾಸ್ತ್ರದ ತಂತ್ರವನ್ನು ಬಳಸಿಕೊಂಡು ದತ್ತಾಂಶಗಳನ್ನು ಸಂಗ್ರಹಿಸಬೇಕೆಂಬುದನ್ನು ತಿಳಿಸುತ್ತದೆ.
7. ಸಂಶೋಧನಾ ತಂತ್ರಗಳ ತಯಾರಿಕೆ ಹಾಗೂ ಬಳಕೆ ,ಕ್ಷೇತ್ರ ಕಾರ್ಯದ ಸಮಯದಲ್ಲಿ ವಹಿಸಬೇಕಾದ ಎಚ್ಚರಿಕೆಗಳು, ಅನುಸರಿಸಬೇಕಾದ ಕ್ರಮಗಳ ಬಗ್ಗೆ ಮಾರ್ಗದರ್ಶನ ಹಾಗೂ ಸೂಚನೆಗಳು ದೊರೆಯುತ್ತವೆ.
8. ಸಂಶೋಧಕನು ತನ್ನ ಸಂಶೋಧನಾ ಲೇಖನದಲ್ಲಿ ನಿಗದಿತ ಕ್ಷೇತ್ರದಲ್ಲಿ ಕೈಗೆತ್ತಿಕೊಳ್ಳಬಹುದಾದ

ಸಂಶೋಧನೆಯ ಕುರಿತು ಸಲಹೆ , ಶಿಫಾರಸ್ಸು ನೀಡುವುದರಿಂದ ಮುಂದಿನ ಸಂಶೋಧನೆಗೆ ಸಹಾಯಕ ವಾಗುತ್ತದೆ.

## 2.5 : ಸಂಬಂಧಿತ ಸಾಹಿತ್ಯ ಅವಲೋಕನ :

ಅ) **ವಿಜಯಕರ್ನಾಟಕ ಪತ್ರಿಕೆ, ಚಿಕ್ಕಬಳ್ಳಾಪೂರ ದಿನಾಂಕ : 04–10–2016 ರ ಪ್ರಕಟನೆ** : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಚಿಕ್ಕಬಳ್ಳಾಪೂರ ಹೊರವಲಯದಲ್ಲಿರುವ ವಿಶ್ವವಿದ್ಯಾಲಯ ಶಿಕ್ಷಣ ಕಾಲೇಜಿನಲ್ಲಿ ಅಕ್ಟೋಬರ 1 ರಿಂದ 3 ರವರೆಗೆ ಮೂರು ದಿನಗಳ ಕಾಲ ಆಯೋಜಿಸಿದ್ದ **" ಜನಮಾನಸದ ಪದ್ಯಗಳ ಪುನರಾವಲೋಕನ ಕಮ್ಮಟ"** ದ ಸಮಾರೋಪ ಕಾರ್ಯಕ್ರಮದಲ್ಲಿ, ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಪ್ರಾಧ್ಯಾಪಕ **ಡಾ.ಕಾ.ವೆಂ.ಶ್ರೀನಿವಾಸಮೂರ್ತಿ** ಸಂಪನ್ಮೂಲ ವ್ಯಕ್ತಿಯಾಗಿ ಮಾತನಾಡುತ್ತ "ಹಲವು ಗಾಯಕರು , ಸ್ವರ ಸಂಯೋಜಕರು , ಬೋಧಕರು ಗೀತೆಗಳಲ್ಲಿರುವ ನಾದದೋಷ ಮತ್ತು ಅರ್ಥದೋಷಗಳನ್ನು ಕಂಡುಕೊಳ್ಳುವಲ್ಲಿ ವಿಫಲರಾಗಿದ್ದಾರೆ. ಹಾಗಾಗಿ ಅನೇಕ ಗೀತೆಗಳು ಪರಿಣಾಮಕಾರಿಯಾಗಿ ಸಹೃದಯರನ್ನು ಮುಟ್ಟುತ್ತಿಲ್ಲ" ಎಂದು ಅಭಿಪ್ರಾಯ ಪಟ್ಟರು.

ಆ) **' ಹಲಗೆ ಬಳಪ '** ಎಂಬ ಕೃತಿಯಲ್ಲಿ **" ಇಷ್ಟಕ್ಕೂ ಒಂದು ಚೆಂದದ ಕವಿತೆ ಓದೋದು ಹೇಗೆ** ? " ಎಂಬ ಭಾಗದಲ್ಲಿ ಸಾಹಿತ್ಯದ ಬಗ್ಗೆ ಬರೆಯುವವರೆಲ್ಲ ಅದನ್ನು ಶಾಸ್ತ್ರೀಯವಾಗಿ ವಿವರಿಸುವುದಕ್ಕೆ ಹೋಗಿರುತ್ತಾರೆ. ವಿವರಿಸ ತೊಡಗಿದೊಡನೆ ಕವಿತೆ ಸೂತ್ರವಾಗುತ್ತದೆ, ಲೆಕ್ಕಾಚಾರವಾಗುತ್ತದೆ, ಅದೊಂದು ಕೈಗೆಟುಕದ ನಿಗೂಢದಂತೆ ಭಾಸವಾಗತೊಡಗುತ್ತದೆ. ಅದನ್ನು ಅಷ್ಟೇಲ್ಲ ಗೊಂದಲಗೊಳಿಸದೇ ಓದಿಕೊಳ್ಳುವುದು ಹೇಗೆ ಅದರ ಅರ್ಥವನ್ನು ಗ್ರಹಿಸುವುದು ಹೇಗೆ? ಇತ್ಯಾದಿ ಪ್ರಶ್ನೆಗಳನ್ನು ಕುರಿತು ಬೇಂದ್ರೆಯವರ **'ಜೋಗಿ'** ಕವಿತೆಯ ಮೂಲಕ ಕಾವ್ಯದ ಉತ್ಕರ್ಷ ಮತ್ತು ಕವಿತೆ ನೀಡುವ ಹರ್ಷದ ಕುರಿತು ತಿಳಿಸಿರುವರು. ಹಾಗೂ ಕವಿತೆಗೆ ಅರ್ಥವಿಲ್ಲ. ಅದು ಅರ್ಥ ಪಡೆದುಕೊಳ್ಳುವುದು ಓದುವವನ ಮನಸ್ಸಿನಲ್ಲಿ, ಬದುಕಿನಲ್ಲಿ. ಹೀಗಾಗಿ ಓದುಗನಿಗೆ ಅನ್ನಿಸಿದ್ದೇ ಸರಿ, ಅರ್ಥವಾದಷ್ಟೇ ಕವಿತೆ ಎಂದು ಹೇಳಿದುದು.

ತರಗತಿಯಲ್ಲಿ ಇದಕ್ಕೆ ಅವಕಾಶವಿದ್ದರೆ ಕೆಲವು ಮಕ್ಕಳು ಗುರುಗಳಿಗೂ ಆಶ್ಚರ್ಯವಾಗುವಂತಹ ವಿಶ್ಲೇಷಣೆ ಕೊಡುವ ಸಾಧ್ಯತೆ ಇರುತ್ತದೆ.

ಇ) ಇಂಗ್ಲಿಷನಲ್ಲೂ ಸಹ ನಮಗೆ ಪದ್ಯ ಬೋಧನೆ ಬಗ್ಗೆ ಸಾಹಿತ್ಯ ಸಿಗುವದು. ಒಛ್ಝಿಚಜಟ ಖಥಜಟ ಎಂಬುವವರು ಬರೆದ **' What is Poetry? – The essential guide to reading & writing poems '** ಎಂಬ ಕೃತಿಯಲ್ಲಿ ಇವರು

**' What is poetry '** ಹಾಗೂ **' What can you do with a poem? '** ಎಂಬ ಅಧ್ಯಾಯಗಳಲ್ಲಿ ಪದ್ಯದ ಕುರಿತು ಹಾಗೂ ಪದ್ಯವನ್ನು ಯಾವ ರೀತಿಯಲ್ಲಿ ಬೋಧಿಸುವು / ಓದುವುದು ಹಾಗೂ ಬರೆಯುವುದು ಎಂಬುದನ್ನು ಕುರಿತು ತಿಳಿಸಿರುವರು.

ಶಿಕ್ಷಕರು ಮಕ್ಕಳಿಗೆ ಪದ್ಯವನ್ನು ಒಂದಕ್ಕಿಂತ ಹೆಚ್ಚು ವೇಳೆ ಓದಲು ಪ್ರೋತ್ಸಾಹಿಸುವುದು. ಇದರಿಂದ ಮಕ್ಕಳಿಗೆ ಒಂದೇ ಪದ್ಯವನ್ನು ಅನೇಕ ವೇಳೆ ಓದುವದರಿಂದ ಹೊಸಹೊಸ ಅರ್ಥ, ವಿಚಾರಗಳು ಹೊಳೆಯುವದು. ಸ್ವತ: ಅನುಭವಕ್ಕೆ ಬರುವದನ್ನು ತಿಳಿಯುವದು. ಸ್ವತ: ಪ್ರಶ್ನಿಸಿಕೊಳ್ಳುವಂಥಹ ಸಾಮರ್ಥ್ಯ ಬರುವುದು. ಇದು ಮಗುವನ್ನು ಒಬ್ಬ ಉತ್ತಮ ವ್ಯಕ್ತಿಯಾಗುವ ದಿಶೆಯಲ್ಲಿ ಒಯ್ಯುವದು. ಅದೇ ರೀತಿ ಪದ್ಯವನ್ನು ಜೋರಾಗಿ ಓದುವುದರಿಂದ ಧ್ವನಿಯ ಏರಿಳಿತ ಹಾಗೂ ಭಾವಗಳನ್ನು ಉದಾಹರಣೆಗೆ ಸಂತೋಷ, ದು:ಖ, ಆಶ್ಚರ್ಯ, ಕೋಪ, ಶಾಂತಿ, ಹಾಸ್ಯ ಇತ್ಯಾದಿ ಅನೇಕ ಭಾವಗಳನ್ನು ಧ್ವನಿಯ ಮೂಲಕ ಪ್ರದರ್ಶಿಸುವುದನ್ನು ತಿಳಿಯಬಹುದು. ತಮ್ಮ ಭಾವನೆಗಳನ್ನು ಬೇರೆಯವರಿಗೆ ಸ್ಪಷ್ಟವಾಗಿ ಅರ್ಥವಾಗುವಂತೆ ಮಾತನಾಡಲು ಇದು ಸಹಾಯಕವಾಗುವದು. ಹಾಗೂ ಇದು ಮುಂದೆ ಕಲಾ ಕ್ಷೇತ್ರದಲ್ಲಿ ಭವಿಷ್ಯ ಕಟ್ಟಿಕೊಳ್ಳುವಂಥ ಮಕ್ಕಳಿಗೆ ಉತ್ತಮ ಅಭ್ಯಾಸವಾಗುವುದು.

ಈ) ಲೀಲಾ ಗರಡಿ, ನಿವೃತ್ತ ಅಧ್ಯಾಪಕಿ, **ಸಿ.ಎಫ್.ಎಲ್**. ಇವರ **" ಇಂದಿನ ದಿನಗಳಲ್ಲಿ ಭಾಷಾ ಬೋಧಕರು ಎದುರಿಸುತ್ತಿರುವ ಸಮಸ್ಯೆಗಳು ಹಲವಾರು "** ಎಂಬ ಲೇಖನದ **' ಮಕ್ಕಳಿಗೆ ಪದ್ಯಗಳು '** ಎಂಬ ಭಾಗದಲ್ಲಿ– ಮಕ್ಕಳ ಮನಸ್ಸಿನ ಮೇಲೆ ಪದ್ಯಗಳ ಪ್ರಭಾವ ಬಹಳ ಆಳವಾದದ್ದು. ಪದ್ಯದ ಆಶಯ, ಪ್ರಾಸ, ಭಾಷೆ, ಲಯ, ಪದಗಳ ಜೋಡಣೆ, ಹೊಸ ಪದಗಳ ಪರಿಚಯ ಎಲ್ಲವೂ ಅನಾಯಾಸವಾಗಿ ಒಟ್ಟಿಗೆ ಆಗುತ್ತದೆ. ಹಾಗೂ ಹಾಡನ್ನು ಹೇಳುವಾಗ ಸ್ಪಷ್ಟ ಉಚ್ಚಾರಣೆಯೊಂದಿಗೆ ಹೇಳುವುದನ್ನು ರೂಢಿಸಿದರೆ ಮಕ್ಕಳು ಭಾಷೆಯನ್ನು ಸರಿಯಾಗಿ ಮತ್ತು ಬೇಗ ಕಲಿಯುತ್ತಾರೆ. ಇದರ ಜೊತೆಗೆ ಪದಲಾಲಿತ್ಯ ಅವರ ಕಿವಿಯ ಮೇಲೆ ತನ್ನದೇ ಆದ ಪ್ರಭಾವವನ್ನು ಬೀರಿ ಸಾಹಿತ್ಯದಲ್ಲಿ ರುಚಿ ಬೆಳೆಸುತ್ತದೆ. ಮಕ್ಕಳಿಗೆ ಹೇಳಿಕೊಡಬೇಕಾದ ಪದ್ಯವನ್ನು ಮೊದಲು ಹೇಳಿಕೊಡುವವರು ಆನಂದಿಸಬೇಕಾದದ್ದು ಬಹು ಮುಖ್ಯ. ಅವರ ಆ ಆನಂದವೇ ಮಕ್ಕಳಿಗೆ ತಟ್ಟುತ್ತದೆ.

ಉ) ಅಂತರ್‌ಜಾಲದ Google App ನಲ್ಲಿ ಕವಿತೆಗಳ ಬಗ್ಗೆ ಹಾಗೂ ಭಾಷಾ ಬೋಧನೆಯಲ್ಲಿನ ಸವಾಲುಗಳು ಮತ್ತು ಕಂಡುಕೊಂಡಿರುವ ಪರಿಹಾರಗಳ ಬಗ್ಗೆ ಅನೇಕ ಸಾಹಿತ್ಯದ ಮಾಹಿತಿಗಳು ದೊರಕುತ್ತವೆ.

ಈ ಕುರಿತು ಕೆಲವು ಕೆಳಗಿನಂತಿವೆ,

1. ಅನಿವಾಸಿ – ಯು.ಕೆ ಕನ್ನಡಿಗರ ತಂಗುದಾಣ ಪ್ರಕಟಣೆ : ಶ್ರೀ. ಕೇಶವ ಕುಲಕರ್ಣಿ ಇವರ – ಇಷ್ಟಕ್ಕೂ ಈ 3 ಹಾಳಾದ ಕವಿತೆ ಎಂದರೇನು?

2. ಕಾವ್ಯವೆಂದರೇನು? ಆಧುನಿಕ ಕನ್ನಡ ಕಾವ್ಯದ ಬೆಳವಣಿಗೆ ಕುರಿತ ೧– ಮೈಸೂರು ವಿಶ್ವವಿದ್ಯಾನಿಲಯ ವಿಶ್ವಕೋಶ / ಕಾವ್ಯ

3. ಗೋಪಾಲಕೃಷ್ಣ ಅಡಿಗ ಎಂ ಇವರ – ಮೈಸೂರು ವಿಶ್ವವಿದ್ಯಾನಿಲಯ ವಿಶ್ವಕೋಶ

4. ಶ್ರೀ. ಬಿ.ಎನ್. ನಾಗರಾಜ ಭಟ್ಟರ – ಕಾವ್ಯಗರ್ಭ – ವಿಮರ್ಶಾಗ್ರಂಥ

5. 'ಸಂಪದ' ಹೊಸ ಚಿಗುರು ಹಳೆ ಬೇರು ಪ್ರಕಟಣೆ : ಶ್ರೀ. ವಿನೋದ್. ಪ್ರ. ಶಿರಾಳ ಶೆಟ್ಟಿ ಇವರ – ಕವನ ಮತ್ತು ಕವಿತೆಗಳಲ್ಲಿನ ವ್ಯತ್ಯಾಸಗಳು.

## 2.6 : ಉಪಸಂಹಾರ :

ಸಂಶೋಧಕರು ತಮ್ಮ ಅಧ್ಯಯನಕ್ಕೆ ಸಂಬಂಧಿತ ಹಲವು ಮಾಹಿತಿಗಳನ್ನು ತಿಳಿದಿಕೊಂಡು ತಮ್ಮ ಅಧ್ಯಯನವನ್ನು ಮುಕ್ತಾಯಗೊಳಿಸಿ, ಹೊಸ ಅನುಭವ ಪಡೆಯುವಲ್ಲಿ ಸಂಬಂಧಿತ ಸಾಹಿತ್ಯದ ಅವಲೋಕನವು ಪ್ರಮುಖ ಪಾತ್ರವಹಿಸುತ್ತದೆ.

# ಅಧ್ಯಾಯ : 3 ಸಂಶೋಧನಾ ಸ್ವರೂಪ

## 3.1 ; ಪೀಠಿಕೆ :

ಯಾವುದೇ ಒಂದು ವಿಷಯದ ಸಂಶೋಧನೆಯಲ್ಲಿ ಬರುವ ಒಂದು ಮುಖ್ಯವಾದ ಹಂತವೆಂದರೆ ಅದು ಸಂಶೋಧನಾ ಸ್ವರೂಪ. ಸಂಶೋಧನೆಯ ಉದ್ದೇಶ ಪೂರೈಸಲು ಸಂಶೋಧಕನು ತನ್ನ ಸಂಶೋಧನಾ ಕಾರ್ಯವನ್ನು ಸಮಗ್ರವಾಗಿ ಅವಲೋಕಿಸಿ ತಯಾರಿಸಿದ ಯೋಜನೆಯನ್ನು ಸಂಶೋಧನಾ ಕಾರ್ಯಕ್ಕೆ ಸಂಬಂಧಿಸಿದಂತೆ ಬೇರೆ ಬೇರೆ ಹಂತಗಳಲ್ಲಿ ಸಂಶೋಧಕನು ಯಾವಯಾವ ಕಾರ್ಯವನ್ನು ಕೈಗೆತ್ತಿಕೊಳ್ಳುತ್ತಾನೆಂಬುದನ್ನು ಸೂಚಿಸುವುದೇ ಮುಖ್ಯಕಾರ್ಯವಾಗಿದೆ.

ಶೈಕ್ಷಣಿಕ ಸಂಶೋಧನೆಗಳ ಕ್ಷೇತ್ರವು ಅತ್ಯಂತ ವ್ಯಾಪಕವು ಮತ್ತು ವಿಶಾಲವು ಆಗಿದೆ. ಸಂಶೋಧನೆಯಲ್ಲಿ ಸೂಕ್ತವಾದ ಪದ್ಧತಿಯನ್ನು ಬಳಸುವುದರಿಂದ ಸಂಶೋಧನಾ ಕಾರ್ಯದಲ್ಲಿ ಆಗುವ ಕಾಲ ಹಾಗೂ ಹಣದ ವ್ಯಯವನ್ನು ತಪ್ಪಿಸಬಹುದು. ಅಲ್ಲದೇ ಸೂಕ್ತ ತಂತ್ರವನ್ನು ಬಳಸಲು ನೆರವಾಗುವುದು. ಈ ಸಂಶೋಧನೆಯ ಅಧ್ಯಯನದಲ್ಲಿ ದತ್ತಾಂಶ ಸಂಗ್ರಹಿಸಲು ಬಳಸಿದ ವಿಧಾನಗಳು , ಪ್ರಶ್ನಾವಳಿ ಮುಂತಾದ ವಿವರಗಳನ್ನು ಒದಗಿಸಲಾಗಿದೆ. ದತ್ತಾಂಶ ಸಂಗ್ರಹಣೆಗಾಗಿ ನಮೂನೆಯನ್ನು ಆಯ್ಕೆ ಮಾಡಿ ಅದರಿಂದ ಮಾಹಿತಿ ಸಂಗ್ರಹಿಸಿರುತ್ತಾರೆ.

## 3.2 ನಮೂನೆಯ ಆಯ್ಕೆ :

ಮಾದರಿ ಎಂದರೆ ದೊಡ್ಡ ವಸ್ತುವಿನ ಸಣ್ಣ ಪ್ರತಿರೂಪ ಎಂದರ್ಥ. ಸಂಶೋಧನಾ ಕ್ಷೇತ್ರವನ್ನು ಯಥೋಚಿತ್ತವಾಗಿ ಪ್ರತಿನಿಧಿಸುವ ಮಾದರಿಯನ್ನು ಸಂಶೋಧಕ ಆಯ್ಕೆ ಮಾಡುವುದರಿಂದ ತನ್ನ ಸಂಶೋಧನಾ ಕ್ಷೇತ್ರದ ಬಗ್ಗೆ ಸ್ಪಷ್ಟವಾದ ಒಂದು ಚಿತ್ರಣವನ್ನು ಪಡೆಯಬಹುದು.

**ಪ್ರಸ್ತುತ ಸಂಶೋಧನೆಗೆ ಮಾದರಿಯ ಆಯ್ಕೆ ಈ ಕೆಳಗಿನಂತಿರುವದು ;**

ಸಂಶೋಧನಾ ದತ್ತಾಂಶಗಳನ್ನು ಸಂಗ್ರಹಣೆ ಮಾಡಲು ಪ್ರಶ್ನಾವಳಿಯನ್ನು ಹಿರಿಯ ಪ್ರಾಥಮಿಕ ಶಾಲೆಯಲ್ಲಿಯ 6ನೇ ಮತ್ತು 7ನೇ ತರಗತಿಗೆ ಕನ್ನಡ ಭಾಷೆಯನ್ನು ಬೋಧಿಸುವ ಶಿಕ್ಷಕರನ್ನು ಗಮನದಲ್ಲಿಟ್ಟುಕೊಂಡು ಪದ್ಯ ಬೋಧನೆ ಕುರಿತು ಅವರ ದೃಷ್ಟಿಕೋನ ಹಾಗೂ ಎದುರಿಸುವ ಸವಾಲುಗಳನ್ನು ಗಮನದಲ್ಲಿಟ್ಟುಕೊಂಡು ಹಾಗೂ ಸಂದರ್ಶನ ಮಾಡುವದನ್ನು ದೃಷ್ಟಿಯಲ್ಲಿರಿಸಿಕೊಂಡು ಪ್ರಶ್ನೆಗಳನ್ನು ತೆಗೆಯಲಾಗಿದೆ. ಪ್ರಶ್ನಾವಳಿಯು 15

ಪ್ರಶ್ನೆಗಳನ್ನು ಒಳಗೊಂಡಿದ್ದು ಮುಖ್ಯ ಹಾಗೂ ಉಪ ಪ್ರಶ್ನೆಗಳನ್ನು ಹೊಂದಿದೆ. ಕಲಬುರಗಿ ಜಿಲ್ಲೆಯ 8 ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಕನ್ನಡ ಶಿಕ್ಷಕರಿಗೆ ಆಯ್ಕೆ ಮಾಡಿಕೊಂಡು, ಈ ಪ್ರಶ್ನೆಗಳಿಗೆ ಅವರಿಂದ ಲಿಖಿತ ಪ್ರತಿಕ್ರಿಯೆಗಳನ್ನು ಪಡೆದು ದಾಖಲಿಸಲಾಗುವದು ಹಾಗೂ ಅವರ ಪ್ರತಿಕ್ರಿಯೆಗಳನ್ನು ವಿಶ್ಲೇಷಿಸಲಾಗುವದು.

ಹಾಗೂ ಸದರಿ 8 ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳ ಕನ್ನಡ ಬೋಧಿಸುವ ಶಿಕ್ಷಕರನ್ನು ಒಂದೆಡೆ ಸೇರಿಸಿ ಸಂಶೋಧನಾ ವಿಷಯ ಕುರಿತು ಸಂದರ್ಶನದಲ್ಲಿ ಹೆಚ್ಚು ಗಮನ ಸೆಳೆದ 4 ಪ್ರಶ್ನೆಗಳನ್ನು ಕುರಿತು ಸಾಮೂಹಿಕ ಚರ್ಚೆಗೆ ವ್ಯವಸ್ಥೆ ಮಾಡಿ, ಚರ್ಚೆಯನ್ನು ರಿಕಾರ್ಡ್ ಮಾಡಿಕೊಂಡು ದಾಖಲಿಸಲಾಗುವದು ಹಾಗೂ ವಿಶ್ಲೇಷಣೆ ಮಾಡಲಾಗುವದು.

## 3.3 ದತ್ತಾಂಶ ಸಂಗ್ರಹಣೆಗೆ ಬಳಸಿದ ಸಾಧನಗಳು :

ಸಂಶೋಧನೆಗಾಗಿ ನಾನು, ಸಂಶೋಧನೆಗೆ ಅರ್ಹವಾದ ವಿವಿಧ ಅಂಶಗಳನ್ನು ಒಳಗೊಂಡ ಲಿಖಿತ ಉತ್ತರಗಳನ್ನು ನೀರಿಕ್ಷಿಸುವ ಅರ್ಥಪೂರ್ಣ ಪ್ರಶ್ನಾವಳಿಯನ್ನು ಬಳಸಿಕೊಂಡಿರುತ್ತೇನೆ. ಸಂಶೋಧನಾ ವಿಷಯಕ್ಕೆ ಸಂಬಂಧಿಸಿದಂತೆ ಪ್ರಶ್ನೆಗಳನ್ನು ರೂಪಿಸಿ ಅವುಗಳ ಮುದ್ರಿತ ಪ್ರತಿಗಳನ್ನು 6ನೇ ಮತ್ತು 7ನೇ ತರಗತಿ ವಿದ್ಯಾರ್ಥಿಗಳಿಗೆ ಕನ್ನಡ ಭಾಷೆಯನ್ನು ಬೋಧಿಸುವ ಕನ್ನಡ ಶಿಕ್ಷಕರಿಗೆ ನೀಡಲಾಗುವದು ಹಾಗೂ ಅವರಿಂದ ಲಿಖಿತ ಉತ್ತರವನ್ನು ಪಡೆಯಲಾಗುವದು.

ಹಾಗೂ ಸಂಶೋಧನಾ ವಿಷಯಕ್ಕೆ ಸಂಬಂಧಿಸಿದಂತೆ ಸಂದರ್ಶನದಲ್ಲಿ ಹೆಚ್ಚು ಗಮನ ಸೆಳೆದ 4 ಪ್ರಶ್ನೆಗಳನ್ನು ಕುರಿತು ಸಾಮೂಹಿಕ ಚರ್ಚೆಗೆ ವ್ಯವಸ್ಥೆ ಮಾಡಿ, ಚರ್ಚೆಯನ್ನುರಿಕಾರ್ಡ್ ಮಾಡಿಕೊಳ್ಳಲಾಗುವದು.

**ಅ). ಮುದ್ರಿತ ಪ್ರಶ್ನಾವಳಿ :**

**ಆ). ಸಾಮೂಹಿಕ ಚರ್ಚೆ : (ಆಡೀಯೋ ರಿಕಾರ್ಡಿಂಗ ಮಾಡಿದ ಸಿಡಿ)**

**ದತ್ತಾಂಶ ನಮೂನೆ :**

| |
|---|
| **ಕರ್ನಾಟಕ ಸರಕಾರ**<br>**ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ** |

**ಶಿಕ್ಷಕರ ಹೆಸರು: – – – – – – – – – – – – – – ಫೋನ ಸಂಖ್ಯೆ:– – – – – – – – – –**
**ಶಾಲೆಯ ಹೆಸರಿ:– – – – – – – – – – – – – – ಡೈಸ್ ಸಂಖ್ಯೆ:– – – – – – – – – – – ಸೇವೆಗೆ ಸೇರಿದ ದಿನಾಂಕ:– – – – – – – – – – – – ಈ ಶಾಲೆಗೆ ಬಂದ ದಿನಾಂಕ:– – – – – –**
**ನೇಮಕಾತಿಯಾದ ವಿಷಯ:– – – – – – – – – – ಬೋಧಿಸುವ ವಿಷಯ :– – – – – – – – – –**
**ವಯಸ್ಸು (ವರ್ಷಗಳಲ್ಲಿ): – – – – – – – – – – – –**

**6ನೇ ಮತ್ತು 7ನೇ ತರಗತಿಯಲ್ಲಿ ಪದ್ಯ ಬೋಧನೆಕುರಿತುಕನ್ನಡ ಭಾಷಾ ಶಿಕ್ಷಕರು ಹೊಂದಿರುವದೃಷ್ಟಿಕೋನ ಮತ್ತು ಸವಾಲುಗಳನ್ನು ತಿಳಿದುಕೊಳ್ಳಲು ಪ್ರಶ್ನೆಗಳನ್ನು ನೀಡಲಾಗಿದೆ. ಅವುಗಳಿಗೆ ನಿಮ್ಮಅಭಿಪ್ರಾಯ ನೀಡುವ ಮೂಲಕ ಉತ್ತರಿಸಿ. [ ಅಭಿಪ್ರಾಯ = ಅಭಿ]**

| | |
|---|---|
| 1.<br>ಅಭಿ: | 6ನೇ ಮತ್ತು 7ನೇ ತರಗತಿ ಮಕ್ಕಳಿಗೆ ಕನ್ನಡ ಪದ್ಯ ಬೋಧನೆ ಮಾಡುವುದು ಸರಳ ಅಥವಾ ಕಷ್ಟ ? |
| 2.<br>ಅಭಿ: | ಏಕೆ ? |
| 3.<br>ಅಭಿ: | ಮಕ್ಕಳು ಸ್ವತಂತ್ರವಾಗಿಅರ್ಥೈಸುವದು ಮತ್ತು ಸಂಬಂಧೀಕರಿಸುವ ಸಾಮರ್ಥ್ಯ ಹೊಂದುವಂತೆ ಬೋಧಿಸಲುಆಗುತ್ತಿದೆಯೇ ? |
| 4.<br>ಅಭಿ: | ಪದ್ಯ ಬೋಧನೆಕುರಿತು ನಿಮ್ಮ ವಿಚಾರವೇನು ? |
| 5.<br>ಅಭಿ: | ವಿದ್ಯರ್ಥಿಗಳು ಸ್ವತಂತ್ರವಾಗಿ ವಿಚಾರ ಮಾಡುವುದನ್ನು ಪ್ರದರ್ಶಿಸಲು ಸಾಧ್ಯವಾಗುವಂತೆ ಶಿಕ್ಷಕರಿಗೆ ಅರ್ಥಪೂರ್ಣವಾಗಿ ಬೋಧನೆ ಮಾಡಲು ಸಾಧ್ಯವಾಗುತ್ತಿದೆಯೇ ? |
| 6.<br>ಅಭಿ: | ಹೌದೆಂದರೆಹೇಗೆ ? / ಇಲ್ಲವಾದರೆ ಏಕೆ ಇಲ್ಲ ? |
| 7.<br>ಅಭಿ: | ಪದ್ಯ ಬೋಧನೆಯಲ್ಲಿ ಪರಿಣಾಮಕಾರಿಯಾ ಸಾಧನಗಳನ್ನು ಬಳಸಿಕೊಳ್ಳುವಂಥ ವಾತಾವರಣತರಗತಿಯಲ್ಲಿಇದೆಯೇ ? |
| 8.<br>ಅಭಿ: | ಇಲ್ಲದಿದ್ದರೆ ಏಕೆ ಇಲ್ಲ ? |
| 9.<br>ಅಭಿ: | ಮಕ್ಕಳು ಪದ್ಯಕಲಿಕೆಯಲ್ಲಿ ಆಸಕ್ತಿ ತೋರುತ್ತಿದ್ದಾರೆಯೇ ? |
| 10.<br>ಅಭಿ: | ಪದ್ಯ ಬೋಧನೆಯಿಂದ ಹೊಸ ಪದಗಳ ಪರಿಚಯ ಮಾಡಲು ಸಾಧ್ಯವಾಗುತ್ತಿದೆತಯೇ ? |
| 11.<br>ಅಭಿ: | ಕನ್ನಡ ಭಾಷೆಯಜ್ಞಾನವನು ಹೊಂದಲುಇದು ಸಹಾಯಕವಾಗಿದೆಯೇ ? |
| 12.<br>ಅಭಿ: | ಪದ್ಯ ಬೋಧನೆ ಮಕ್ಕಳಿಗೆ ಆನಂದಕೊಡುವುದೇ ? ಹಾಗೂ ಸ್ವತಂತ್ರವಾಗಿಅರ್ಥ ಕಲ್ಪಿಸಿಕೊಳ್ಳುವಂಥ ಮತ್ತುಅದನ್ನು ಪ್ರದರ್ಶಸುವ ಸ್ವತಂತ್ರ್ಯತರಗತಿಕೋಣೆಯಲ್ಲಿ ವಿದ್ಯಾರ್ಥಿಗಳಿಗೆ ಇದೆಯೇ ? |
| 13. | ಶಿಕ್ಷಕರು ವಿದ್ಯಾರ್ಥಿಗಳಿಗೆ ಪದ್ಯವನ್ನುಒಂದಕ್ಕಿಂತ ಹೆಚ್ಚು ವೇಳೆ ಓದುವದಕ್ಕೆ, ಪ್ರತಿಸಾರಿಓದಿದ ನಂತರ ಮೂಡುವ ಹೊಸ ಅರ್ಥ, ವಿಚಾರ ಹಾಗೂ ಅನುಭವಕುರಿತು ತಿಳುವಳಿಕೆ ಮೂಡಿಸಲುಆಗುತ್ತಿದೆಯೇ ? |

| | |
|---|---|
| ಅಭಿ: | |
| 14.<br><br><br>ಅಭಿ: | ಪದ್ಯಗಳ ಮೂಲಕ ವಿದ್ಯಾರ್ಥಿಗಳನ್ನು ಸ್ವತಂತ್ರವಾಗಿ ವಿಚಾರ ಮಾಡುವಂತೆ ಮಾಡಲು ಸಾಧ್ಯವಾಗುತ್ತಿದೆಯೇ ? |
| 15.<br>ಅಭಿ: | ಪದ್ಯ ಬೋಧನೆಕುರಿತು ನಿಮ್ಮ ಅವಶ್ಯಕತೆಗಳೇನು ? |

ಶಿಕ್ಷಕರ ಸಹಿ ಮತ್ತು ದಿನಾಂಕ

## 3.4 ದತ್ತಾಂಶಗಳ ಸಂಗ್ರಹಣೆಯ ವಿಧಾನ :

ಪ್ರಸ್ತುತ ಸಂಶೋಧನಕ್ಕೆ **ಸಂದರ್ಶನ ವಿಧಾನವನ್ನು ಹಾಗೂ ಚರ್ಚಾ ವಿಧಾನವನ್ನು** ಬಳಸಿಕೊಳ್ಳಲಾಗಿದೆ. ಇಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ **"6ನೇ ಮತ್ತು 7ನೇ ತರಗತಿಯಲ್ಲಿ ಪದ್ಯ ಬೋಧನೆ ಕುರಿತು ಕನ್ನಡ ಭಾಷಾ ಶಿಕ್ಷಕರು ಹೊಂದಿರುವ ದೃಷ್ಟಿಕೋನ ಮತ್ತು ಸವಾಲುಗಳನ್ನು"** ಒಳಗೊಂಡ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಲಿಖಿತ ಉತ್ತರಗಳನ್ನು ಅಪೇಕ್ಷಿಸುವ ಪ್ರಶ್ನಾವಳಿಯನ್ನು ಸಿದ್ಧಪಡಿಸಿಕೊಂಡು ಆಯ್ಕೆ ಮಾಡಿಕೊಂಡ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಿಗೆ ನಾನು ಸ್ವತ: ಭೇಟಿ ನೀಡಿ 6ನೇ ಮತ್ತು 7ನೇ ತರಗತಿಗೆ ಕನ್ನಡ ವಿಷಯ ಬೋಧಿಸುವ ಶಿಕ್ಷಕರನ್ನು ಸಂದರ್ಶಿಸಿ ಮುದ್ರಿತ ಪ್ರಶ್ನಾವಳಿಯನ್ನು ನೀಡಲಾಯಿತು ಹಾಗೂ ಅವರಿಂದ ಲಿಖಿತ ಪ್ರತಿಕ್ರಿಯೆಯನ್ನು ಪಡೆಯಲಾಯಿತು.

ಸದರಿ 8 ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳ ಕನ್ನಡ ಬೋಧಿಸುವ ಶಿಕ್ಷಕರನ್ನು ಒಂದುಕಡೆ ಸೇರಿಸಿ ಸಂಶೋಧನಾ ವಿಷಯ ಕುರಿತು ಸಂದರ್ಶನದಲ್ಲಿ ಹೆಚ್ಚು ಗಮನ ಸೆಳೆದ 4 ಪ್ರಶ್ನೆಗಳನ್ನು ಕುರಿತು ಸಾಮೂಹಿಕ ಚರ್ಚೆಗೆ ವ್ಯವಸ್ಥೆ ಮಾಡಿ, ಚರ್ಚೆಯನ್ನು ರಿಕಾರ್ಡ್ ಮಾಡಿಕೊಂಡು ದಾಖಲಿಸಲಾಯಿತು.

ಸಾಮೂಹಿಕ ಚರ್ಚೆ ಸಂದರ್ಶನ ಶೈಲಿಗಿಂತ ಭೀನ್ನವಾಗಿರುತ್ತದೆ. ಇಲ್ಲಿ ಒಂದು ಸಣ್ಣ ಗುಂಪು ಇರುವುದರಿಂದ ಭಾಗವಹಿಸುವವರು ಹೆಚ್ಚು ಸಹಜವಾಗಿ ಸಂಭಾಷಣೆ ನಡೆಸಬಲ್ಲ ವಾತಾವರಣವಿರುತ್ತದೆ. ಜೊತೆಗೆ ಒಬ್ಬರು ಹೇಳುವಾಗ ಅದಕ್ಕೆ ಸಂಬಂಧಿಸಿದಂತೆ ಮತ್ತೊಬ್ಬರಿಗೆ ಬೇರೆ ಆಲೋಚನೆ ಬರುವ ಸಾಧ್ಯತೆ ಸಹ ಇರುತ್ತದೆ. ಮತ್ತು ಇನ್ನೂ ಕೆಲವರು ಇದರ ಬಗ್ಗೆ ತಮ್ಮ ಆಲೋಚನೆ/ಅನುಭವಗಳನ್ನು ಹಂಚಿಕೊಂಡು ಇಡೀ ಪ್ರಕ್ರಿಯೆಯೇ ಒಂದು ಕಲಿಕಾ ಅನುಭವವೇ ಆಗುವ ಸಾಧ್ಯತೆ ಇರುತ್ತದೆ. ಈ ರೀತಿಯ ಗುಂಪು ಚರ್ಚೆಯಲ್ಲಿ ಒಂದೇ ಸಮಯಕ್ಕೆ

ಹಲವರ ಅಭೀಪ್ರಾಯ ದೊರಕಿ ಸ್ಯಾಂಪಲ್ ಗಾತ್ರ ಸಹ ದೊಡ್ಡದಾಗುತ್ತದೆ. ಈ ಎಲ್ಲಾ ಕಾರಣಗಳಿಗಾಗಿ ನಾನು ಗುಂಪು ಚರ್ಚೆಯನ್ನು ಆಯ್ದುಕೊಂಡೆ.

### 3.5 : ದತ್ತಾಂಶ ಸಂಗ್ರಹಣೆ :

ನಾನು ಲಿಖಿತ ಪ್ರಶ್ನಾವಳಿಯನ್ನು ಸಿದ್ಧ ಪಡಿಸಿಕೊಂಡು ಕಲಬುರಗಿ ಜಿಲ್ಲೆಯ 8 ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ 6ನೇ ಮತ್ತು 7ನೇ ತರಗತಿಗೆ ಕನ್ನಡ ಬೋಧಿಸುವ 8 ಕನ್ನಡ ಭಾಷಾ ಶಿಕ್ಷಕರನ್ನು ಭೇಟಿ ಮಾಡಿ ಅವರ ಸಂದರ್ಶನ ಮಾಡಿ, ಅವರಿಗೆ ಲಿಖಿತ ಪ್ರಶ್ನಾವಳಿಯನ್ನು ನೀಡಿ ಅವರಿಂದ ಮಾಹಿತಿ ಪಡೆದುಕೊಂಡು ಬಂದಿರುತ್ತೇನೆ.

**ಅಧ್ಯಯನಕ್ಕೆ ಒಳಪಟ್ಟ ಕಲಬುರಗಿ ಜಿಲ್ಲೆಯ 8 ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳು**

| ಕ್ರ.ಸಂ. | ಶಾಲೆ ಹೆಸರು | ಶಾಲೆ ಡೈಸ್ ಸಂಖ್ಯೆ | ತಾಲೂಕ ಹೆಸರು |
|---|---|---|---|
| 1 | ಸ.ಮಾ.ಹಿ.ಪ್ರಾಥಮಿಕ ಶಾಲೆ ಮಹಾತ್ಮ ಬಸವೇಶ್ವರ ನಗರ ಕಲಬುರಗಿ,<br>ತಾ॥ ಕಲಬುರಗಿಉತ್ತರ, ಜಿಲ್ಲೆ॥ ಕಲಬುರಗಿ | 29041108720 | ಕಲಬುರಗಿಉತ್ತರ |
| 2 | ಸ.ಹಿ.ಪ್ರಾಥಮಿಕ ಶಾಲೆ ಓಂ ನಗರ ಕಲಬುರಗಿ, ತಾ॥ ಕಲಬುರಗಿಉತ್ತರ, ಜಿಲ್ಲೆ॥ ಕಲಬುರಗಿ | 29041108801 | ಕಲಬುರಗಿಉತ್ತರ |
| 3 | ಸ.ಮಾ.ಪ್ರಾಥಮಿಕ ಶಾಲೆ ವಿಜಯನಗರ ಕಲಬುರಗಿ, ತಾ॥ ಕಲಬುರಗಿಉತ್ತರ, ಜಿಲ್ಲೆ॥ ಕಲಬುರಗಿ | 29041107803 | ಕಲಬುರಗಿಉತ್ತರ |
| 4 | ಸ.ಹಿ.ಪ್ರಾಥಮಿಕ ಶಾಲೆ ಉಪಳಾಂವ ತಾ॥ ಕಲಬುರಗಿಉತ್ತರ, ಜಿಲ್ಲೆ॥ ಕಲಬುರಗಿ | 29041106201 | ಕಲಬುರಗಿಉತ್ತರ |
| 5 | ಸ. ಹಿ. ಪ್ರಾಥಮಿಕ ಬಬಲಾದ ತಾ॥ ಕಲಬುರಗಿಉತ್ತರ, ಜಿಲ್ಲೆ॥ ಕಲಬುರಗಿ | 29041100501 | ಕಲಬುರಗಿಉತ್ತರ |
| 6 | ಸ. ಹಿ. ಪ್ರಾಥಮಿಕ ಶಾಲೆ ಅಂಕಲಗಾ ತಾ॥ ಕಲಬುರಗಿಉತ್ತರ, ಜಿಲ್ಲೆ॥ ಕಲಬುರಗಿ | 29041100102 | ಕಲಬುರಗಿಉತ್ತರ |
| 7 | ಸ. ಹಿ. ಪ್ರಾಥಮಿಕ ಶಾಲೆ ಕುರಿಕೋಟಾ ತಾ॥ ಕಲಬುರಗಿಉತ್ತರ, ಜಿಲ್ಲೆ॥ ಕಲಬುರಗಿ | 29041104101 | ಕಲಬುರಗಿಉತ್ತರ |
| 8 | ಸ. ಹಿ. ಪ್ರಾಥಮಿಕ ಶಾಲೆ ರಾಮಜಿ ನಗರ ಕಲಬುರಗಿ, ತಾ॥ ಕಲಬುರಗಿಉತ್ತರ, ಜಿಲ್ಲೆ॥ ಕಲಬುರಗಿ | 29041108107 | ಕಲಬುರಗಿಉತ್ತರ |

# ಅಧ್ಯಾಯ : 4 ಫಲಿತಾಂಶ ಮತ್ತು ಚರ್ಚೆ

## 4.1 : ಪೀಠಿಕೆ :

ಸಂಶೋಧಕನ ಸಂಶೋಧನಾ ಕ್ಷೇತ್ರವನ್ನು ಆರಿಸಿದ ನಂತರ ಬರುವ ಮಹತ್ವಪೂರ್ಣವಾದ ಘಟ್ಟವೇ ದತ್ತಾಂಶಗಳ ಸಂಗ್ರಹಣೆ. ಸಂಶೋಧನಾ ವಿಷಯದ ಬಗ್ಗೆ ವಿವಿಧ ಮೂಲಗಳಿಂದ ಮಾಹಿತಿಯನ್ನು ಸಂಗ್ರಹಿಸುವ ಕ್ರಮಕ್ಕೆ ದತ್ತಾಂಶಗಳ ಸಂಗ್ರಹಣೆ ಎಂದು ಹೆಸರು. ನಾನು ಗೂಗಲ್ ನಿಂದ ಹಾಗೂ ಇತರ ಗ್ರಂಥಗಳಿಂದ ಅನುಷಾಂಗಿಕ ಮಾಹಿತಿ (ಖಜಭಿಂಟಜಚಿಡಿಥಿ ಆಚಿಣಚಿ) ಸಂಗ್ರಹಿಸಿದೆನು. ಇದಲ್ಲದೆ ನನ್ನ ಸಂಶೋಧನಾ ವಿಷಯವಾದ **" 6ನೇ ಮತ್ತು 7ನೇ ತರಗತಿಯಲ್ಲಿ ಪದ್ಯ ಬೋಧನೆ ಕುರಿತು ಕನ್ನಡ ಭಾಷಾ ಶಿಕ್ಷಕರು ಹೊಂದಿರುವ ದೃಷ್ಟಿಕೋನ ಮತ್ತು ಸವಾಲುಗಳು "** ಕುರಿತು ಪ್ರಶ್ನಾವಳಿ ಸಂದರ್ಶನ ಮತ್ತು ಸಮೂಹ ಚರ್ಚೆ ಮುಂತಾದ ಮಾಹಿತಿ ಸಂಗ್ರಹಣಾ ತಂತ್ರಗಳನ್ನು ಬಳಸಿ 6ನೇ ಮತ್ತು 7ನೇ ತರಗತಿಯಲ್ಲಿ ಕನ್ನಡ ಭಾಷೆಯನ್ನು ಬೋಧಿಸುವ ಶಿಕ್ಷಕರಿಂದಲೇ ನೇರವಾಗಿ ಮಾಹಿತಿಯನ್ನು ಸಂಗ್ರಹಿಸಿದೇನು.

ಸಂಶೋಧನಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಸಂಶೋಧನೆಯ ಯೋಜನೆಯನ್ನು ರೂಪುಗೊಳಿಸಿ ಅದರಂತೆ ದತ್ತಾಂಶಗಳ ಸಂಗ್ರಹಣಾ ಕಾರ್ಯವು ಯಶಸ್ವಿಯಾಗಿ ಮುಕ್ತಾಯಗೊಂಡರೆ ಸಂಶೋಧನಾ ಕಾರ್ಯವು ಬಹಳಷ್ಟು ಮಟ್ಟಿಗೆ ಪೂರ್ಣಗೊಂಡಿತು ಎಂದು ಭಾವಿಸಬಹುದು.

## 4.2 : ದತ್ತಾಂಶ ವಿಶ್ಲೇಷಣೆ ಮತ್ತು ಅರ್ಥೈಸುವಿಕೆ :

ವಿಶ್ಲೇಷಣೆ ಎಂದರೆ ಸಂಶೋಧನೆಯ ಸಂದರ್ಭದಲ್ಲಿ ಸಂಶೋಧಕನು ಸಂಗ್ರಹಿಸಿದ ದತ್ತಾಂಶಗಳನ್ನು ಕ್ರಮಬದ್ಧ ರೀತಿಯಲ್ಲಿ ಜೋಡಿಸಿ ಪಟ್ಟಿ ಮಾಡಿದ ದತ್ತಾಂಶಗಳನ್ನು ಅಧ್ಯಯನ ಮಾಡಿ ಅದರ ಒಳಗಿನ ಅರ್ಥಗಳನ್ನು ತಿಳಿಯುವ ಕಾರ್ಯಕ್ಕೆ ದತ್ತಾಂಶ ವಿಶ್ಲೇಷಣೆ ಎನ್ನುವರು.

ಕ್ಷೇತ್ರ ಅಧ್ಯಯನದಿಂದ ಸಂಗ್ರಹಿಸಲ್ಪಟ್ಟ ಮಾಹಿತಿಯನ್ನು ವಿಂಗಡಿಸಿ ವರ್ಗೀಕರಿಸಿ ಅದಕ್ಕೊಂದು ನಿಶ್ಚಿತವಾದ ರೂಪವನ್ನು ಕೊಡಬೇಕು. ಆಗ ಸಂಶೋಧನಾ ಮಾಹಿತಿಗೆ ಒಂದು ಅರ್ಥ ಬರುವದು. ಆದ್ದರಿಂದ ಸಂಶೋಧನಾ ಕಾರ್ಯದಲ್ಲಿ ಮಾಹಿತಿ ವಿಶ್ಲೇಷಣೆ ಅತ್ಯಂತ ಮಹತ್ವ ಪಡೆದುಕೊಂಡಿದೆ. ಸಂಶೋಧನಾ ಅಧ್ಯಯನಕ್ಕೆ ಅಂತಿಮ ರೂಪ ನೀಡುವ ಹಂತವೇ ಈ ವಿಶೇಷಣೆ ಹಂತವಾಗಿದೆ.

ಅವು ಯಾವುವೇಂದರ,

1) ಪರಿಷ್ಕರಣ :– ಪ್ರಶ್ನಾವಳಿಯಲ್ಲಿನ ಉತ್ತರಗಳ ಸಮಂಜಸತೆ, ಪೂರ್ಣತೆ ಮತ್ತು ಯಥಾರ್ಥತೆಗಳನ್ನು ಪರಿಶೀಲಿಸುವ ಒಂದು ಕ್ರಮವೇ ಮಾಹಿತಿಯ ಪರಿಷ್ಕರಣ.

2) ಸಂಕೇತಿಕರಣ :– ಪ್ರಶ್ನಾವಳಿಯ ಪ್ರಶ್ನೆಗಳಿಗೆ ಬರುವ ಪ್ರತಿಯೊಂದು ಪ್ರತಿಕ್ರಿಯೆಗೂ ಒಂದೊಂದು ಸಂಕೇತ ಸಂಖ್ಯೆಯನ್ನು ಕೊಡುವ ಕ್ರಮವೇ ಸಂಕೇತಿಕರಣವಾಗಿದೆ.

3) ಪಟ್ಟಿ ಮಾಡುವಿಕೆ :– ಮಾಹಿತಿಯ ಸಂಕೇತಿಕರಣದ ನಂತರ ಅದನ್ನು ಪಟ್ಟಿಯ ರೂಪದಲ್ಲಿ ಪ್ರಸ್ತುತ ಪಡಿಸುವ ಕ್ರಮಕ್ಕೆ ಪಟ್ಟಿ ಮಾಡುವಿಕೆ ಎನ್ನುವರು.

ಎಂಟು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಿಗೆ ಭೇಟಿಕೊಟ್ಟು 6ನೇ ಮತ್ತು 7ನೇ ತರಗತಿಯಲ್ಲಿ ಕನ್ನಡ ಬೋಧನೆ ಮಾಡುವ ಶಿಕ್ಷಕರ ಸಂದರ್ಶನ ಕೈಗೊಂಡು ಲಿಖಿತ ರೂಪದ ಪ್ರಶ್ನಾವಳಿಯಲ್ಲಿ ಅವರಿಂದ ಲಿಖಿತ ಪ್ರತಿಕ್ರಿಯೆಯನ್ನು ಸಂಗ್ರಹಿಸಲಾಯಿತು. ಪ್ರಸ್ತುತ ಸಂಶೋಧನೆಯಲ್ಲಿ ಸಂಶೋಧನಾ ಉದ್ದೇಶಕ್ಕೆ ತಕ್ಕಂತೆ ಮಾಹಿತಿಯ ವಿವರಣೆಯನ್ನು ಪಡೆದುಕೊಂಡು ನಂತರ ಬಂದಂತಹ ಮಾಹಿತಿಯನ್ನು ಪರಿಷ್ಕರಣೆಗೆ ಒಳಪಡಿಸಿ, ನಂತರ ಸಂಕೇತಿಸುವೆವು. ಆಗ ಎಂಟು ಶಾಲೆಗಳ ಕನ್ನಡ ಬೋಧನಾ ಶಿಕ್ಷಕರ ಪ್ರತಿಕ್ರಿಯೆಯನ್ನು ಆಧರಿಸಿ ಪದ್ಯಬೋಧನೆ ಬಗ್ಗೆ ಅವರ ದೃಷ್ಟಿಕೋನ ಮತ್ತು ಸವಾಲುಗಳನ್ನು ಕಂಡುಕೊಂಡೆನು.

## 4.3 : ಸಂಶೋಧನೆಯ ಪ್ರಶ್ನೆವಾರು ವಿಶ್ಲೇಷಣೆ :

6ನೇ ಮತ್ತು 7ನೇ ತರಗತಿಯಲ್ಲಿ ಕನ್ನಡ ಭಾಷಾ ಶಿಕ್ಷಕರು ಪದ್ಯ ಬೋಧನೆಯ ಬಗ್ಗೆ ಹೊಂದಿರುವ ದೃಷ್ಟಿಕೋನ ಮತ್ತು ಎದುರಿಸುತ್ತಿರುವ ಸವಾಲುಗಳನ್ನು ಗಮನದಲ್ಲಿರಿಸಿಕೊಂಡು ಸದರಿ ಶಿಕ್ಷಕರಿಂದ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಈ ರೀತಿಯಾಗಿ ಸಂಗ್ರಹಿಸಿದ ಮಾಹಿತಿಯು ಬೇರೆ ಬೇರೆ ಶಾಲೆಗಳೊಂದಿಗೆ ತುಲನಾತ್ಮಕ ತೆಗೆಯಲು ಸಹಾಯಕಾರಿಯಾಗಿದೆ.

ಎಂಟು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಿಗೆ ಭೇಟಿಕೊಟ್ಟು 6ನೇ ಮತ್ತು 7ನೇ ತರಗತಿಗೆ ಕನ್ನಡ ಭಾಷೆ ಬೋಧಿಸುವ ಶಿಕ್ಷಕರನ್ನು ಭೇಟಿಯಾಗಿ ಅವರ ಸಂದರ್ಶನ ಮಾಡಿ ಲಿಖಿತ ಪ್ರಶ್ನಾವಳಿಗೆ ಅವರು ನೀಡಿದ ಉತ್ತರವನ್ನು / ಅಭಿಪ್ರಾಯವನ್ನು ಕ್ರೋಢಿಕರಿಸಲಾಯಿತು. ಹಾಗೂ ಶಿಕ್ಷಕರಿಗೆ ಸಂದರ್ಶನದಲ್ಲಿ ಕೇಳಿದ ಪ್ರಶ್ನೆಗಳಲ್ಲಿ 4 ಪ್ರಮುಖ ಪ್ರಶ್ನೆಗಳನ್ನು ಕುರಿತು ಎಂಟು ಶಿಕ್ಷಕರನ್ನು ಒಂದುಕಡೆಗೆ ಸೇರಿಸಿ ಸಾಮೂಹಿಕ ಚರ್ಚೆ ಮಾಡಿ ಅವರ

ಅಭಿಪ್ರಾಯಗಳನ್ನು ಕ್ರೋಢಿಕರಿಸಲಾಯಿತು. ಹೀಗೆ ಸಂದರ್ಶನದಿಂದ ಮತ್ತು ಚರ್ಚೆಯಿಂದ ಶಿಕ್ಷಕರ ಅಭಿಪ್ರಾಯಗಳನ್ನು ಕ್ರೋಢಿಕರಿಸಿ ಒಟ್ಟಾರೆ ಅವರ ಪ್ರತಿಕ್ರಿಯೆಗಳ ವಿಶ್ಲೇಷಣೆಯಿಂದ ಈ ಕೆಳಗಿನಂಶಗಳು ಕಂಡು ಬಂದಿರುತ್ತವೆ.

## 1. ಶಿಕ್ಷಕರು ಪದ್ಯ ಬೋಧನೆ ಬಗ್ಗೆ ಹೊಂದಿರುವ ದೃಷ್ಟಿಕೋನ :

ಹಿರಿಯ ಪ್ರಾಥಮಿಕ ಶಾಲೆಯ 6ನೇ ಮತ್ತು 7ನೇ ತರಗತಿಯ ವಿದ್ಯಾರ್ಥಿಗಳಿಗೆ ಪದ್ಯ ಬೋಧಿಸುವ ಶಿಕ್ಷಕರು ಪದ್ಯ ಬೋಧನೆ ಸ್ವಲ್ಪ ಕಷ್ಟಕರವೆಂದು ಭಾವಿಸುವರು. ಪದ್ಯದಲ್ಲಿ ಬರುವ ಪದಗಳು ಹಾಗೂ ಭಾಷೆಯನ್ನು ಮಕ್ಕಳ ಆಡು ಮಾತಿನಲ್ಲಿ ಅವರಿಗೆ ಅರ್ಥೈಸುವದು ಸ್ವಲ್ಪು ಕಷ್ಟಕರವೆಂದು ಹಾಗೂ ಗ್ರಾಮ್ಯ ಭಾಷೆಯಲ್ಲಿದ್ದರೆ ಉತ್ತಮ ಎಂದು ಅಭಿಪ್ರಾಯ ವ್ಯಕ್ತಪಡಿಸುವರು. ಪದ್ಯದ ಹಿನ್ನಲೆ, ಕವಿಯ ಪರಿಚಯ, ಪದ್ಯ ಕುರಿತು ಕವಿಯ ಆಶಯ ತಿಳಿಯುವದು ಮತ್ತು ಮಕ್ಕಳಿಗೆ ಈ ಬಗ್ಗೆ ತಿಳುವಳಿಕೆ ನೀಡುವುದೇ ಪದ್ಯ ಬೋಧನೆ ಎಂದು ಸುಮಾರು ಶಿಕ್ಷಕರು ತಿಳಿದುಕೊಂಡಿರುವರು. ಶಿಕ್ಷಕರ ವಿಚಾರದಲ್ಲಿ ಪದ್ಯ ಸರಳವಾಗಿದ್ದರೆ ಮಕ್ಕಳು ಬೇಗನೆ ಅರ್ಥ ಮಾಡಿಕೊಳ್ಳುವಂತೆ ಬೋಧಿಸಬಹುದು. ಆದರೆ ಹಳೆಗನ್ನಡದ ಪದ್ಯಗಳ ಬೋಧನೆ ತುಂಬಾ ಕಷ್ಟ. ಕಾರಣ ಹಳೆಗನ್ನಡ ಪದಗಳನ್ನು ಅರ್ಥ ಮಾಡಿಕೊಂಡು ಮಕ್ಕಳ ಸಾಮರ್ಥ್ಯಕ್ಕನುಗುಣವಾಗಿ ಬೋಧಿಸುವುದು ಇವರಿಗೆ ತುಂಬಾ ಕಷ್ಟಕರವಾದುದು. ಪದ್ಯವನ್ನು ಲಯಬದ್ಧವಾಗಿ ಮತ್ತು ಸ್ವರಬದ್ಧವಾಗಿ ಹಾಡಿ ಬೋಧಿಸಿದರೆ ಮಕ್ಕಳಿಗೆ ಪದ್ಯದಲ್ಲಿ ಆಸಕ್ತಿ ಮೂಡುವುದು ಹಾಗೂ ದೀರ್ಘ ಕಾಲದವರೆಗೆ ಅವರಿಗೆ ನೆನಪಿನಲ್ಲಿ ಉಳಿಯುವುದು. ಆದರೆ ಹಾಡಲು ಬರಲಾರದಕಾರಣ ಮಕ್ಕಳಿಗೆ ಆಸಕ್ತಿ ಮೂಡುವಂತೆ ಪದ್ಯ ಬೋಧನೆ ಮಾಡುವದು ಕಷ್ಟಕರವಾದುದು.

ಈ ರೀತಿ ಕೆಲವು ಶಿಕ್ಷಕರು ಪದ್ಯ ಬೋಧನೆ ಕೇವಲ ಕವಿ ಹಾಗೂ ಕವಿತೆಯ ಪರಿಚಯ ಮಾಡುವದು ಎಂದು ಹಗುರವಾಗಿ ತೆಗೆದುಕೊಂಡರೆ ಅನೇಕ ಶಿಕ್ಷಕರು ಪದ್ಯದಲ್ಲಿ ಬರುವ ಪದಗಳು , ಭಾಷೆ ಹಾಗೂ ವಿಷಯವನ್ನು ಮಕ್ಕಳಲ್ಲಿ ಆಸಕ್ತಿ ಮೂಡುವಂತೆ ಬೋಧಿಸುವುದು ಕಷ್ಟಕರವೆಂದು ಭಾವಿಸುವರು.

## 2. ಶಿಕ್ಷಕರು ಪದ್ಯ ಬೋಧನೆಯಲ್ಲಿ ಎದುರಿಸುತ್ತಿರುವ ಸವಾಲುಗಳು :

ಶಿಕ್ಷಕರು ಮಕ್ಕಳ ಆಸಕ್ತಿ, ಕಲ್ಪನೆ, ಸಂವೇದನೆ ಹಾಗೂ ಸೃಜನಶೀಲತೆಗೆ ಅನುಗುಣವಾಗಿ ಬೋಧಿಸುವಲ್ಲಿ ಅನೇಕ ಸವಾಲುಗಳನ್ನು ಎದುರಿಸುತ್ತಿರುವದು ಶಿಕ್ಷಕರ ಸಂದರ್ಶನ ಮತ್ತು ಚರ್ಚೆಯ ವಿಶ್ಲೇಷಣೆಯಿಂದ ತಿಳಿದು ಬರುತ್ತದೆ. ಪದ್ಯದಲ್ಲಿಯ ಗ್ರಾಂಥಿಕ ಪದಗಳನ್ನು ಮಕ್ಕಳ ಆಡು ಮಾತಿನಲ್ಲಿ ತಿಳಿಸುವಲ್ಲಿ, ಹಳೆಗನ್ನಡ ಪದ್ಯಗಳನ್ನು

ಅದರಲ್ಲಿಯ ಹಳೆಗನ್ನಡ ಪದಗಳನ್ನು ಅರ್ಥೈಸಿಕೊಂಡು ಮಕ್ಕಳಿಗೆ ಬೋಧಿಸುವುದು ಶಿಕ್ಷಕರಿಗೆ ಕಷ್ಟವಾಗುತ್ತಿರುವದು. ಪೌರಾಣಿಕ ಹಾಗೂ ಐತಿಹಾಸಿಕ ವಿಷಯಾಧಾರಿತ ಪದ್ಯಗಳನ್ನು ಮಕ್ಕಳಿಗೆ ಬೋಧಿಸುವಲ್ಲಿ ಶಿಕ್ಷಕರಿಗೆ ವಿಷಯ ಜ್ಞಾನದ ಕೊರತೆಯಿಂದ ಕಷ್ಟವಾಗುತ್ತಿರುವದು. ಶಿಕ್ಷಕರಿಗೆ ಪದ್ಯವನ್ನು ಮಕ್ಕಳು ಕೇವಲ ಅರ್ಥೈಸುವಂತೆ ಬೋಧಿಸಲು ಆಗುತ್ತಿರುವದು ಆದರೆ ಅದನ್ನು ಇತರ ವಿಷಯಳೊಂದಿಗೆ, ಬದುಕಿನೊಂದಿಗೆ ಸಂಬಂಧಿಕರಿಸಿಕೊಳ್ಳುವ ಸಾಮರ್ಥ್ಯ ಮಕ್ಕಳು ಹೊಂದುವಂತೆ ಬೋಧಿಸಲು ಕಷ್ಟವಾಗುತ್ತಿರುವದು. ಪದ್ಯವನ್ನು ಹಾಡಿ ಬೋಧಿಸಿದರೆ ಮಕ್ಕಳಿಗೆ ಪದ್ಯದಲ್ಲಿ ಆಸಕ್ತಿ ಮೂಡಿಸಬಹುದು. ಆದರೆ ಅನೇಕ ಶಿಕ್ಷಕರಿಗೆ ಹಾಡಲು ಬರಲಾರದ್ದು ಅವರು ಎದುರಿಸುತ್ತಿರುವ ಸವಾಲುಗಳಲ್ಲಿ ಒಂದಾಗಿರುತ್ತದೆ. ಐತಿಹಾಸಿಕ, ಪೌರಾಣಿಕ ವಿಷಯಗಳ ನೈಜತೆಯನ್ನು ಮಕ್ಕಳಿಗೆ ಮನವರಿಕೆ ಮಾಡಿಕೊಡುವಲ್ಲಿಯೂ ಶಿಕ್ಷಕರಿಗೆ ತೊಂದರೆಯಾಗುತ್ತಿರುವದು.

**3. ಪದ್ಯ ಬೋಧನೆ ಮಕ್ಕಳು ಸ್ವತಂತ್ರವಾಗಿ ಅರ್ಥೈಸುವದು, ವಿಚಾರ ಮಾಡುವದು ಮತ್ತು ಸಂಬಂಧಿಕರಿಸುವ ಸಾಮರ್ಥ್ಯ ಹೊಂದುವಂತೆ ಇದೆಯೇ? :**

ಶಿಕ್ಷಕರ ಸಂದರ್ಶನ ಹಾಗೂ ಚರ್ಚೆಯ ವಿಶ್ಲೇಷಣೆಯಿಂದ ತಿಳಿದು ಬರುವುದೇನೆಂದರೆ, ಶಿಕ್ಷಕರಿಗೆ ಪದ್ಯವನ್ನು ಕೇವಲ ಮಕ್ಕಳಿಗೆ ಅರ್ಥೈಸುವಂತೆ ಬೋಧಿಸಲು ಆಗುತ್ತಿರುವದು. ಆದರೆ ಅದನ್ನು ಇತರ ವಿಷಯಗಳೊಂದಿಗೆ ಸಂಬಂಧಿಕರಿಸಿಕೊಳ್ಳುವ ಸಾಮರ್ಥ್ಯ ಮಕ್ಕಳು ಹೊಂದುವಂತೆ ಬೋಧಿಸುವಲ್ಲಿ ಕಷ್ಟವಾಗುತ್ತಿರುವದು. ಮಕ್ಕಳು ಸ್ವತಂತ್ರವಾಗಿ ವಿಚಾರ ಮಾಡುವಂತೆ ಪರಿಣಾಮಕಾರಿಯಾಗಿ ಬೋಧಿಸುವಲ್ಲಿ ಶಿಕ್ಷಕರಿಗೆ ಸಾಧನ ಸಲಕರಣೆಗಳ ಕೊರತೆಯು ಕಾರಣವಾಗುತ್ತಿರುವದು. ಹಾಗೂ ಲಭ್ಯ ಸಾಧನ ಸಲಕರಣೆಗಳನ್ನು ಬಳಸಿಕೊಂಡು ಪದ್ಯವನ್ನು ಪರಿಣಾಮಕಾರಿಯಾಗಿ ಬೋಧಿಸುವಲ್ಲಿ ಶಿಕ್ಷಕರು ಉದಾಸೀನತೆಯನ್ನು ಹೊಂದಿರುವದು ಕಂಡುಬರುತ್ತದೆ. ಐತಿಹಾಸಿಕ ಮತ್ತು ಪೌರಾಣಿಕ ವಿಷಯಗಳ ನೈಜತೆಯನ್ನು ಮಕ್ಕಳಿಗೆ ಮನವರಿಕೆ ಮಾಡಿಕೊಟ್ಟು ಆ ಮೂಲಕ ಮಕ್ಕಳು ಸ್ವತಂತ್ರವಾಗಿ ಅರ್ಥೈಸಿಕೊಳ್ಳುವುದಕ್ಕೆ, ವಿಚಾರ ಮಾಡುವದಕ್ಕೆ ಹಾಗೂ ಸಂಬಂಧಿಕರಿಸುದನ್ನು ತಿಳಿದುಕೊಳ್ಳುವುದಕ್ಕೆ ಶಿಕ್ಷಕರಿಗೆ ವಿಷಯ ಜ್ಞಾನದ ಕೊರತೆಯಿಂದ ಸಾಧ್ಯವಾಗುತ್ತಿಲ್ಲದಿರುವದು ಸಂದರ್ಶನ ಹಾಗೂ ಚರ್ಚೆಯಿಂದ ಕಂಡು ಬರುತ್ತಿದೆ.

## 4. ಪದ್ಯ ಬೋಧನೆ ಕುರಿತು ಶಿಕ್ಷಕರು ಬಯಸುವ ಅವಶ್ಯಕತೆಗಳೇನು ? :

ಪದ್ಯ ಬೋಧನೆಯನ್ನು ಸರಳೀಕರಣ ಮಾಡಿಕೊಂಡು ಪರಿಣಾಮಕಾರಿಯಾಗಿ ಬೋಧಿಸಲು ಹಾಗೂ ಮಕ್ಕಳಲ್ಲಿ ಪದ್ಯದ ಬಗ್ಗೆ ಆಸಕ್ತಿ ಮೂಡಿಸುವಂತೆ ಬೋಧಿಸಲು ಶಿಕ್ಷಕರು ಕೆಲವು ಅವಶ್ಯಕತೆಗಳ ಪೂರೈಕೆಯನ್ನು ಬಯಸುವರು. ಶಾಲೆಯ ಗ್ರಂಥಾಲಯದಲ್ಲಿ ಕವಿಗಳ ಆಕರ ಕೃತಿಗಳು, ಕವಿಗಳ ಬಗ್ಗೆ ಹಾಗೂ ಪದ್ಯ ಸಂಬಂಧಿತ ಪುಸ್ತಕಗಳು , ನಿಘಂಟುಗಳು ಇದ್ದರೆ ಕವಿತೆ ಹಾಗೂ ಕವಿಯ ಬಗ್ಗೆ ಸರಿಯಾದ ಹಾಗೂ ಉತ್ತಮವಾದ ತಿಳುವಳಿಕೆ ಮಕ್ಕಳಿಗೆ ನೀಡಬಹುದು. ಅದೇ ರೀತಿ ಕವಿ ಪರಿಚಯದ ಸಿಡಿಗಳು, ಪದ್ಯಗಳನ್ನು ಹೊಂದಿರುವ ಆಡಿಯೋ, ವೀಡಿಯೋಗಳು ಶಾಲೆಯ ಗ್ರಂಥಾಲಯದಲ್ಲಿದ್ದರೆ ಶಿಕ್ಷಕರಿಗೆ ಹಾಡಲು ಬಾರದಿದ್ದರೂ ಈ ಸಿಡಿ, ಆಡಿಯೋ, ವೀಡಿಯೋಗಳನ್ನು ಬಳಸಿ ಬೋಧಿಸಿದರೆ ಪರಿಣಾಮಕಾರಿಯಾಗುವದು. ಪದ್ಯದಲ್ಲಿಯ ಭಾಷೆ ಮತ್ತು ಪದಗಳು ಕ್ಲಿಷ್ಟವಾಗಿರದೆ ಸರಳವಾಗಿದ್ದರೆ ಮಕ್ಕಳಿಗೆ ಅರ್ಥೈಸಲು ಅನುಕೂಲವಾಗುವುದರಿಂದ 6ನೇ ಮತ್ತು 7ನೇ ತರಗತಿಯ ಮಕ್ಕಳಿಗೆ ಪದ್ಯಗಳು ಸರಳವಾಗಿರಬೇಕೆಂಬ ವಿಚಾರ ಶಿಕ್ಷಕರು ವ್ಯಕ್ತ ಪಡಿಸುವರು. ಹಳೆಗನ್ನಡ ಪದ್ಯಗಳನ್ನು ಹಾಗೂ ಪದಗಳನ್ನು ಶಿಕ್ಷಕರಿಗೆ ಅರ್ಥೈಸುವದು ಕಷ್ಟಕರವಾದುದರಿಂದ ಶಿಕ್ಷಕರಿಗೆ ಹಳೆಗನ್ನಡ ಕುರಿತು ತರಬೇತಿಯ ಅವಶ್ಯಕತೆ ಇರುತ್ತದೆ.

## 4.4 : ಸಂಶೋಧನೆಯ ಫಲಿತಾಂಶ :

**"6ನೇ ಮತ್ತು 7ನೇ ತರಗತಿಯಲ್ಲಿ ಪದ್ಯ ಬೋಧನೆ ಕುರಿತು ಕನ್ನಡ ಭಾಷಾ ಶಿಕ್ಷಕರು ಹೊಂದಿರುವ ದೃಷ್ಟಿಕೋನ ಮತ್ತು ಸವಾಲುಗಳು"** ಎಂಬ ವಿಷಯದ ಅಡಿಯಲ್ಲಿ ಈ ಸಂಶೋಧನೆಯನ್ನು ಕೈಗೊಳ್ಳಲಾಯಿತು. ಕನ್ನಡ ಭಾಷಾ ಶಿಕ್ಷಕರಿಗೆ ಅದರಲ್ಲೂ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಬೋಧಿಸುವ ಕನ್ನಡ ಭಾಷಾ ಶಿಕ್ಷಕರಿಗೆ ಮಕ್ಕಳ ವಯಸ್ಸು, ಸಾಮರ್ಥ್ಯ , ಅರ್ಥೈಸಿಕೊಳ್ಳುವ ಸಾಮರ್ಥ್ಯ, ಅವರ ಆಸಕ್ತಿ, ಕಲ್ಪನೆ, ಸಂವೇದನೆ ಹಾಗೂ ಸೃಜನಶೀಲತೆಗಳನ್ನು ಗಮನದಲ್ಲಿರಿಸಿ ಬೋಧನೆ ಮಾಡುವುದು ದೊಡ್ಡ ಸವಾಲಾಗಿದೆ. ಪದ್ಯಬೋಧನೆ ಕುರಿತು ಕನ್ನಡ ಭಾಷಾ ಶಿಕ್ಷಕರು ಹೊಂದಿರುವ ದೃಷ್ಟಿಕೋನ ಹಾಗೂ ಅವರು ಎದುರಿಸುತ್ತಿರುವ ಸವಾಲುಗಳನ್ನು ಕುರಿತು ತಿಳಿದುಕೊಳ್ಳುವುದು ಈ ಸಂಶೋಧೆಯ ಉದ್ದೇಶವಾಗಿತ್ತು. ಅದರಂತೆ ಸಂಶೋಧನೆಯ ಫಲಿತಾಂಶಗಳನ್ನು ಪಟ್ಟಿ ಮಾಡಲಾಗಿದೆ.

1. ಪದ್ಯವನ್ನು ಕುರಿತು ಕವಿಯ ಆಶಯ, ಕಲ್ಪನೆಯನ್ನು ತಿಳಿದುಕೊಂಡು ಮಕ್ಕಳಿಗೆ ಅವರ

ಸಾಮರ್ಥ್ಯಕ್ಕನು ಗುಣವಾಗಿ ಬೋದಿಸುವುದು ಹಾಗು ಅವರಿಗೆ ಅರ್ಥವಾಗುವಂತೆ ಹೇಳುವದು ಶಿಕ್ಷಕರಿಗೆ ಕಷ್ಟವಾಗಿರುವುದು.

2. ಮಕ್ಕಳಿಗೆ ಪದ್ಯವನ್ನು ಸ್ವತಂತ್ರವಾಗಿ ಅರ್ಥೈಸಿಕೊಳ್ಳುವಂತೆ ಹಾಗೂ ತಾವು ಅರ್ಥೈಸಿದ್ದನ್ನು ಮತ್ತೊಂದರೊಂದಿಗೆ ಸಂಬಂಧೀಕರಿಸುವದರೊಂದಿಗೆ ಅರ್ಥೈಸಿಕೊಳ್ಳುವಂತೆ ಬೋಧಿಸುವಲ್ಲಿ ಶಿಕ್ಷಕರು ಸವಾಲೆದುರಿಸುತ್ತಿರುವರು.
3. ಪದ್ಯದಲ್ಲಿ ಬಳಸುವ ಪದಗಳು ಅವು ನೀಡುವ ವಿಭಿನ್ನ ಅರ್ಥಗಳು ಅರ್ಥೈಸಿಕೊಂಡು ಮಕ್ಕಳಿಗೆ ಅರ್ಥವಾಗುವಂತೆ ಬೋಧಿಸುವಲ್ಲಿ ಕಷ್ಟವಾಗುತ್ತಿರುವದು.
4. ಮಕ್ಕಳಲ್ಲಿ ಪದ್ಯ ಕುರಿತು ಆಸಕ್ತಿ ಮೂಡಿಸುವಲ್ಲಿ ಶಿಕ್ಷಕರಿಗೆ ಅರ್ಥಪೂರ್ಣವಾಗಿ ವಾಚನ ಮಾಡುವಲ್ಲಿ ಕಷ್ಟವಾಗುತ್ತಿರುವದು ಹಾಗೂ ಸಂಗೀತದ ಜ್ಞಾನ ಬಹಳಷ್ಟು ಕನ್ನಡ ಶಿಕ್ಷಕರಲ್ಲಿ ಇಲ್ಲದಿರುವದು.
5. ಶಾಲೆಯಲ್ಲಿ ಸಾಧನೋಪಕರಣಗಳ ಕೊರತೆ ಇರುವುದು ಶಿಕ್ಷಕರು ಪದ್ಯ ಬೋಧನೆಯನ್ನು ಪರಿಣಾಮಕಾರಿಯಾಗಿ ಬೋಧಿಸಲು ಕಷ್ಟವಾಗುತ್ತಿರುವದು.
6. ಶಿಕ್ಷಕರಿಗೆ ಹಳೆಗನ್ನಡ ಪದಗಳನ್ನು ಮತ್ತು ಪದ್ಯಗಳನ್ನು ಅರ್ಥ ಮಾಡಿಕೊಂಡು ಮಕ್ಕಳಿಗೆ ಬೋಧಿಸುವಲ್ಲಿ ಕಷ್ಟವಾಗುತ್ತಿರುವದು.
7. ಮಕ್ಕಳ ಸೃಜನಶೀಲತೆ, ಸಂವೇದನೆಗಳನ್ನು ಪ್ರಚೋದಿಸುವಂತೆ ವಿದ್ಯಾರ್ಥಿಗಳು ಸ್ವತಂತ್ರವಾಗಿ ವಿಚಾರ ಮಾಡುವುದನ್ನು ಹಾಗೂ ಅದನ್ನು ಪ್ರದರ್ಶಿಸಲು ಸಾಧ್ಯವಾಗುವಂತೆ ಅವರಲ್ಲಿ ಆತ್ಮ ವಿಶ್ವಾಸ ಮೂಡಿಸುವಂತೆ ಬೋಧನೆ ಮಾಡುವಲ್ಲಿ ಶಿಕ್ಷಕರಿಗೆ ಕಷ್ಟವಾಗುತ್ತಿರುವದು.
8. ಪೌರಾಣಿಕ, ಪರಿಸರ, ಹಾಗೂ ಐತಿಹಾಸಿಕ ಘಟನೆ ಇತ್ಯಾದಿ ವಿಷಯಗಳನ್ನು ಕುರಿತು ಇರುವ ಪದ್ಯಗಳನ್ನು ಮಕ್ಕಳಿಗೆ ಅರ್ಥೈಸುವಲ್ಲಿ ಶಿಕ್ಷಕರಿಗೆ ಕಷ್ಟವಾಗಲು ಕಾರಣ ಶಿಕ್ಷಕರಿಗೆ ಹೆಚ್ಚಿನ ವಿಷಯಜ್ಞಾನದ ಕೊರತೆ

ಇರುವದು.

9. ಶಿಕ್ಷಕರು ಪದ್ಯಗಳನ್ನು ಕುರಿತು , ಪದ್ಯ ಬೋಧನೆ ಕುರಿತು ಗಂಭೀರವಾಗಿರಲಾರದ್ದು, ಅದರ ಅಗತ್ಯತೆ ಹಾಗೂ ಮಹತ್ವವನ್ನು ಮನವರಿಕೆ ಮಾಡಿಕೊಳ್ಳದಿರುವುದು.

**(ವಿವರವಾದ ಪ್ರಶ್ನೆವಾರು ವಿಶ್ಲೇಷಣೆಯನ್ನು ಅನುಬಂಧ (ಆ) ನಲ್ಲಿ ನೋಡಬಹುದು)**

# ಅಧ್ಯಾಯ : 5 ತೀರ್ಮಾನಗಳು ಮತ್ತು ಶಿಫಾರಸ್ಸುಗಳು

## 5.1 : ಪೀಠಿಕೆ :

ಸಂಶೋಧನಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಸಂಶೋಧನೆಯ ಯೋಜನೆಯನ್ನು ರೂಪುಗೊಳಿಸಿ ಅದರಂತೆ ದತ್ತಾಂಶಗಳ ಸಂಗ್ರಹಣಾ ಕಾರ್ಯವು ಯಶಸ್ವಿಯಾಗಿ ಮುಕ್ತಾಯಗೊಂಡರೆ ಸಂಶೋಧನಾ ಕಾರ್ಯವು ಬಹಳಷ್ಟು ಮಟ್ಟಿಗೆ ಪೂರ್ಣಗೊಂಡಿತು ಎಂದು ಭಾವಿಸಬಹುದು.

ನನ್ನ ಸಂಶೋಧನಾ ವಿಷಯವಾದ **" 6ನೇ ಮತ್ತು 7ನೇ ತರಗತಿಯಲ್ಲಿ ಪದ್ಯ ಬೋಧನೆ ಕುರಿತು ಕನ್ನಡ ಭಾಷಾ ಶಿಕ್ಷಕರು ಹೊಂದಿರುವ ದೃಷ್ಟಿಕೋನ ಮತ್ತು ಸವಾಲುಗಳು "** ಕುರಿತು ಪ್ರಶ್ನಾವಳಿ ಸಂದರ್ಶನ ಮತ್ತು ಸಮೂಹ ಚರ್ಚೆ ಮುಂತಾದ ಮಾಹಿತಿ ಸಂಗ್ರಹಣಾ ತಂತ್ರಗಳನ್ನು ಬಳಸಿ 6ನೇ ಮತ್ತು 7ನೇ ತರಗತಿಯಲ್ಲಿ ಕನ್ನಡ ಭಾಷೆಯನ್ನು ಬೋಧಿಸುವ ಶಿಕ್ಷಕರಿಂದಲೇ ನೇರವಾಗಿ ಮಾಹಿತಿಯನ್ನು ಸಂಗ್ರಹಿಸಿದೇನು.

## 5.2 : ಸಂಶೋಧನೆಯಲ್ಲಿ ಕಂಡುಬಂದ ಪ್ರಮುಖಾಂಶಗಳು :

### 5:2:1 : ಸಂಶೋಧನಾ ಪ್ರಶ್ನೆಗಳು :

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಳ್ಳಲು ಸಂಶೋಧನೆಯನ್ನು ಕೈಗೊಳ್ಳಲಾಯಿತು.

1. ಶಿಕ್ಷಕರು ಪದ್ಯ ಬೋಧನೆ ಬಗ್ಗೆ ಹೊಂದಿರುವ ದೃಷ್ಟಿಕೋನ ಅಥವಾ ವಿಚಾರವೇನು ?
2. 6ನೇ ಮತ್ತು 7ನೇ ತರಗತಿಯ ಮಕ್ಕಳಿಗೆ ಪದ್ಯ ಬೋಧನೆ ಮಾಡುವಲ್ಲಿ ಶಿಕ್ಷಕರು ಯಾವ ಸವಾಲುಗಳನ್ನು ಎದುರಿಸುತ್ತಿರುವರು ?
3. ಮಕ್ಕಳು ಸ್ವತಂತ್ರವಾಗಿ ಅರ್ಥೈಸುವದು, ವಿಚಾರ ಮಾಡುವದು ಮತ್ತು ಸಂಬಂಧಿಕರಿಸುವ ಸಾಮರ್ಥ್ಯ ಹೊಂದುವಂತೆ ಪದ್ಯ ಬೋಧನೆ ಇದೆಯೇ ?
4. ಪದ್ಯ ಬೋಧನೆ ಕುರಿತು ಶಿಕ್ಷಕರು ಬಯಸುವ ಅವಶ್ಯಕತೆಗಳೇನು ?

## 5:2:2 : ಸಂಶೋಧನೆಯ ಪ್ರಶ್ನೆವಾರು ವಿಶ್ಲೇಷಣೆ :

ಎಂಟು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಿಗೆ ಭೇಟಿಕೊಟ್ಟು 6ನೇ ಮತ್ತು 7ನೇ ತರಗತಿಗೆ ಕನ್ನಡ ಭಾಷೆ ಬೋಧಿಸುವ ಶಿಕ್ಷಕರನ್ನು ಭೇಟಿಯಾಗಿ ಅವರ ಸಂದರ್ಶನ ಮಾಡಿ ಲಿಖಿತ ಪ್ರಶ್ನಾವಳಿಗೆ ಅವರು ನೀಡಿದ ಉತ್ತರವನ್ನು / ಅಭಿಪ್ರಾಯವನ್ನು ಕ್ರೋಢಿಕರಿಸಲಾಯಿತು. ಹಾಗೂ ಸಂದರ್ಶನದಲ್ಲಿ ಕೇಳಿದ ಪ್ರಶ್ನೆಗಳಲ್ಲಿ 4 ಪ್ರಮುಖ ಪ್ರಶ್ನೆಗಳನ್ನು ಕುರಿತು ಎಂಟು ಶಿಕ್ಷಕರೊಂದಿಗೆ ಸಾಮೂಹಿಕ ಚರ್ಚೆ ಮಾಡಿ ಅವರ ಅಭಿಪ್ರಾಯಗಳನ್ನು ಕ್ರೋಢಿಕರಿಸಲಾಯಿತು. ಹೀಗೆ ಸಂದರ್ಶನದಿಂದ ಮತ್ತು ಚರ್ಚೆಯಿಂದ ಶಿಕ್ಷಕರ ಅಭಿಪ್ರಾಯಗಳನ್ನು ಕ್ರೋಢಿಕರಿಸಿ ಒಟ್ಟಾರೆ ಅವರ ಪ್ರತಿಕ್ರಿಯೆಗಳ ವಿಶ್ಲೇಷಣೆಯಿಂದ ಈ ಕೆಳಗಿನಂಶಗಳು ಕಂಡು ಬಂದಿರುತ್ತವೆ.

### 1. ಶಿಕ್ಷಕರು ಪದ್ಯ ಬೋಧನೆ ಬಗ್ಗೆ ಹೊಂದಿರುವ ದೃಷ್ಟಿಕೋನ :

ಕೆಲವು ಶಿಕ್ಷಕರು ಪದ್ಯ ಬೋಧನೆ ಕೇವಲ ಕವಿ ಹಾಗೂ ಕವಿತೆಯ ಪರಿಚಯ ಮಾಡುವದು ಎಂದು ಹಗುರವಾಗಿ ತೆಗೆದುಕೊಂಡರೆ ಅನೇಕ ಶಿಕ್ಷಕರು ಪದ್ಯದಲ್ಲಿ ಬರುವ ಪದಗಳು , ಭಾಷೆ ಹಾಗೂ ವಿಷಯವನ್ನು ಮಕ್ಕಳಲ್ಲಿ ಆಸಕ್ತಿ ಮೂಡುವಂತೆ ಬೋಧಿಸುವುದು ಕಷ್ಟಕರವೆಂದು ಹಾಗೂ ಪದ್ಯವನ್ನು ಲಯಬದ್ಧವಾಗಿ ಮತ್ತು ಸ್ವರಬದ್ಧವಾಗಿ ಹಾಡಿ ಬೋಧಿಸಿದರೆ ಮಕ್ಕಳಿಗೆ ಪದ್ಯದಲ್ಲಿ ಆಸಕ್ತಿ ಮೂಡುವುದು ಮತ್ತು ದೀರ್ಘ ಕಾಲದವರೆಗೆ ನೆನಪಿನಲ್ಲಿ ಉಳಿಯುವುದು. ಆದರೆ ಹಾಡಲು ಬರಲಾರದಕಾರಣ ಮಕ್ಕಳಿಗೆ ಆಸಕ್ತಿ ಮೂಡುವಂತೆ ಪದ್ಯ ಬೋಧನೆ ಮಾಡುವದು ಕಷ್ಟಕರವಾದುದು ಎಂದು ಭಾವಿಸುವರು.

### 2. ಶಿಕ್ಷಕರು ಪದ್ಯ ಬೋಧನೆಯಲ್ಲಿ ಎದುರಿಸುತ್ತಿರುವ ಸವಾಲುಗಳು :

ಪದ್ಯದಲ್ಲಿಯ ಗ್ರಾಂಥಿಕ ಪದಗಳನ್ನು ಮಕ್ಕಳ ಆಡು ಮಾತಿನಲ್ಲಿ ತಿಳಿಸುವಲ್ಲಿ, ಹಳೆಗನ್ನಡ ಪದ್ಯಗಳನ್ನು ಅದರಲ್ಲಿಯ ಹಳೆಗನ್ನಡ ಪದಗಳನ್ನು ಅರ್ಥೈಸಿಕೊಂಡು ಮಕ್ಕಳಿಗೆ ಬೋಧಿಸುವುದು ಶಿಕ್ಷಕರಿಗೆ ಕಷ್ಟವಾಗುತ್ತಿರುವದು. ಪೌರಾಣಿಕ ಹಾಗೂ ಐತಿಹಾಸಿಕ ವಿಷಯಾಧಾರಿತ ಪದ್ಯಗಳನ್ನು ಮಕ್ಕಳಿಗೆ ಬೋಧಿಸುವಲ್ಲಿ ಶಿಕ್ಷಕರಿಗೆ ವಿಷಯ ಜ್ಞಾನದ ಕೊರತೆಯಿಂದ ಕಷ್ಟವಾಗುತ್ತಿರುವದು. ಪದ್ಯವನ್ನು ಹಾಡಿ ಬೋಧಿಸಿದರೆ ಮಕ್ಕಳಿಗೆ ಪದ್ಯದಲ್ಲಿ ಆಸಕ್ತಿ ಮೂಡಿಸಬಹುದು. ಆದರೆ ಅನೇಕ ಶಿಕ್ಷಕರಿಗೆ ಹಾಡಲು ಬರಲಾರದ್ದು ಅವರು ಎದುರಿಸುತ್ತಿರುವ ಸವಾಲುಗಳಲ್ಲಿ ಒಂದಾಗಿರುತ್ತದೆ.

**3. ಪದ್ಯ ಬೋಧನೆ ಮಕ್ಕಳು ಸ್ವತಂತ್ರವಾಗಿ ಅರ್ಥೈಸುವದು, ವಿಚಾರ ಮಾಡುವದು ಮತ್ತು ಸಂಬಂಧಿಕರಿಸುವ ಸಾಮರ್ಥ್ಯ ಹೊಂದುವಂತೆ ಇದೆಯೇ? :**

ಮಕ್ಕಳು ಸ್ವತಂತ್ರವಾಗಿ ವಿಚಾರ ಮಾಡುವಂತೆ ಪರಿಣಾಮಕಾರಿಯಾಗಿ ಬೋಧಿಸುವಲ್ಲಿ ಶಿಕ್ಷಕರಿಗೆ ಸಾಧನ ಸಲಕರಣೆಗಳ ಕೊರತೆಯು ಕಾರಣವಾಗುತ್ತಿರುವದು. ಹಾಗೂ ಲಭ್ಯ ಸಾಧನ ಸಲಕರಣೆಗಳನ್ನು ಬಳಸಿಕೊಂಡು ಪದ್ಯವನ್ನು ಪರಿಣಾಮಕಾರಿಯಾಗಿ ಬೋಧಿಸುವಲ್ಲಿ ಶಿಕ್ಷಕರು ಉದಾಸೀನತೆಯನ್ನು ಹೊಂದಿರುವದು ಕಂಡುಬರುತ್ತದೆ. ಐತಿಹಾಸಿಕ ಮತ್ತು ಪೌರಾಣಿಕ ವಿಷಯಗಳ ನೈಜತೆಯನ್ನು ಮಕ್ಕಳಿಗೆ ಮನವರಿಕೆ ಮಾಡಿಕೊಟ್ಟು ಆ ಮೂಲಕ ಮಕ್ಕಳು ಸ್ವತಂತ್ರವಾಗಿ ಅರ್ಥೈಸಿಕೊಳ್ಳುವುದಕ್ಕೆ, ವಿಚಾರ ಮಾಡುವದಕ್ಕೆ ಹಾಗೂ ಸಂಬಂಧಿಕರಿಸುದನ್ನು ತಿಳಿದುಕೊಳ್ಳುವುದಕ್ಕೆ ಶಿಕ್ಷಕರಿಗೆ ವಿಷಯ ಜ್ಞಾನದ ಕೊರತೆಯಿಂದ ಸಾಧ್ಯವಾಗುತ್ತಿಲ್ಲದಿರುವದು ಸಂದರ್ಶನ ಹಾಗೂ ಚರ್ಚೆಯಿಂದ ಕಂಡು ಬರುತ್ತಿದೆ.

**4. ಪದ್ಯ ಬೋಧನೆ ಕುರಿತು ಶಿಕ್ಷಕರು ಬಯಸುವ ಅವಶ್ಯಕತೆಗಳೇನು ? :**

ಶಾಲೆಯ ಗ್ರಂಥಾಲಯದಲ್ಲಿ ಕವಿಗಳ ಆಕರ ಕೃತಿಗಳು, ಕವಿಗಳ ಬಗ್ಗೆ ಹಾಗೂ ಪದ್ಯ ಸಂಬಂಧಿತ ಪುಸ್ತಕಗಳು , ನಿಘಂಟುಗಳು ಇದ್ದರೆ ಕವಿತೆ ಹಾಗೂ ಕವಿಯ ಬಗ್ಗೆ ಸರಿಯಾದ ಹಾಗೂ ಉತ್ತಮವಾದ ತಿಳುವಳಿಕೆ ಮಕ್ಕಳಿಗೆ ನೀಡಬಹುದು. ಅದೇ ರೀತಿ ಕವಿ ಪರಿಚಯದ ಸಿಡಿಗಳು, ಪದ್ಯಗಳನ್ನು ಹೊಂದಿರುವ ಆಡಿಯೋ, ವೀಡಿಯೋಗಳು ಶಾಲೆಯ ಗ್ರಂಥಾಲಯದಲ್ಲಿದ್ದರೆ ಶಿಕ್ಷಕರಿಗೆ ಹಾಡಲು ಬಾರದಿದ್ದರೂ ಈ ಸಿಡಿ, ಆಡಿಯೋ, ವೀಡಿಯೋಗಳನ್ನು ಬಳಸಿ ಬೋಧಿಸಿದರೆ ಪರಿಣಾಮಕಾರಿಯಾಗುವದು. ಪದ್ಯದಲ್ಲಿಯ ಭಾಷೆ ಮತ್ತು ಪದಗಳು ಕ್ಲಿಷ್ಟವಾಗಿರದೆ ಸರಳವಾಗಿದ್ದರೆ ಮಕ್ಕಳಿಗೆ ಅರ್ಥೈಸಲು ಅನುಕೂಲವಾಗುವುದರಿಂದ 6ನೇ ಮತ್ತು 7ನೇ ತರಗತಿಯ ಮಕ್ಕಳಿಗೆ ಪದ್ಯಗಳು ಸರಳವಾಗಿರಬೇಕೆಂಬ ವಿಚಾರ ಶಿಕ್ಷಕರು ವ್ಯಕ್ತ ಪಡಿಸುವರು. ಹಳೆಗನ್ನಡ ಪದ್ಯಗಳನ್ನು ಹಾಗೂ ಪದಗಳನ್ನು ಶಿಕ್ಷಕರಿಗೆ ಅರ್ಥೈಸುವದು ಕಷ್ಟಕರವಾದುದರಿಂದ ಶಿಕ್ಷಕರಿಗೆ ಹಳೆಗನ್ನಡ ಕುರಿತು ತರಬೇತಿಯ ಅವಶ್ಯಕತೆ ಇರುತ್ತದೆ.

**5:2:3 : ಸಂಶೋಧನೆಯ ಫಲಿತಾಂಶ :**

ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಬೋಧಿಸುವ ಕನ್ನಡ ಭಾಷಾ ಶಿಕ್ಷಕರಿಗೆ ಮಕ್ಕಳ ವಯಸ್ಸು, ಅರ್ಥೈಸಿಕೊಳ್ಳುವ ಸಾಮರ್ಥ್ಯ, ಅವರ ಆಸಕ್ತಿ, ಕಲ್ಪನೆ, ಸಂವೇದನೆ ಹಾಗೂ ಸೃಜನಶೀಲತೆಗಳನ್ನು ಗಮನದಲ್ಲಿರಿಸಿ ಬೋಧನೆ ಮಾಡುವುದು ದೊಡ್ಡ ಸವಾಲಾಗಿದೆ. ಪದ್ಯ ಬೋಧನೆ ಕುರಿತು ಕನ್ನಡ ಭಾಷಾ ಶಿಕ್ಷಕರು ಹೊಂದಿರುವ ದೃಷ್ಟಿಕೋನ ಹಾಗೂ ಅವರು ಎದುರಿಸುತ್ತಿರುವ ಸವಾಲುಗಳನ್ನು ಕುರಿತು ತಿಳಿದುಕೊಳ್ಳುವುದು ಈ ಸಂಶೋಧೆಯ ಉದ್ದೇಶವಾಗಿತ್ತು. ಅದರಂತೆ ಸಂಶೋಧನೆಯ ಫಲಿತಾಂಶಗಳನ್ನು ಪಟ್ಟಿ ಮಾಡಲಾಗಿದೆ.

1. ಪದ್ಯವನ್ನು ಕುರಿತು ಕವಿಯ ಆಶಯ, ಕಲ್ಪನೆಯನ್ನು ತಿಳಿದುಕೊಂಡು ಮಕ್ಕಳಿಗೆ ಅವರ ಸಾಮರ್ಥ್ಯಕ್ಕನುಗುಣವಾಗಿ ಬೋದಿಸುವುದು ಹಾಗು ಅವರಿಗೆ ಅರ್ಥವಾಗುವಂತೆ ಹೇಳುವದು ಶಿಕ್ಷಕರಿಗೆ ಕಷ್ಟವಾಗಿತ್ತಿರುವುದು.
2. ಮಕ್ಕಳಿಗೆ ಪದ್ಯವನ್ನು ಸ್ವತಂತ್ರವಾಗಿ ಅರ್ಥೈಸಿಕೊಳ್ಳುವಂತೆ ಹಾಗೂ ತಾವು ಅರ್ಥೈಸಿದ್ದನ್ನು ಮತ್ತೊಂದರೊಂದಿಗೆ ಸಂಬಂಧೀಕರಿಸುವದರೊಂದಿಗೆ ಅರ್ಥೈಸಿಕೊಳ್ಳುವಂತೆ ಬೋಧಿಸುವಲ್ಲಿ ಶಿಕ್ಷಕರು ಸವಾಲೆದುರಿಸುತ್ತಿರುವರು.
3. ಪದ್ಯದಲ್ಲಿ ಬಳಸುವ ಪದಗಳು ಅವು ನೀಡುವ ವಿಭಿನ್ನ ಅರ್ಥಗಳು ಅರ್ಥೈಸಿಕೊಂಡು ಮಕ್ಕಳಿಗೆ ಅರ್ಥವಾಗುವಂತೆ ಬೋಧಿಸುವಲ್ಲಿ ಕಷ್ಟವಾಗುತ್ತಿರುವದು.
4. ಮಕ್ಕಳಲ್ಲಿ ಪದ್ಯ ಕುರಿತು ಆಸಕ್ತಿ ಮೂಡಿಸುವಲ್ಲಿ ಶಿಕ್ಷಕರಿಗೆ ಅರ್ಥಪೂರ್ಣವಾಗಿ ವಾಚನ ಮಾಡುವಲ್ಲಿ ಕಷ್ಟವಾಗುತ್ತಿರುವದು ಹಾಗೂ ಸಂಗೀತದ ಜ್ಞಾನ ಎಲ್ಲ ಕನ್ನಡ ಶಿಕ್ಷಕರಲ್ಲಿ ಇಲ್ಲದಿರುವದು.
5. ಶಾಲೆಗಳಲ್ಲಿ ಸಾಧನೋಪಕರಣಗಳ ಕೊರತೆ ಇರುವುದರಿಂದ ಶಿಕ್ಷಕರು ಪದ್ಯ ಬೋಧನೆಯನ್ನು ಪರಿಣಾಮಕಾರಿಯಾಗಿ ಬೋಧಿಸಲು ಕಷ್ಟವಾಗುತ್ತಿರುವದು.
6. ಶಿಕ್ಷಕರಿಗೆ ಹಳೆಗನ್ನಡ ಪದಗಳನ್ನು ಮತ್ತು ಪದ್ಯಗಳನ್ನು ಅರ್ಥ ಮಾಡಿಕೊಂಡು ಮಕ್ಕಳಿಗೆ ಬೋಧಿಸುವಲ್ಲಿ

ಕಷ್ಟವಾಗುತ್ತಿರುವದು.

7. ಮಕ್ಕಳ ಸೃಜನಶೀಲತೆ, ಸಂವೇದನೆಗಳನ್ನು ಪ್ರಚೋದಿಸುವಂತೆ, ವಿದ್ಯಾರ್ಥಿಗಳು ಸ್ವತಂತ್ರವಾಗಿ ವಿಚಾರ ಮಾಡುವುದನ್ನು ಹಾಗೂ ಅದನ್ನು ಪ್ರದರ್ಶಿಸಲು ಸಾಧ್ಯವಾಗುವಂತೆ ಅವರಲ್ಲಿ ಆತ್ಮ ವಿಶ್ವಾಸ ಮೂಡಿಸುವಂತೆ ಬೋಧನೆ ಮಾಡುವಲ್ಲಿ ಶಿಕ್ಷಕರಿಗೆ ಕಷ್ಟವಾಗುತ್ತಿರುವದು.

8. ಪೌರಾಣಿಕ, ಪರಿಸರ, ಹಾಗೂ ಐತಿಹಾಸಿಕ ಘಟನೆ ಇತ್ಯಾದಿ ವಿಷಯಗಳನ್ನು ಕುರಿತು ಇರುವ ಪದ್ಯಗಳನ್ನು ಮಕ್ಕಳಿಗೆ ಅರ್ಥೈಸುವಲ್ಲಿ ಶಿಕ್ಷಕರಿಗೆ ಕಷ್ಟವಾಗಲು ಕಾರಣ ಶಿಕ್ಷಕರಿಗೆ ಹೆಚ್ಚಿನ ವಿಷಯಜ್ಞಾನದ ಕೊರತೆ ಇರುವದು.

9. ಶಿಕ್ಷಕರು ಪದ್ಯಗಳನ್ನು ಕುರಿತು , ಪದ್ಯ ಬೋಧನೆ ಕುರಿತು ಗಂಭೀರವಾಗಿರಲಾರದ್ದು, ಅದರ ಅಗತ್ಯತೆ ಹಾಗೂ ಮಹತ್ವವನ್ನು ಮನವರಿಕೆ ಮಾಡಿಕೊಳ್ಳದಿರುವುದು.

## 5.3 : ತೀರ್ಮಾನಗಳು :

ಹಿರಿಯ ಪ್ರಾಥಮಿಕ ಶಾಲೆಯ 6ನೇ ಮತ್ತು 7ನೇ ತರಗತಿಯ ಮಕ್ಕಳಿಗೆ ಬೋಧಿಸುವ ಕನ್ನಡ ಭಾಷಾ ಶಿಕ್ಷಕರ ಸಂದರ್ಶನದಿಂದ ಮತ್ತು ಚರ್ಚೆಯಿಂದ ಅವರ ಅಭಿಪ್ರಾಯಗಳನ್ನು ಕ್ರೋಢಿಕರಿಸಿ ಒಟ್ಟಾರೆ ಅವರ ಪ್ರತಿಕ್ರಿಯೆಗಳ ವಿಶ್ಲೇಷಣೆಯಿಂದ ಈ ಕೆಳಗಿನ ತೀರ್ಮಾನಕ್ಕೆ ಬರಲಾಯಿತು.

1. ಹಿರಿಯ ಪ್ರಾಥಮಿಕ ಶಾಲೆಯ 6ನೇ ಮತ್ತು 7ನೇ ತರಗತಿಯ ಮಕ್ಕಳಿಗೆ ಬೋಧಿಸುವ ಶಿಕ್ಷಕರಿಗೆ ಪದ್ಯ ಬೋಧಿಸುವುದು ಕಷ್ಟಕರವಾದುದ ಹಾಗೂ ಶಿಕ್ಷಕರು ಮಕ್ಕಳಿಗೆ ಪದ್ಯವನ್ನು ಗದ್ಯದಂತೆ ಬೋಧಿಸುತ್ತಿರುವದು.
2. ಮಕ್ಕಳಿಗೆ ಕವಿಯ ಪರಿಚಯ, ಅವರು ಬರೆದ ಕೃತಿಗಳು, ಕವಿತೆಯ ಹಿನ್ನಲೆ, ಕವಿಯ ಆಶಯ, ಪದ್ಯದ ಭಾವಾರ್ಥ ಇತ್ಯಾದಿ ತಿಳಿಸಿದರೆ ಪದ್ಯವನ್ನು ಉತ್ತಮವಾಗಿ ಬೋಧಿಸಿದಂತೆ ಎಂದು ಶಿಕ್ಷಕರು ಭಾವಿಸಿರುವದು.
3. ಪದ್ಯವನ್ನು ಹಾಡಿನ ಮೂಲಕ ಬೋಧಿಸಿದರೆ ಮಾತ್ರ ಮಕ್ಕಳಿಗೆ ಪದ್ಯದಲ್ಲಿ ಆಸಕ್ತಿ ಮೂಡಿಸಲು ಸಾಧ್ಯವೆಂದು ಶಿಕ್ಷಕರು ತಿಳಿದಿರುವದು. ಉತ್ತಮವಾಗಿ ಅರ್ಥಪೂರ್ಣವಾಗಿ ಪದ್ಯವನ್ನು ವಾಚನ ಮಾಡಿಯೂ ಮಕ್ಕಳಿಗೆ ಪದ್ಯದಲ್ಲಿ ಆಸಕ್ತಿ ಮೂಡಿಸಬಹುದು ಎಂಬ ತಿಳುವಳಿಕೆಯ ಕೊರತೆ ಶಿಕ್ಷಕರಲ್ಲಿ ಕಂಡುಬರುತ್ತಿರುವದು.

4. ಸಾಧನ ಸಲಕರಣೆಗಳು , ಆಡಿಯೋ, ವಿಡಿಯೋಗಳ ಮೂಲಕ ಬೋಧಿಸಿದರೆ ಮಾತ್ರ ಬೋಧನೆ ಪರಿಣಾಮಕಾರಿಯಾಗುವದು. ಅವುಗಳು ತಮ್ಮ ಶಾಲೆಯಲ್ಲಿ ಇರಲಾರದ್ದು ತಮ್ಮ ಪದ್ಯ ಬೋಧನೆ ಪರಿಣಾಮಕಾರಿಯಾಗಲಾರದಕ್ಕೆ ಕಾರಣವೆಂದು ಶಿಕ್ಷಕರು ಭಾವಿಸಿರುವದು.
5. ಪದ್ಯ ಬೋಧನೆಗೆ ಅವಶ್ಯಕ ಸಾಧನ ಸಲಕರಣೆಗಳನ್ನು ಮುಖ್ಯ ಶಿಕ್ಷಕರೇ ಒದಗಿಸಿಕೊಡಬೇಕು ಎಂಬ ವಿಚಾರ ಶಿಕ್ಷಕರಲ್ಲಿ ಇರುವದು.
6. ತಮ್ಮಲ್ಲಿ ಲಭ್ಯವಿರುವ ಅಥವಾ ತಾವು ಸಹ ವಯಕ್ತಿಕವಾಗಿ ಸಾಧನ ಸಲಕರಣೆಗಳ ಪೂರೈಕೆ ಮಾಡಿಕೊಂಡು ತಮ್ಮ ಪದ್ಯ ಬೋಧನೆಯನ್ನು ಪರಿಣಾಮಕಾರಿಯಾಗಿ ಮಾಡಬಹುದೆಂಬ ವಿಚಾರದ ಕೊರತೆ ಶಿಕ್ಷಕರಲ್ಲಿ ಕಂಡುಬರುತ್ತಿರುವದು.
7. ಪದ್ಯಗಳಲ್ಲಿಯ ಪದಗಳು, ಭಾಷೆ ಸರಳವಾಗಿದ್ದರೆ ಮಾತ್ರ ಮಕ್ಕಳಿಗೆ ಸ್ವತಂತ್ರ್ಯವಾಗಿ ಅರ್ಥೈಸುವಂತೆ, ವಿಚಾರ ಮಾಡುವಂತೆ , ಸಂಬಂಧಿಕರಿಸುವಂತೆ ಬೋಧಿಸಲು ಹಾಗೂ ಮಕ್ಕಳಿಗೆ ಅರ್ಥೈಸಿಕೊಳ್ಳಲು ಸಾಧ್ಯವೆಂಬ ಅಭಿಪ್ರಾಯ ಹೊಂದಿರುವದು.
8. ಶಿಕ್ಷಕರು ಐತಿಹಾಸಿಕ , ಪೌರಾಣಿಕ ವಿಷಯಗಳ ನೈಜತೆಯನ್ನು ಮಕ್ಕಳಿಗೆ ಮನವರಿಕೆ ಮಾಡಿಕೊಡುವದು ಕಷ್ಟವೆಂದು ಭಾವಿಸಿರುವರು. ಕಾರಣ ಐತಿಹಾಸಿಕ ಮತ್ತು ಪೌರಾಣಿಕ ಘಟನೆಗಳು ತುಂಬಾ ಪುರಾತನ ವಾದುದರಿಂದ ಅವುಗಳ ವಿಶ್ವಸನೀಯತೆಯ ಬಗ್ಗೆ ಮಕ್ಕಳು ಸಂಶಯ ವ್ಯಕ್ತ ಪಡಿಸುವರು ಎಂಬ ವಿಚಾರ ಹೊಂದಿರುವದು.
9. ಹಳೆಗನ್ನಡ ಪದ್ಯಗಳನ್ನು ಮತ್ತು ಹಳೆಗನ್ನಡ ಪದಗಳನ್ನು ಅರ್ಥ ಮಾಡಿಕೊಳ್ಳುವದು ಶಿಕ್ಷಕರಿಗೆ ಕಷ್ಟವಾಗುತ್ತಿರುವದರಿಂದ ಹಳೆಗನ್ನಡ ಪದ್ಯ ಬೋಧಿಸುವುದು ಅವರಿಗೆ ಕಷ್ಟವಾಗುತ್ತಿರುವದು.
10. ಪದ್ಯದ ಒಳಾರ್ಥಗಳನ್ನು ತಿಳಿದುಕೊಂಡು ಮಕ್ಕಳಿಗೆ ಅರ್ಥೈಸುವಲ್ಲಿ ಹಾಗೂ ಇತರ ವಿಷಯಗಳೊಂದಿಗೆ ಸಂಬಂಧಿಕರಿಸುವಲ್ಲಿ ಶಿಕ್ಷಕರಿಗೆ ಕಷ್ಟವಾಗುತ್ತಿದೆ.
11. ಶಿಕ್ಷಕರಲ್ಲಿ ಐತಿಹಾಸಿಕ ಹಾಗೂ ಪೌರಾಣಿಕ ವಿಷಯಗಳ ಜ್ಞಾನದ ಕೊರತೆ ಇರುವುದರಿಂದ ಅವುಗಳನ್ನು ಬೋಧಿಸಲು ಅವರು ತೊಂದರೆ ಅನುಭವಿಸುತ್ತಿರುವದು.

## 5.4 : ಶಿಫಾರಸ್ಸುಗಳು / ಸಲಹೆಗಳು :

1. ಪದ್ಯ ಬೋಧನೆ ಪರಿಣಾಮಕಾರಿಯಾಗಲು ಶಿಕ್ಷಕರು ತರಗತಿಗೆ ಹೋಗುವ ಮುಂಚೆ ಸರಿಯಾದ ಪೂರ್ವ ತಯಾರಿ ಮಾಡಿಕೊಳ್ಳುವುದು ಉತ್ತಮ.

2. ಇಂದಿನ ಮಕ್ಕಳು ನಾಳೆಯ ಪ್ರಜೆಗಳು, ಉತ್ತಮ ಪ್ರಜೆಗಳನ್ನು ನಿರ್ಮಾಣ ಮಾಡುವುದರಲ್ಲಿ ಭಾಷಾ ಶಿಕ್ಷಕರ ಪಾತ್ರ ಮುಖ್ಯವಾಗಿರುವುದರಿಂದ ಅವರು ಪದ್ಯ ಬೋಧಸುವಾಗ ಮಕ್ಕಳ ಸಂವೇದನೆಗಳಿಗೆ ಉತ್ತಮ ದಿಶೆಯನ್ನು ನೀಡುವುದು.

3. ಮಕ್ಕಳು ಕಲ್ಪನಾಶೀಲರಾಗಿರುವುದರಿಂದ ಶಿಕ್ಷಕರು ಅರ್ಥಪೂರ್ಣವಾಗಿ ಪದ್ಯ ವಾಚನ ಮಾಡುವದು, ಬೇರೆ ವಿಷಯಗಳೊಂದಿಗೆ ಸಂಬಂಧೀಕರಿಸಿ ಬೋಧಿಸುವುದರ ಮೂಲಕ ಮಕ್ಕಳ ಕಲ್ಪನಾ ಶಕ್ತಿಗೆ ಪ್ರಚೋದನೆ ನೀಡುವುದು.

4. ಮಕ್ಕಳಿಗೆ ಶಿಕ್ಷಕರು ಪದ್ಯವನ್ನು ಮೇಲಿಂದ ಮೇಲೆ / ಅನೇಕ ವೇಳೆ ಓದುವುದರಿಂದ ಹೊಸಹೊಸ ಅರ್ಥ ಮೂಡುವುದನ್ನು ತಾವೇ ತರಗತಿಯಲ್ಲಿ ಒಂದು ಪದ್ಯವನ್ನು ಕೆಲವು ಸಲ ಓದಿ ಹೊಸಹೊಸ ಅರ್ಥ ಮೂಡುವುದನ್ನು ತಿಳಿಸುವುದು.

5. ಪದ್ಯ ಎಲ್ಲರಿಗೂ ಒಂದೇ ರೀತಿ ಅರ್ಥವಾಗಬೇಕೆಂದೇನು ಇಲ್ಲ. ಅದು ಬೇರೆ ಬೇರೆ ಅರ್ಥ ನೀಡಬಹುದು. ಸಂದರ್ಭ ಸನ್ನಿವೇಶದಂತೆ ಪದ್ಯದ ಪದಗಳ ಅರ್ಥ ಕಲ್ಪಿಸಿಕೊಳ್ಳಬಹುದೆನ್ನುವ ಅರಿವು ಮಕ್ಕಳ್ಳಲ್ಲಿ ಮೂಡಿಸುವುದು.

6. ಮಕ್ಕಳು ಸೃಜನಶೀಲರಾಗಿರುವುದು ಹಾಗೂ ಪದ್ಯರಚನೆಯೂ ಸೃಜನಾತ್ಮಕವಾಗಿರುವುದರಿಂದ ಶಿಕ್ಷಕರು ತಮ್ಮ ಬೋಧನೆಯ ಸಂದರ್ಭದಲ್ಲಿ ಈ ಬಗ್ಗೆ ಗಮನಹರಿಸುವುದು.

7. ಶಿಕ್ಷಕರು ಪದ್ಯ ಬೋಧನೆ ಪರಿಣಾಮಕಾರಿಯಾಗಲು ಇತರ ಸಾಧನ ಸಲಕರಣೆಗಳನ್ನು ಬಳಸುವುದು.

ಆಡಿಯೋ, ವೀಡಿಯೋಗಳ ಬೇಡಿಕೆಯನ್ನು ಮುಖ್ಯ ಗುರುಗಳಿಗೆ ನೀಡುವುದು. ಆದರೆ ಶಾಲೆಯನ್ನೇ ಪೂರ್ಣವಾಗಿ ಅವಲಂಬಿಸದೆ ತಾವು ಬಳಸುವ ಸ್ಮಾರ್ಟ್ ಫೋನನ್ನು ಆಡಿಯೋ, ವೀಡಿಯೋಗಾಗಿ ಬಳಸಿಕೊಂಡು ಮಕ್ಕಳಿಗೆ  ಪದ್ಯಗಳನ್ನು ಇನ್ನೂ ಉತ್ತಮವಾಗಿ ಬೋಧಿಸುವುದು.

8. ಭಾಷಾ ಶಿಕ್ಷಕರು ಪಠ್ಯ ಪುಸ್ತಕದ ಜೊತೆಗೆ ಇತರ ಗ್ರಂಥಗಳನ್ನು ಓದುವ ಅಭ್ಯಾಸವನ್ನು ಹೊಂದುವುದು ಉತ್ತಮ. ಇದರಿಂದ ಪೌರಾಣಿಕ, ಐತಿಹಾಸಿಕ ಮತ್ತು ಇತರ ವಿಷಯಗಳ ಆಳವಾದ ಜ್ಞಾನವನ್ನು ಹೊಂದಲು ಸಹಾಯಕವಾಗುವದು. ಅಲ್ಲದೆ ಮಕ್ಕಳಿಗೆ ಪದ್ಯ ಬೋಧನೆ ವೇಳೆಯಲ್ಲಿಯೂ ಸಹಾಯಕವಾಗುವದು.

9. ಭಾಷಾ ಶಿಕ್ಷಕರು ತಮ್ಮ ಬೋಧನೆಗೆ ಅವಶ್ಯಕವಾದಂತಹ ಗ್ರಂಥಗಳ ಬೇಡಿಕೆ ಪಟ್ಟಿಯನ್ನು ಮುಖ್ಯ ಶಿಕ್ಷಕರಿಗೆ ನೀಡಿ ಅವುಗಳನ್ನು ತರಿಸಿ ಗ್ರಂಥಾಲಯದಲ್ಲಿ ಇರಿಸುವುದು.  ಆದರೆ ಪೂರ್ಣವಾಗಿ ಶಾಲಾ ಗ್ರಂಥಾಲಯವನ್ನು ಅವಲಂಬಿಸದೆ ತಮ್ಮ ವೇತನದಿಂದಲೂ ಕೆಲವೊಂದು ಗ್ರಂಥಗಳನ್ನು ಖರೀದಿಸಿ ತಮ್ಮ ವಿಷಯಜ್ಞಾನವನ್ನು  ಹೆಚ್ಚಿಸಿಕೊಳ್ಳುವುದು ಉತ್ತಮ.

10. ಭಾಷಾ ಶಿಕ್ಷಕರು ಪದ್ಯ ಬೋಧನೆ ಬಗ್ಗೆ ಇರುವ ನಿಷ್ಕಾಳಜಿತನವನ್ನು ತೊರೆದು ಅದೊಂದು ಸೃಜನಾತ್ಮಕ ವಿಷಯವೆಂಬುದನ್ನು ಅರಿಯುವುದು ಉತ್ತಮ.

**5.5 : ಉಪಸಂಹಾರ :**

ಇಂದಿನ ಮಕ್ಕಳು ನಾಳೆಯ ಪ್ರಜೆಗಳು. ಒಂದು ಉತ್ತಮ ದೇಶ ನಿರ್ಮಾಣವಾಗಬೇಕಾದರೆ ಆ ದೇಶದ ಪ್ರಜೆಗಳು ನೀತಿವಂತರು, ಪ್ರಗತಿಪರರು, ರಚನಾತ್ಮಕರು, ಸೃಜನಾತ್ಮಕರು ಆಗಿರಬೇಕಾದುದು ಅವಶ್ಯಕ. ಅವರು ಬೇರೆಯವರ ನೋವು, ಕಷ್ಟ, ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳುವ ಹಾಗೂ ಸಹಾಯ ಮಾಡುವ ಸಂವೇದನೆ ಅವರಲ್ಲಿರಬೇಕು. ಬಾಲ್ಯದಲ್ಲಿ ಮಕ್ಕಳಿಗೆ ಪದ್ಯವನ್ನು ಉತ್ತಮವಾಗಿ ಬೋಧಿಸಿದರೆ ಎಂದರೆ, ಮಕ್ಕಳ ಸೃಜನಾತ್ಮಕತೆಯನ್ನು, ಸಂವೇದನೆಗಳನ್ನು ಪ್ರೇರೇಪಿಸುವಂತೆ ಶಿಕ್ಷಕರು ಅರ್ಥಪೂರ್ಣವಾಗಿ ಬೋಧಿಸಿದರೆ ಅದು ಮಗುವಿಗೆ ಭವಿಷ್ಯದಲ್ಲಿಯೂ ಸಹಕಾರಿಯಾಗುವದು. ಪದ್ಯ ಮಗುವಿನಲ್ಲಿ ಕಲ್ಪನಾ ಶಕ್ತಿಯನ್ನು ವೃದ್ಧಿಸುವುದು. ಶಿಕ್ಷಕರು

ಮಕ್ಕಳಿಗೆ ಸ್ವಂತ ಪದ್ಯಕಟ್ಟಲು ಪ್ರೋತ್ಸಾಹ ನೀಡಿದರೆ ಅದು ಮಗುವಿನಲ್ಲಿ ಕಲ್ಪಿಸಿಕೊಳ್ಳುವಿಕೆ, ವಿಚಾರ ಮಾಡುವಿಕೆ, ಅವನಲ್ಲಿಯ ಸಂವೇದನೆ ಬೆಳೆಯಲು ಸಹಾಯಕವಾಗುವದು. ಸಂವೇದನಾಶೀಲತೆ ಇತರರ ಕಷ್ಟಗಳಿಗೆ ಸ್ಪಂದಿಸಲು ಸಹಾಯಕವಾಗುವದು. ಈ ಗುಣಗಳು ಚಿಕ್ಕಂದಿನಲ್ಲಿ ಮಕ್ಕಳಲ್ಲಿ ಬೆಳೆದರೆ ಅದು ಮಗುವನ್ನು ನೀತಿವಂತನನ್ನಾಗಿ ಮಾಡುವದು. ಆ ಮೂಲಕ ಉತ್ತಮ  ಪ್ರಜೆಯನ್ನಾಗಿ ನಿರ್ಮಾಣ ಮಾಡುವುದು.

6ನೇ ಮತ್ತು 7ನೇ ತರಗತಿಯಲ್ಲಿ ಕನ್ನಡ ಬೋಧಿಸುವ ಶಿಕ್ಷಕರಿಗೆ ಪದ್ಯ ಬೋಧನೆ ಸವಾಲಾಗುತ್ತಿದೆ. ಅಲ್ಲದೆ ಸದರಿ ತರಗತಿಯ ಮಕ್ಕಳ ಸಾಮರ್ಥ್ಯಕ್ಕೆ ಅನುಗುಣವಾಗಿ, ಅವರ ಸೃಜನಶೀಲತೆ, ಕಲ್ಪನಾ ಶಕ್ತಿಯನ್ನು ಪ್ರಚೋದಿಸುವಂತೆ ಪದ್ಯ ಬೋಧನೆ ಮಾಡುವುದರಲ್ಲಿ ಶಿಕ್ಷಕರಿಗೆ ಅನೇಕ ಸವಾಲುಗಳು ಎದುರಾಗುತ್ತಿವೆ. ಅನೇಕ ಶಿಕ್ಷಕರಿಗೆ ಹಾಡಲು ಬರುವುದಿಲ್ಲ ಹಾಗೂ ಪದ್ಯವನ್ನು ಅರ್ಥಪೂರ್ಣವಾಗಿ ವಾಚನ ಮಾಡಲು ಸಾಧ್ಯವಾಗುವುದಿಲ್ಲ. ಇತರ ಸಾಧನಗಳ ಎಂದರೆ ಆಡಿಯೋ ಮತ್ತು ವೀಡಿಯೋಗಳ ಕೊರತೆ ಮತ್ತು ಅವುಗಳನ್ನು ತರಗತಿಯಲ್ಲಿ ಬಳಸುವ ಬಗ್ಗೆ ಅನಾಸಕ್ತಿ ಇದು ತರಗತಿಯಲ್ಲಿ ಪದ್ಯಬೋಧನೆ ನೀರಸವಾಗಿಸುತ್ತಿದೆ.

ಭಾಷಾ ಶಿಕ್ಷಕರು ತಮ್ಮ ಬೋಧನೆಗೆ ಅವಶ್ಯಕವಾದಂತಹ ಗ್ರಂಥಗಳಿಗಾಗಿ ಪೂರ್ಣವಾಗಿ ಶಾಲಾ ಗ್ರಂಥಾಲಯವನ್ನು ಅವಲಂಬಿಸದೆ ತಮ್ಮ ವೇತನದಿಂದಲೂ ಕೆಲಮೊಂದು ಗ್ರಂಥಗಳನ್ನು ಖರೀದಿಸಿ ತಮ್ಮ ವಿಷಯಜ್ಞಾನವನ್ನು  ಹೆಚ್ಚಿಸಿಕೊಳ್ಳುವುದು. ಅದೇರೀತಿ ತಾವು ಬಳಸುವ ಸ್ಮಾರ್ಟ್ ಫೋನನ್ನು ಆಡಿಯೋ, ವೀಡಿಯೋಗಾಗಿ ಬಳಸಿಕೊಂಡು ಮಕ್ಕಳಿಗೆ ಪದ್ಯಗಳನ್ನು ಇನ್ನು ಉತ್ತಮವಾಗಿ ಬೋಧಿಸುವುದು. ಮಕ್ಕಳು ಸೃಜನಶೀಲರಾಗಿರುವುದು ಹಾಗೂ ಪದ್ಯರಚನೆಯೂ ಸೃಜನಾತ್ಮಕವಾಗಿರುವುದರಿಂದ ಶಿಕ್ಷಕರು ತಮ್ಮ ಬೋಧನೆಯ ಸಂದರ್ಭದಲ್ಲಿ ಈ ಬಗ್ಗೆ ಗಮನಹರಿಸುವುದು.

ಹೀಗೆ ಶಿಕ್ಷಕರು ಪದ್ಯ ಬೋಧನೆಯಲ್ಲಿ ಎದುರಿಸುತ್ತಿರುವ ಸವಾಲುಗಳನ್ನು ಪರಿಹರಿಸುವ ಮೂಲಕ ಹಾಗೂ  ಪದ್ಯ ಬೋಧನೆಯ ಬಗ್ಗೆ ಹೊಂದಿರುವ ದೃಷ್ಟಿಕೋನವನ್ನು  ಬದಲಾಯಿಸುವ ಮೂಲಕ 6ನೇ ಮತ್ತು 7ನೇ ತರಗತಿಗಳಲ್ಲಿ ಪದ್ಯ ಬೋಧನೆಯನ್ನು ಪರಿಣಾಮಕಾರಿಯಾಗಿ ಮಾಡಬಹುದು.

# ಅಧ್ಯಾಯ– 6 ಉಲ್ಲೇಖಗಳು

## 6.1 : ಗ್ರಂಥ ಸೂಚಿ :


1. ಹಲಗೆ ಬಳಪ : ಇಷ್ಟಕ್ಕೂ ಒಂದು ಚೆಂದದ ಕವಿತೆ ಓದೋದು ಹೇಗೆ?

2. ದ.ರಾ.ಬೇಂದ್ರೆ (1951). ಗಂಗಾವತರಣ(ಕವನ ಸಂಕಲನ) – 'ಜೋಗಿ' ಕವಿತೆ

3. Michael Rosen : ' What is Poetry? – The essential guide to reading & writing poems ' Google App ನಲ್ಲಿ ಕವಿತೆಗಳ ಬಗ್ಗೆ ಹಾಗೂ ಭಾಷಾ ಬೋಧನೆಯಲ್ಲಿನ ಸವಾಲುಗಳು ಮತ್ತು ಕಂಡುಕೊಂಡಿರುವ ಪರಿಹಾರಗಳ ಬಗ್ಗೆ ದೊರಕುವ ಸಾಹಿತ್ಯದ ಮಾಹಿತಗಳು,

1. ಶ್ರೀ. ಕೇಶವ ಕುಲಕರ್ಣಿ : 'ಇಷ್ಟಕ್ಕೂ ಈ 3 ಹಾಳಾದ ಕವಿತೆ ಎಂದರೇನು? ' ,
   ಅನಿವಾಸಿ – ಯು.ಕೆ ಕನ್ನಡಿಗರ ತಂಗುದಾಣ ಪ್ರಕಟಣೆ

2. ಕಾವ್ಯವೆಂದರೇನು? ಆಧುನಿಕ ಕನ್ನಡ ಕಾವ್ಯದ ಬೆಳವಣಿಗೆ ಕುರಿತು : ಮೈಸೂರು ವಿಶ್ವವಿದ್ಯಾನಿಲಯ ವಿಶ್ವಕೋಶ/ಕಾವ್ಯ

3. ಗೋಪಾಲಕೃಷ್ಣ ಅಡಿಗ ಎಂ ಇವರ– ಮೈಸೂರು ವಿಶ್ವವಿದ್ಯಾನಿಲಯ ವಿಶ್ವಕೋಶ

4. ಶ್ರೀ. ಬಿ.ಎನ್.ನಾಗರಾಜ ಭಟ್ಟರ – ಕಾವ್ಯಗರ್ಭ– ವಿಮರ್ಶಾಗ್ರಂಥ

5. ಶ್ರೀ. ವಿನೋದ್.ಪ್ರ.ಶಿರಾಳಶೆಟ್ಟಿ : ಕವನ ಮತ್ತು ಕವಿತೆಗಳಲ್ಲಿನ ವ್ಯತ್ಯಾಸಗಳು,
   'ಸಂಪದ' ಹೊಸ ಚಿಗುರು ಹಳೆ ಬೇರು ಪ್ರಕಟಣೆ.

## 6.2 : ಅನುಬಂಧಗಳು :

### (ಅ) ಪ್ರಶ್ನಾವಳಿ : ಶಿಕ್ಷಕರಿಂದ ಪಡೆದ ದತ್ತಾಂಶ :

ಕರ್ನಾಟಕ ಸರಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ

ಶಿಕ್ಷಕರ ಹೆಸರು:- ಶ್ರೀಮತಿ ನಾಗಮ್ಮ ಸ.ಶಿ     ಫೋನ ಸಂಖ್ಯೆ: 8951399685

ಶಾಲೆ ಹೆಸರು :- ಸ.ಹಿ.ಪ್ರಾ.ಶಾಲೆ ಓಂ ನಗರ     ಡೈಸ್ ಸಂಖ್ಯೆ : 29041108801

ಸೇವೆಗೆ ಸೇರಿದ ದಿನಾಂಕ: 26.11.1999     ಈ ಶಾಲೆಗೆ ಬಂದ ದಿನಾಂಕ: 08.07.2010

ನೇಮಕಾತಿಯಾದ ವಿಷಯ: ಸಾಮಾನ್ಯ     ಬೋಧಿಸುವ ವಿಷಯ : ಕನ್ನಡ - ಗಣಿತ

ವಯಸ್ಸು (ವರ್ಷಗಳಲ್ಲಿ) : 46

6ನೇ ಮತ್ತು 7ನೇ ತರಗತಿಯಲ್ಲಿ ಪದ್ಯ ಬೋಧನೆ ಕುರಿತು ಕನ್ನಡ ಭಾಷಾ ಶಿಕ್ಷಕರು ಹೊಂದಿರುವ ದೃಷ್ಟಿಕೋನ ಮತ್ತು ಸವಾಲುಗಳನ್ನು ತಿಳಿದುಕೊಳ್ಳಲು ಪ್ರಶ್ನೆಗಳನ್ನು ನೀಡಲಾಗಿದೆ. ಅವುಗಳಿಗೆ ನಿಮ್ಮ ಅಭಿಪ್ರಾಯ ನೀಡುವ ಮೂಲಕ ಉತ್ತರಿಸಿ. [ಅಭಿಪ್ರಾಯ = ಅಭಿ]

1. 6ನೇ ಮತ್ತು 7ನೇ ತರಗತಿ ಮಕ್ಕಳಿಗೆ ಕನ್ನಡ ಪದ್ಯ ಬೋಧನೆ ಮಾಡುವುದು ಸರಳ ಅಥವಾ ಕಷ್ಟ ?
ಅಭಿ: ಕಷ್ಟ

2. ಏಕೆ ?
ಅಭಿ: ಕೆಲವೊಂದು ಪದ್ಯ ಹಳೆಗನ್ನಡ ಹಾಗೂ ಗ್ರಾಂಥಿಕವಾಗಿ ಇರುವುದರಿಂದ ಗ್ರಾಂಥಿಕ ಭಾಷೆ ಆಡು ಭಾಷೆಯಲ್ಲಿ ಸಾಮ್ಯವಿರುವುದರಿಂದ ಬೋಧನೆಯಲ್ಲಿ ಕಷ್ಟವಾಗುತ್ತದೆ.

3. ಮಕ್ಕಳು ಸ್ವತಂತ್ರವಾಗಿ ಅರ್ಥೈಸುವದು ಮತ್ತು ಸಂಬಂಧೀಕರಿಸುವ ಸಾಮರ್ಥ್ಯ ಹೊಂದುವಂತೆ ಬೋಧಿಸಲು ಆಗುತ್ತಿದೆಯೇ ?
ಅಭಿ: ಆಗುತ್ತದೆ.

4. ಪದ್ಯ ಬೋಧನೆ ಕುರಿತು ನಿಮ್ಮ ವಿಚಾರವೇನು ?
ಅಭಿ: ಪದ್ಯ ಬೋಧನೆ ಮಾಡುವುದು ಸ್ವಲ್ಪ ಕಷ್ಟವಾಗುತ್ತದೆ.

5. ವಿದ್ಯಾರ್ಥಿಗಳು ಸ್ವತಂತ್ರವಾಗಿ ವಿಚಾರ ಮಾಡುವುದನ್ನು ಪ್ರದರ್ಶಿಸಲು ಸಾಧ್ಯವಾಗುವಂತೆ ಶಿಕ್ಷಕರಿಗೆ ಅರ್ಥಪೂರ್ಣವಾಗಿ ಬೋಧನೆ ಮಾಡಲು ಸಾಧ್ಯವಾಗುತ್ತಿದೆಯೇ ?
ಅಭಿ: ಶಿಕ್ಷಕರು ಮೊದಲು ಅರ್ಥಪೂರ್ಣವಾಗಿ ಬೋಧನೆ ಮಾಡಿದಾಗ ವಿದ್ಯಾರ್ಥಿಗಳು ಸ್ವತಂತ್ರವಾಗಿ ವಿಚಾರ ಮಾಡಲು ಸಾಧ್ಯವಾಗುತ್ತದೆ.

6. ಹೌದೆಂದರೆ ಹೇಗೆ ? / ಇಲ್ಲವಾದರೆ ಏಕೆ ಇಲ್ಲ ?
ಅಭಿ: ಮಕ್ಕಳಿಗೆ ಅರ್ಥವಾಗುವ ಹಾಗೆ ನಾಟಕ ಮೂಲಕ ಮತ್ತು ಕಥೆ ಮೂಲಕ ಹಾಗೆ ಬೋಧನೆ ಮಾಡಿದರೆ (ಧ್ವನಿಸುರುಳಿ)

7. ಪದ್ಯ ಬೋಧನೆಯಲ್ಲಿ ಪರಿಣಾಮಕಾರಿಯಾಗಿ ಸಾಧನಗಳನ್ನು ಬಳಸಿಕೊಳ್ಳುವಂಥ ವಾತಾವರಣ ತರಗತಿಯಲ್ಲಿ ಇದೆಯೇ ?
ಅಭಿ: ಇದೆ

8. ಇಲ್ಲದಿದ್ದರೆ ಏಕೆ ಇಲ್ಲ ?
ಅಭಿ: –

9. ಮಕ್ಕಳು ಪದ್ಯ ಕಲಿಕೆಯಲ್ಲಿ ಆಸಕ್ತಿ ತೋರುತ್ತಿದ್ದಾರೆಯೇ ?
ಅಭಿ: ತೋರುತ್ತಾರೆ.

10. ಪದ್ಯ ಬೋಧನೆಯಿಂದ ಹೊಸ ಪದಗಳ ಪರಿಚಯ ಮಾಡಲು ಸಾಧ್ಯವಾಗುತ್ತಿದೆಯೇ?
ಅಭಿ: ಸಾಧ್ಯವಾಗುತ್ತದೆ.

11. ಕನ್ನಡ ಭಾಷೆಯ ಜ್ಞಾನವನ್ನು ಹೊಂದಲು ಇದು ಸಹಾಯಕವಾಗಿದೆಯೇ ?
ಅಭಿ: ಹೌದು

12. ಪದ್ಯ ಬೋಧನೆ ಮಕ್ಕಳಿಗೆ ಆನಂದ ಕೊಡುವುದೇ ? ಹಾಗೂ ಸ್ವತಂತ್ರವಾಗಿ ಅರ್ಥ ಕಲ್ಪಿಸಿಕೊಳ್ಳವಂಥ ಮತ್ತು ಅದನ್ನು ಪ್ರದರ್ಶಿಸುವ ಸ್ವಾತಂತ್ರ್ಯ ತರಗತಿ ಕೋಣೆಯಲ್ಲಿ ವಿದ್ಯಾರ್ಥಿಗಳಿಗೆ ಇದೆಯೇ ?
ಅಭಿ: ಹೌದು.

13. ಶಿಕ್ಷಕರು ವಿದ್ಯಾರ್ಥಿಗಳಿಗೆ ಪದ್ಯವನ್ನು ಒಂದಕ್ಕಿಂತ ಹೆಚ್ಚು ವೇಳೆ ಓದುವದಕ್ಕೆ, ಪ್ರತಿಸಾರಿ ಓದಿದ ನಂತರ ಮೂಡುವ ಹೊಸ ಅರ್ಥ, ವಿಚಾರ ಹಾಗೂ ಅನುಭವ ಕುರಿತು ತಿಳುವಳಿಕೆ ಮೂಡಿಸಲು ಆಗುತ್ತಿದೆಯೇ ?
ಅಭಿ: ಹೌದು

14. ಪದ್ಯಗಳ ಮೂಲಕ ವಿದ್ಯಾರ್ಥಿಗಳನ್ನು ಸ್ವತಂತ್ರವಾಗಿ ವಿಚಾರ ಮಾಡುವಂತೆ ಮಾಡಲು ಸಾಧ್ಯವಾಗುತ್ತಿದೆಯೇ ?
ಅಭಿ: ಸಾಧ್ಯವಾಗುತ್ತದೆ.

15. ಪದ್ಯ ಬೋಧನೆ ಕುರಿತು ನಿಮ್ಮ ಅವಶ್ಯಕತೆಗಳೇನು ?
ಅಭಿ: ಪದ್ಯ ಬೋಧನೆ ಕುರಿತು ಮಕ್ಕಳಿಗೆ ಅರಿವು ಮೂಡಿಸುವುದು. ಧ್ವನಿಸುರುಳಿ, ಕನ್ನಡ ತರಬೇತಿ

N.Bodde
ಶಿಕ್ಷಕರ ಸಹಿ

**ಕರ್ನಾಟಕ ಸರಕಾರ**

**ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ**

ಶಿಕ್ಷಕರ ಹೆಸರು:- [illegible] ಫೋನ ಸಂಖ್ಯೆ: 9901177314

ಶಾಲೆ ಹೆಸರು: ಸ.ಮಾ.ಪ್ರಾ. ಶಾಲೆ [illegible] ಡೈಸ್ ಸಂಖ್ಯೆ: 29040104101

ಸೇವೆಗೆ ಸೇರಿದ ದಿನಾಂಕ: 04-09-1998 ಈ ಶಾಲೆಗೆ ಬಂದ ದಿನಾಂಕ: 17-07-2013

ನೇಮಕಾತಿಯಾದ ವಿಷಯ: ಸಾಮಾನ್ಯ ಕನ್ನಡ ಬೋಧಿಸುವ ವಿಷಯ: ಕನ್ನಡ

ವಯಸ್ಸು (ವರ್ಷಗಳಲ್ಲಿ): 45

6ನೇ ಮತ್ತು 7ನೇ ತರಗತಿಯಲ್ಲಿ ಪದ್ಯ ಬೋಧನೆ ಕುರಿತು ಕನ್ನಡ ಭಾಷಾ ಶಿಕ್ಷಕರು ಹೊಂದಿರುವ ದೃಷ್ಟಿಕೋನ ಮತ್ತು ಸವಾಲುಗಳನ್ನು ತಿಳಿದುಕೊಳ್ಳಲು ಪ್ರಶ್ನೆಗಳನ್ನು ನೀಡಲಾಗಿದೆ. ಅವುಗಳಿಗೆ ನಿಮ್ಮ ಅಭಿಪ್ರಾಯ ನೀಡುವ ಮೂಲಕ ಉತ್ತರಿಸಿ. [ಅಭಿಪ್ರಾಯ = ಅಭಿ]

1. 6ನೇ ಮತ್ತು 7ನೇ ತರಗತಿ ಮಕ್ಕಳಿಗೆ ಕನ್ನಡ ಪದ್ಯ ಬೋಧನೆ ಮಾಡುವುದು ಸರಳ ಅಥವಾ ಕಷ್ಟ

ಅಭಿ: ಪದ್ಯ ಬೋಧನೆ ಕಷ್ಟ. ಏಕೆಂದರೆ [illegible]

2. ಏಕೆ ?

ಅಭಿ: [illegible]

3. ಮಕ್ಕಳು ಸ್ವತಂತ್ರವಾಗಿ ಅರ್ಥೈಸುವುದು ಮತ್ತು ಸಂಬಂಧೀಕರಿಸುವ ಸಾಮರ್ಥ್ಯ ಹೊಂದುವಂತೆ ಬೋಧಿಸಲು ಆಗುತ್ತಿದೆಯೇ ?

ಅಭಿ: ಸಾಧ್ಯವಾಗುತ್ತಿಲ್ಲ.

4. ಪದ್ಯ ಬೋಧನೆ ಕುರಿತು ನಿಮ್ಮ ವಿಚಾರವೇನು ?

ಅಭಿ: [illegible]

5. ವಿದ್ಯಾರ್ಥಿಗಳು ಸ್ವತಂತ್ರವಾಗಿ ವಿಚಾರ ಮಾಡುವುದನ್ನು, ಪ್ರದರ್ಶಿಸಲು ಸಾಧ್ಯವಾಗುವಂತೆ ಶಿಕ್ಷಕರಿಗೆ ಅರ್ಥಪೂರ್ಣವಾಗಿ ಬೋಧನೆ ಮಾಡಲು ಸಾಧ್ಯವಾಗುತ್ತಿದೆಯೇ ?

ಅಭಿ: ಇಲ್ಲ.

6. ಹೌದೆಂದರೆ ಹೇಗೆ ? / ಇಲ್ಲವಾದರೆ ಏಕೆ ಇಲ್ಲ?

ಅಭಿ: [illegible]

7. ಪದ್ಯ ಬೋಧನೆಯಲ್ಲಿ ಪರಿಣಾಮಕಾರಿಯಾಗಿ ಸಾಧನಗಳನ್ನು ಬಳಸಿಕೊಳ್ಳುವಂಥ ವಾತಾವರಣ ತರಗತಿಯಲ್ಲಿ ಇದೆಯೇ ?

ಅಭಿ: ಇದೆ. ಆದರೆ ಎಲ್ಲ ಸಾಧನ ಸಲಕರಣೆಗಳು ಇಲ್ಲ. [illegible]

8. ಇಲ್ಲದಿದ್ದರೆ ಏಕೆ ಇಲ್ಲ ?

ಅಭಿ: ಏಕೆಂದರೆ ಪದ್ಯ ಬರೆದ ಕವಿಯ ಕವನ [illegible]

9. ಮಕ್ಕಳು ಪದ್ಯ ಕಲಿಕೆಯಲ್ಲಿ ಆಸಕ್ತಿ ತೋರುತ್ತಿದ್ದಾರೆಯೇ ?

ಅಭಿ: ಹೌದು. ಆದರೆ [illegible]

10. ಪದ್ಯ ಬೋಧನೆಯಿಂದ ಹೊಸ ಪದಗಳ ಪರಿಚಯ ಮಾಡಲು ಸಾಧ್ಯವಾಗುತ್ತಿದೆಯೇ?

ಅಭಿ: ಹೌದು

11. ಕನ್ನಡ ಭಾಷೆಯ ಜ್ಞಾನವನ್ನು ಹೊಂದಲು ಇದು ಸಹಾಯಕವಾಗಿದೆಯೇ ?

ಅಭಿ: ಹೌದು

12. ಪದ್ಯ ಬೋಧನೆ ಮಕ್ಕಳಿಗೆ ಆನಂದ ಕೊಡುವುದೇ ? ಹಾಗೂ ಸ್ವತಂತ್ರವಾಗಿ ಅರ್ಥ ಕಲಿಸಿಕೊಳ್ಳುವಂಥ ಮತ್ತು ಅದನ್ನು ಪ್ರದರ್ಶಿಸುವ ಸ್ವಾತಂತ್ರ್ಯ ತರಗತಿ ಕೋಣೆಯಲ್ಲಿ ವಿದ್ಯಾರ್ಥಿಗಳಿಗೆ ಇದೆಯೇ ?

ಅಭಿ: ಇದೆ. ಆದರೆ ಮಕ್ಕಳೆಲ್ಲ [illegible]

13. ಶಿಕ್ಷಕರು ವಿದ್ಯಾರ್ಥಿಗಳಿಗೆ ಪದ್ಯವನ್ನು ಒಂದಕ್ಕಿಂತ ಹೆಚ್ಚು ವೇಳೆ ಓದುವುದಕ್ಕೆ ಪ್ರತಿಸಾರಿ ಓದಿದ ನಂತರ ಮೂಡುವ ಹೊಸ ಅರ್ಥ, ವಿಚಾರ ಹಾಗೂ ಅನುಭವ ಕುರಿತು ತಿಳುವಳಿಕೆ ಮೂಡಿಸಲು ಆಗುತ್ತಿದೆಯೇ ?

ಅಭಿ: ಇಲ್ಲ.

14. ಪದ್ಯಗಳ ಮೂಲಕ ವಿದ್ಯಾರ್ಥಿಗಳನ್ನು ಸ್ವತಂತ್ರವಾಗಿ ವಿಚಾರ ಮಾಡುವಂತೆ ಮಾಡಲು ಸಾಧ್ಯವಾಗುತ್ತಿದೆಯೇ ?

ಅಭಿ: ಇಲ್ಲ.

15. ಪದ್ಯ ಬೋಧನೆ ಕುರಿತು ನಿಮ್ಮ ಅವಶ್ಯಕತೆಗಳೇನು ?

ಅಭಿ: [illegible]

ಶಿಕ್ಷಕರ ಸಹಿ

**ಕರ್ನಾಟಕ ಸರಕಾರ**

**ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ**

ಶಿಕ್ಷಕರ ಹೆಸರು:- [illegible] ಫೋನ ಸಂಖ್ಯೆ: 7975812629

ಶಾಲೆ ಹೆಸರು :- [illegible] (I.K) ಡೈಸ್ ಸಂಖ್ಯೆ : 2904110501

ಸೇವೆಗೆ ಸೇರಿದ ದಿನಾಂಕ: 16-04-2016 ಈ ಶಾಲೆಗೆ ಬಂದ ದಿನಾಂಕ:- 16-04-2016

ನೇಮಕಾತಿಯಾದ ವಿಷಯ: - [illegible] ಬೋಧಿಸುವ ವಿಷಯ : [illegible] / ಕನ್ನಡ

ವಯಸ್ಸು (ವರ್ಷಗಳಲ್ಲಿ) : - 32

**6ನೇ ಮತ್ತು 7ನೇ ತರಗತಿಯಲ್ಲಿ ಪದ್ಯ ಬೋಧನೆ ಕುರಿತು ಕನ್ನಡ ಭಾಷಾ ಶಿಕ್ಷಕರು ಹೊಂದಿರುವ ದೃಷ್ಟಿಕೋನ ಮತ್ತು ಸವಾಲುಗಳನ್ನು ತಿಳಿದುಕೊಳ್ಳಲು ಪ್ರಶ್ನೆಗಳನ್ನು ನೀಡಲಾಗಿದೆ. ಅವುಗಳಿಗೆ ನಿಮ್ಮ ಅಭಿಪ್ರಾಯ ನೀಡುವ ಮೂಲಕ ಉತ್ತರಿಸಿ. [ಅಭಿಪ್ರಾಯ = ಅಭಿ]**

1. 6ನೇ ಮತ್ತು 7ನೇ ತರಗತಿ ಮಕ್ಕಳಿಗೆ ಕನ್ನಡ ಪದ್ಯ ಬೋಧನೆ ಮಾಡುವುದು ಸರಳ ಅಥವಾ ಕಷ್ಟ ?

ಅಭಿ: ಸ್ವಲ್ಪ ಮಟ್ಟಿನ ಕಷ್ಟ

2. ಏಕೆ ?

ಅಭಿ: ಕೆಲವೊಂದು ಪದ್ಯಗಳು [illegible] ನೋಡುವ ಪದ್ಯಗಳಾಗಿವೆ

3. ಮಕ್ಕಳು ಸ್ವತಂತ್ರವಾಗಿ ಅರ್ಥೈಸುವದು ಮತ್ತು ಸಂಬಂಧೀಕರಿಸುವ ಸಾಮರ್ಥ್ಯ ಹೊಂದುವಂತೆ ಬೋಧಿಸಲು ಆಗುತ್ತಿದೆಯೇ ?

ಅಭಿ: ಸಂಪೂರ್ಣವಾಗಿ ಆಗುತ್ತಿಲ್ಲ.

4. ಪದ್ಯ ಬೋಧನೆ ಕುರಿತು ನಿಮ್ಮ ವಿಚಾರವೇನು ?

ಅಭಿ:
* ಪದ್ಯ ಬೋಧನೆಯಿಂದ ಮಕ್ಕಳಲ್ಲಿ ವಿಚಾರ ಶಕ್ತಿ ಹೆಚ್ಚುತ್ತದೆ.
* ಪದ್ಯ ಬೋಧನೆಯಿಂದ ಮಕ್ಕಳಲ್ಲಿ ಕಲ್ಪನಾ ಶಕ್ತಿ, ಸೃಜನಶೀಲತೆ -ಶಕ್ತಿ ಬೆಳೆಯುವುದು.

5. ವಿದ್ಯಾರ್ಥಿಗಳು ಸ್ವತಂತ್ರವಾಗಿ ವಿಚಾರ ಮಾಡುವುದನ್ನು ಪ್ರದರ್ಶಿಸಲು ಸಾಧ್ಯವಾಗುವಂತೆ ಶಿಕ್ಷಕರಿಗೆ ಅರ್ಥಪೂರ್ಣವಾಗಿ ಬೋಧನೆ ಮಾಡಲು ಸಾಧ್ಯವಾಗುತ್ತಿದೆಯೇ ?

ಅಭಿ: ಇದು ಕೆಲವೊಂದು ಪದ್ಯಗಳಿಗೆ ಮಾತ್ರ ಸಾಧ್ಯವಾಗುತ್ತಿದ್ದೆ, ಹೌದು.

6. ಹೌದೆಂದರೆ ಹೇಗೆ ? / ಇಲ್ಲವಾದರೆ ಏಕೆ ಇಲ್ಲ ?

ಅಭಿ:
* ಕೆಲವೊಂದು [illegible]
* [illegible]
* [illegible]

7. ಪದ್ಯ ಬೋಧನೆಯಲ್ಲಿ ಪರಿಣಾಮಕಾರಿಯಾಗಿ ಸಾಧನಗಳನ್ನು ಬಳಸಿಕೊಳ್ಳುವಂಥ ವಾತಾವರಣ ತರಗತಿಯಲ್ಲಿ ಇದೆಯೇ ? ಹೌದು.

ಅಭಿ:

8. ಇಲ್ಲದಿದ್ದರೆ ಏಕೆ ಇಲ್ಲ ?

ಅಭಿ:

9. ಮಕ್ಕಳು ಪದ್ಯ ಕಲಿಕೆಯಲ್ಲಿ ಆಸಕ್ತಿ ತೋರುತ್ತಿದ್ದಾರೆಯೇ ?

ಅಭಿ: ತೋರುತ್ತಿದ್ದಾರೆ.

10. ಪದ್ಯ ಬೋಧನೆಯಿಂದ ಹೊಸ ಪದಗಳ ಪರಿಚಯ ಮಾಡಲು ಸಾಧ್ಯವಾಗುತ್ತಿದೆಯೇ?

ಅಭಿ: ಸಾಧ್ಯವಾಗುತ್ತಿದೆ.

11. ಕನ್ನಡ ಭಾಷೆಯ ಜ್ಞಾನವನ್ನು ಹೊಂದಲು ಇದು ಸಹಾಯಕವಾಗಿದೆಯೇ ?

ಅಭಿ: ಹೌದು (ಸಹಾಯಕ)

12. ಪದ್ಯ ಬೋಧನೆ ಮಕ್ಕಳಿಗೆ ಆನಂದ ಕೊಡುವುದೇ ? ಹಾಗೂ ಸ್ವತಂತ್ರವಾಗಿ ಅರ್ಥ ಕಲ್ಪಿಸಿಕೊಳ್ಳವಂಥ ಮತ್ತು ಅದನ್ನು ಪ್ರದರ್ಶಿಸುವ ಸ್ವಾತಂತ್ರ್ಯ ತರಗತಿ ಕೋಣೆಯಲ್ಲಿ ವಿದ್ಯಾರ್ಥಿಗಳಿಗೆ ಇದೆಯೇ ?

ಅಭಿ: ಇದೆ.

13. ಶಿಕ್ಷಕರು ವಿದ್ಯಾರ್ಥಿಗಳಿಗೆ ಪದ್ಯವನ್ನು ಒಂದಕ್ಕಿಂತ ಹೆಚ್ಚು ವೇಳೆ ಓದುವದಕ್ಕೆ, ಪ್ರತಿಸಾರಿ ಓದಿದ ನಂತರ ಮೂಡುವ ಹೊಸ ಅರ್ಥ, ವಿಚಾರ ಹಾಗೂ ಅನುಭವ ಕುರಿತು ತಿಳುವಳಿಕೆ ಮೂಡಿಸಲು ಆಗುತ್ತಿದೆಯೇ ?

ಅಭಿ: ಆಗುತ್ತಿದೆ

14. ಪದ್ಯಗಳ ಮೂಲಕ ವಿದ್ಯಾರ್ಥಿಗಳನ್ನು ಸ್ವತಂತ್ರವಾಗಿ ವಿಚಾರ ಮಾಡುವಂತೆ ಮಾಡಲು ಸಾಧ್ಯವಾಗುತ್ತಿದೆಯೇ ?

ಅಭಿ: ಸಾಧ್ಯವಾಗುತ್ತಿದೆ.

15. ಪದ್ಯ ಬೋಧನೆ ಕುರಿತು ನಿಮ್ಮ ಅವಶ್ಯಕತೆಗಳೇನು ?

ಅಭಿ:
* ಪದ್ಯ ಬೋಧನೆ [illegible].
* [illegible].
*

[signature]
ಶಿಕ್ಷಕರ ಸಹಿ

**ಕರ್ನಾಟಕ ಸರಕಾರ**

**ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ**

**ಶಿಕ್ಷಕರ ಹೆಸರು:** [illegible] **ಫೋನ ಸಂಖ್ಯೆ:** 9448161806

**ಶಾಲೆ ಹೆಸರು:** [illegible] **ಡೈಸ್ ಸಂಖ್ಯೆ:** 29041107803

**ಸೇವೆಗೆ ಸೇರಿದ ದಿನಾಂಕ:** 5/6/1998 **ಈ ಶಾಲೆಗೆ ಬಂದ ದಿನಾಂಕ:** 30/6/2012

**ನೇಮಕಾತಿಯಾದ ವಿಷಯ:** ಕನ್ನಡ **ಬೋಧಿಸುವ ವಿಷಯ:** ಕನ್ನಡ

**ವಯಸ್ಸು (ವರ್ಷಗಳಲ್ಲಿ):** 48

**6ನೇ ಮತ್ತು 7ನೇ ತರಗತಿಯಲ್ಲಿ ಪದ್ಯ ಬೋಧನೆ ಕುರಿತು ಕನ್ನಡ ಭಾಷಾ ಶಿಕ್ಷಕರು ಹೊಂದಿರುವ ದೃಷ್ಟಿಕೋನ ಮತ್ತು ಸವಾಲುಗಳನ್ನು ತಿಳಿದುಕೊಳ್ಳಲು ಪ್ರಶ್ನೆಗಳನ್ನು ನೀಡಲಾಗಿದೆ. ಅವುಗಳಿಗೆ ನಿಮ್ಮ ಅಭಿಪ್ರಾಯ ನೀಡುವ ಮೂಲಕ ಉತ್ತರಿಸಿ. [ಅಭಿಪ್ರಾಯ = ಅಭಿ]**

1. 6ನೇ ಮತ್ತು 7ನೇ ತರಗತಿ ಮಕ್ಕಳಿಗೆ ಕನ್ನಡ ಪದ್ಯ ಬೋಧನೆ ಮಾಡುವುದು ಸರಳ ಅಥವಾ ಕಷ್ಟ ?

ಅಭಿ: ಸ್ವಲ್ಪ ಕಷ್ಟ

2. ಏಕೆ ?

ಅಭಿ: ಕನ್ನಡ ಪದ್ಯದಲ್ಲಿ ಈ ಪದಗಳು ಸರಳವಾಗಿರುವುದಿಲ್ಲ ಹಳೆಗನ್ನಡ ಕೂಡಿರುತ್ತವೆ

3. ಮಕ್ಕಳು ಸ್ವತಂತ್ರವಾಗಿ ಅರ್ಥೈಸುವದು ಮತ್ತು ಸಂಬಂಧೀಕರಿಸುವ ಸಾಮರ್ಥ್ಯ ಹೊಂದುವಂತೆ ಬೋಧಿಸಲು ಆಗುತ್ತಿದೆಯೇ ?

ಅಭಿ: ಆಗುತ್ತದೆ

4. ಪದ್ಯ ಬೋಧನೆ ಕುರಿತು ನಿಮ್ಮ ವಿಚಾರವೇನು ?

ಅಭಿ: ಪದ್ಯ ಸರಳವಾಗಿದ್ದರೆ ಮಕ್ಕಳು ಬೇಗನೆ ಅರ್ಥಮಾಡಿ-ಕೊಳ್ಳುತ್ತಾರೆ

5. ವಿದ್ಯಾರ್ಥಿಗಳು ಸ್ವತಂತ್ರವಾಗಿ ವಿಚಾರ ಮಾಡುವುದನ್ನು ಪ್ರದರ್ಶಿಸಲು ಸಾಧ್ಯವಾಗುವಂತೆ ಶಿಕ್ಷಕರಿಗೆ ಅರ್ಥಪೂರ್ಣವಾಗಿ ಬೋಧನೆ ಮಾಡಲು ಸಾಧ್ಯವಾಗುತ್ತಿದೆಯೇ ?

ಅಭಿ: ಆಗುತ್ತದೆ,

6. ಹೌದೆಂದರೆ ಹೇಗೆ ? / ಇಲ್ಲವಾದರೆ ಏಕೆ ಇಲ್ಲ ?

ಅಭಿ: ಪದ್ಯದಲ್ಲಿನ ಪದಗಳ ಅರ್ಥ ತಿಳಿಸುವುದು, ಪದ್ಯದ ಭಾವಾರ್ಥ ತಿಳಿಸುವುದು, ಪದ್ಯ ರಾಗಬದ್ಧವಾಗಿ ಹಾಡಿಸುವುದು,

7. ಪದ್ಯ ಬೋಧನೆಯಲ್ಲಿ ಪರಿಣಾಮಕಾರಿಯಾಗಿ ಸಾಧನಗಳನ್ನು ಬಳಸಿಕೊಳ್ಳುವಂಥ ವಾತಾವರಣ ತರಗತಿಯಲ್ಲಿ ಇದೆಯೇ ?

ಅಭಿ: ಇದೆ.

8. ಇಲ್ಲದಿದ್ದರೆ ಏಕೆ ಇಲ್ಲ ?

ಅಭಿ: —

9. ಮಕ್ಕಳು ಪದ್ಯ ಕಲಿಕೆಯಲ್ಲಿ ಆಸಕ್ತಿ ತೋರುತ್ತಿದ್ದಾರೆಯೇ ?

ಅಭಿ: ತೋರುತ್ತಾರೆ.

10. ಪದ್ಯ ಬೋಧನೆಯಿಂದ ಹೊಸ ಪದಗಳ ಪರಿಚಯ ಮಾಡಲು ಸಾಧ್ಯವಾಗುತ್ತಿದೆಯೇ?

ಅಭಿ: ಆಗುತ್ತದೆ,

11. ಕನ್ನಡ ಭಾಷೆಯ ಜ್ಞಾನವನ್ನು ಹೊಂದಲು ಇದು ಸಹಾಯಕವಾಗಿದೆಯೇ ?

ಅಭಿ: ಹೌದು

12. ಪದ್ಯ ಬೋಧನೆ ಮಕ್ಕಳಿಗೆ ಆನಂದ ಕೊಡುವುದೇ ? ಹಾಗೂ ಸ್ವತಂತ್ರವಾಗಿ ಅರ್ಥ ಕಲ್ಪಿಸಿಕೊಳ್ಳುವಂಥ ಮತ್ತು ಅದನ್ನು ಪ್ರದರ್ಶಿಸುವ ಸ್ವಾತಂತ್ರ್ಯ ತರಗತಿ ಕೋಣೆಯಲ್ಲಿ ವಿದ್ಯಾರ್ಥಿಗಳಿಗೆ ಇದೆಯೇ ?

ಅಭಿ: ಆನಂದ ಕೊಡುತ್ತದೆ ಆದರೆ ಅರ್ಥ ಕಲ್ಪಿಸಿಕೊಳ್ಳಲು ಸ್ವಲ್ಪ ಕಷ್ಟ

13. ಶಿಕ್ಷಕರು ವಿದ್ಯಾರ್ಥಿಗಳಿಗೆ ಪದ್ಯವನ್ನು ಒಂದಕ್ಕಿಂತ ಹೆಚ್ಚು ವೇಳೆ ಓದುವದಕ್ಕೆ, ಪ್ರತಿಸಾರಿ ಓದಿದ ನಂತರ ಮೂಡುವ ಹೊಸ ಅರ್ಥ, ವಿಚಾರ ಹಾಗೂ ಅನುಭವ ಕುರಿತು ತಿಳುವಳಿಕೆ ಮೂಡಿಸಲು ಆಗುತ್ತಿದೆಯೇ ?

ಅಭಿ: ಆಗುತ್ತದೆ.

14. ಪದ್ಯಗಳ ಮೂಲಕ ವಿದ್ಯಾರ್ಥಿಗಳನ್ನು ಸ್ವತಂತ್ರವಾಗಿ ವಿಚಾರ ಮಾಡುವಂತೆ ಮಾಡಲು ಸಾಧ್ಯವಾಗುತ್ತಿದೆಯೇ ?

ಅಭಿ: ಸ್ವಲ್ಪ ಕಷ್ಟ ಆಗಬಹುದು,

15. ಪದ್ಯ ಬೋಧನೆ ಕುರಿತು ನಿಮ್ಮ ಅವಶ್ಯಕತೆಗಳೇನು ?

ಅಭಿ: ಕವಿತೆ ಹಾಗೆ ಪದ್ಯದ ಭಾಷೆ ಸರಳವಾಗಿರಬೇಕು ಪದಗಳು ಸರಳವಾಗಿ ಅರ್ಥ ತಿಳಿಯುವ ಹಾಗೆ ಇರಬೇಕು

[illegible]
ಶಿಕ್ಷಕರ ಸಹಿ

**(ಆ) ಪ್ರಶ್ನೇವಾರು ವಿವರವಾದ ವಿಶ್ಲೇಷಣೆ :**

ಈ ಸಂಶೋಧನೆಯು ಶಿಕ್ಷಕರ ಸಂದರ್ಶನ ಹಾಗೂ ಅವರೊಂದಿಗೆ ಸಾಮೂಹಿಕ ಚರ್ಚೆಯ ಮಾದರಿಯಲ್ಲಿದ್ದು ಪ್ರಶ್ನಾವಳಿಯು 15 ಅಂಶಗಳನ್ನು ಒಳಗೊಂಡಿದೆ. ಇಲ್ಲಿ ಕೇಳಲಾದ ಪ್ರಶ್ನೆಗಳು ಮುಖ್ಯ ಮತ್ತು ಉಪ ಪ್ರಶ್ನೆಗಳಾಗಿದ್ದು ಹಾಗೂ ಮುಕ್ತ ಮತ್ತು ನಿರ್ದಿಷ್ಟ ಎರಡು ರೀತಿಗಳಾಗಿವೆ. ಅಂದರೆ ವಸ್ತುನಿಷ್ಟ ಮತ್ತು ವಿವರಣಾತ್ಮಕ ಪ್ರಶ್ನೆಗಳನ್ನು ಒಳಗೊಂಡಿದೆ.

ಇದು ಮುಖ್ಯವಾಗಿ 6ನೇ ಮತ್ತು 7ನೇ ತರಗತಿಗೆ ಬೋಧಿಸುವ ಕನ್ನಡ ಭಾಷಾ ಶಿಕ್ಷಕರು ಪದ್ಯ ಬೋಧನೆಯ ಬಗ್ಗೆ ಹೊಂದಿರುವ ದೃಷ್ಟಿಕೋನ ಮತ್ತು ಎದುರಿಸುತ್ತಿರುವ ಸವಾಲುಗಳನ್ನು ಗಮನದಲ್ಲಿರಿಸಿಕೊಂಡು ಸದರಿ ಶಿಕ್ಷಕರಿಂದ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಈ ರೀತಿಯಾಗಿ ಸಂಗ್ರಹಿಸಿದ ಮಾಹಿತಿಯು ಬೇರೆ ಬೇರೆ ಶಾಲೆಗಳೊಂದಿಗೆ ತುಲನಾತ್ಮಕ ತೆಗೆಯಲು ಸಹಾಯಕಾರಿಯಾಗಿದೆ.

ಎಂಟು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಿಗೆ ಭೇಟಿಕೊಟ್ಟು 6ನೇ ಮತ್ತು 7ನೇ ತರಗತಿಗೆ ಕನ್ನಡ ಭಾಷೆ ಬೋಧಿಸುವ ಶಿಕ್ಷಕರನ್ನು ಭೇಟಿಯಾಗಿ ಅವರ ಸಂದರ್ಶನ ಮಾಡಿ ಲಿಖಿತ ಪ್ರಶ್ನಾವಳಿಗೆ ಅವರು ನೀಡಿದ ಉತ್ತರವನ್ನು / ಅಭಿಪ್ರಾಯವನ್ನು ಕ್ರೋಢಿಕರಿಸಲಾಯಿತು. ಹಾಗೂ ಶಿಕ್ಷಕರಿಗೆ ಸಂದರ್ಶನದಲ್ಲಿ ಕೇಳಿದ ಪ್ರಶ್ನೆಗಳಲ್ಲಿ 4 ಪ್ರಮುಖ ಪ್ರಶ್ನೆಗಳನ್ನು ಕುರಿತು ಎಂಟು ಶಿಕ್ಷಕರನ್ನು ಒಂದುಕಡೆಗೆ ಸೇರಿಸಿ ಸಾಮೂಹಿಕ ಚರ್ಚೆ ಮಾಡಿ ಅವರ ಅಭಿಪ್ರಾಯಗಳನ್ನು ಕ್ರೋಢಿಕರಿಸಲಾಯಿತು. ಹೀಗೆ ಸಂದರ್ಶನದಿಂದ ಮತ್ತು ಚರ್ಚೆಯಿಂದ ಶಿಕ್ಷಕರ ಅಭಿಪ್ರಾಯಗಳನ್ನು ಕ್ರೋಢಿಕರಿಸಿ ಈ ಕೆಳಗಿನಂತೆ ವಿಶ್ಲೇಷಿಸಲಾಗಿದೆ.

**1. 6ನೇ ಮತ್ತು 7ನೇ ತರಗತಿ ಮಕ್ಕಳಿಗೆ ಕನ್ನಡ ಪದ್ಯ ಬೋಧನೆ ಮಾಡುವುದು ಸರಳ ಅಥವಾ ಕಷ್ಟ ?**

ಪದ್ಯಗಳಲ್ಲಿ ಬಳಸುವ ಅನೇಕ ಪದಗಳು ಬೇರೆ ಬೇರೆ ಅರ್ಥಗಳನ್ನು ನೀಡುವವು , ಕವಿಯ ಭಾವವನ್ನು ತಿಳಿದುಕೊಂಡು ಮಗುವಿನ ವಯಸ್ಸು , ಸಾಮರ್ಥ್ಯಕ್ಕನುಗುಣವಾಗಿ ಮಗುವಿಗೆ ಅರ್ಥವಾಗುವಂತೆ ಅವರ ಸೃಜನಾತ್ಮಕತೆಗೆ, ಕಲ್ಪನಾ ಶಕ್ತಿಗೆ ಅನುಕೂಲವಾಗುವಂತೆ ಹಾಗೂ ಅವರಲ್ಲಿ ಪದ್ಯದ ಬಗ್ಗೆ ಆಸಕ್ತಿ ಮೂಡುವಂತೆ ಶಿಕ್ಷಕರಿಗೆ ಪದ್ಯ ಬೋಧನೆ ಮಾಡುವುದು ಕಷ್ಟವಾಗುವುದೇ ಎಂದು ತಿಳಿಯಲು ಈ ಪ್ರಶ್ನೆಯನ್ನು ಕೇಳಲಾಯಿತು.

ಇದಕ್ಕೆ 6ನೇ ಮತ್ತು 7ನೇ ತರಗತಿ ಮಕ್ಕಳಿಗೆ ಕನ್ನಡ ಪದ್ಯಬೋಧನೆ ಮಾಡುವುದು ಕಷ್ಟವೆಂದು 4 ಶಿಕ್ಷಕರು ಪ್ರತಿಕ್ರಿಯೆ ನೀಡಿದ್ದು , ಶೇ. 50% ಪ್ರತಿಶತ ಶಿಕ್ಷಕರು ಕಷ್ಟವೆಂದು ಪ್ರತಿಕ್ರಿಯೆ ವ್ಯಕ್ತಪಡಿಸಿರುತ್ತಾರೆ. ಇದರಿಂದ

6ನೇ ಮತ್ತು 7ನೇ ತರಗತಿ ಮಕ್ಕಳಿಗೆ ಪದ್ಯಬೋಧನೆ ಮಾಡುವದು ಶಿಕ್ಷಕರಿಗೆ ಸವಾಲಾಗಿರುವದು ಕಂಡುಬರುತ್ತದೆ.

**2. ಏಕೆ ?**

ಈ ಕುರಿತು ಕಾರಣವನ್ನು ತಿಳಿದುಕೊಳ್ಳಲು ಶಿಕ್ಷಕರಿಗೆ ಉಪಪ್ರಶ್ನೆಯನ್ನು ಕೇಳಲಾಯಿತು. ಕವಿಯ ಆಶಯವನ್ನು ಕಲ್ಪನೆಯನ್ನು ಮಕ್ಕಳಿಗೆ ಅರ್ಥೈಸುವಲ್ಲಿ ಶಿಕ್ಷಕರಿಗೆ ಕಷ್ಟವಾಗುವದು. ಕೆಲವೊಂದನ್ನು ಸಮೀಕರಿಸಿ / ಸಂಬಂಧಿಕರಿಸಿ ಹೇಳುವಲ್ಲಿ ಕಷ್ಟವಾಗುವದು, ಪದ್ಯದಲ್ಲಿ ಬಳಸುವ ಪದಗಳನ್ನು ಅರ್ಥೈಸುವುದು, ಹಳೆಗನ್ನಡ ಪದಗಳನ್ನು ಅರ್ಥೈಸುವುದರಲ್ಲಿ, ಪೌರಾಣಿಕ ವಿಷಯಗಳನ್ನು ಹೊಂದಿರುವದು, ಗ್ರಾಂಥಿಕ ಹಾಗೂ ಆಡು ಭಾಷೆಯಲ್ಲಿ ವ್ಯಾತ್ಯಾಸವಿರುವುದು ಇತ್ಯಾದಿಗಳಿಂದ ಮಕ್ಕಳಿಗೆ ಪದ್ಯ ಅರ್ಥೈಸಿ ಹೇಳುವದು ಶಿಕ್ಷಕರಿಗೆ ಕಷ್ಟವಾಗುತ್ತಿರುವದು ಎಂದು ಶಿಕ್ಷಕರು ಪ್ರತಿಕ್ರಿಯೆ ನೀಡಿದ್ದು ಇದು ಶಿಕ್ಷಕರಿಗೆ ಸವಾಲಾಗುತ್ತಿರುವದು ಕಂಡುಬರುತ್ತದೆ.

**3. ಮಕ್ಕಳು ಸ್ವತಂತ್ರವಾಗಿ ಅರ್ಥೈಸುವದು ಮತ್ತು ಸಂಬಂಧೀಕರಿಸುವ ಸಾಮರ್ಥ್ಯ ಹೊಂದುವಂತೆ ಬೋಧಿಸಲು ಆಗುತ್ತಿದೆಯೇ?**

ಮಕ್ಕಳು ಸೃಜನಶೀಲರಾಗಿರುವರು. ಪದ್ಯ ಬೋಧನೆಯಿಂದ ಅವರ ಕಲ್ಪನೆ, ಆಸಕ್ತಿ, ಸಂವೇದನೆಗಳಿಗೆ ಪ್ರಚೋದನೆ ದೊರಕುವದು. ಪರಿಣಾಮಕಾರಿ ಪದ್ಯ ಬೋಧನೆ ಮಕ್ಕಳನ್ನು ಸ್ವತಂತ್ರವಾಗಿ ಅರ್ಥೈಸುವಂತೆ ಹಾಗೂ ಸಂಬಂಧೀಕರಿಸುವ ಸಾಮರ್ಥ್ಯ ಹೊಂದುವಂತೆ ಮಾಡುವುದು. ಮಕ್ಕಳು ಈ ಸಾಮರ್ಥ್ಯ ಹೊಂದುವಂತೆ ಬೋಧಿಸಲು ಶಿಕ್ಷಕರಿಗೆ ಆಗುತ್ತಿದೆಯೇ ಎಂಬುದನ್ನು ತಿಳಿಯಲು ಈ ಪ್ರಶ್ನೆಯನ್ನು ಕೇಳಲಾಗಿತ್ತು.

ಇದಕ್ಕೆ ಶೇ. 50% ಪ್ರತಿಶತ ಕಷ್ಟವಾಗುತ್ತಿರುವುದಾಗಿ ಪ್ರತಿಕ್ರಿಯಿಸಿರುತ್ತಾರೆ. ಎಂದರೆ 3 ಶಿಕ್ಷಕರು ಮಕ್ಕಳು ಸ್ವತಂತ್ರವಾಗಿ ಅರ್ಥೈಸುವದು ಮತ್ತು ಸಂಬಂಧೀಕರಿಸುವ ಸಾಮರ್ಥ್ಯ ಹೊಂದುವಂತೆ ಬೋಧಿಸಲು ಆಗುತ್ತಿಲ್ಲವೆಂದರೆ, 1 ಶಿಕ್ಷಕ ಕೇವಲ ಅರ್ಥೈಸುವಂತೆ ಮಾತ್ರ ಬೋಧಿಸಲು ಆಗುತ್ತಿದ್ದು ಸಂಬಂಧೀಕರಿಸುವ ಸಾಮರ್ಥ್ಯ ಹೊಂದುವಂತೆ ಬೋಧಿಸಲು ಆಗುತ್ತಿಲ್ಲವೆಂದು ಪ್ರತಿಕ್ರಿಯೆ ನೀಡಿರುವದು, ಪದ್ಯ ಬೋಧನೆಯ ಒಂದು ಮುಖ್ಯ ಉದೇಶವಾದ ಸ್ವತಂತ್ರವಾಗಿ ಅರ್ಥ್ಯಸುವದು ಮತ್ತು ಸಂಬಧೀಕರಿಸುವ ಸಾಮರ್ಥ್ಯ ಮಕ್ಕಳಲ್ಲಿ ಮೂಡಿಸುವಲ್ಲಿ ಶಿಕ್ಷಕರು ಸವಾಲು ಎದುರಿಸುತ್ತಿರುವದು ಕಂಡು ಬರುತ್ತದೆ.

**4. ಪದ್ಯ ಬೋಧನೆ ಕುರಿತು ನಿಮ್ಮ ವಿಚಾರವೇನು ?**

ಪದ್ಯ ಬೋಧನೆ ಸಂವೇದನಾಶೀಲವಾದುದು. ಶಿಕ್ಷಕರು ಕವಿಯ ಆಶಯವನ್ನು ಅರ್ಥೈಸಿಕೊಂಡು ಕವಿಯ ಆಶಯದೊಂದಿಗೆ ಮಕ್ಕಳ ಕಲ್ಪನೆ, ಸೃಜನಶೀಲತೆಗೆ ಪ್ರಚೋದನೆಕೊಡುವಂತೆ ಬೋಧಿಸುವುದು ಅವಶ್ಯಕ. ಜೊತೆಗೆ ಮಕ್ಕಳು ಆಸಕ್ತಿಯಿಂದ ಆಲಿಸುವಂತೆ, ಸ್ವತಂತ್ರವಾಗಿ ವಿಚಾರ ಮಾಡುವಂತೆ, ಬದುಕಿನೊಂದಿಗೆ ಅಥವಾ ಇನ್ನೊಂದರೊಂದಿಗೆ ಸಂಬಂಧೀಕರಿಸುವ ಸಾಮರ್ಥ್ಯ ಮಕ್ಕಳಲ್ಲಿ ಮೂಡುವಂತೆ ಬೋಧಿಸುವುದು ಮಕ್ಕಳ ಭವಿಷ್ಯದ / ಪ್ರಗತಿಯ ದೃಷ್ಟಿಯಿಂದ ಉತ್ತಮವಾದುದು. ಈ ದೃಷ್ಟಿಕೋನ ಶಿಕ್ಷಕರಲ್ಲಿ ಇದೆಯೇ ಎಂಬುದನ್ನು ತಿಳಿಯಲು ಈ ಪ್ರಶ್ನೆಯನ್ನು ಕೇಳಲಾಗಿತ್ತು.

ಇದಕ್ಕೆ ಶಿಕ್ಷಕರು ,

i. ಪದ್ಯದ ಹಿನ್ನಲೆ, ಕವಿಯ ಆಶಯ ತಿಳಿಯುವುದು ಮತ್ತು ಮಕ್ಕಳಿಗೆ ಈ ಬಗ್ಗೆ ತಿಳುವಳಿಕೆ ನೀಡುವುದು.

ii. ಪದ್ಯ ಬೋಧನೆ ಸ್ವಲ್ಪ ಕಷ್ಟ.

iii. ಹೊಸಗನ್ನಡ ಪದ್ಯ ಹೇಳಲು ಸರಳ ಆದರೆ ಹಳೆಗನ್ನಡ ಪದ್ಯಗಳನ್ನು ಮಕ್ಕಳ ಸಾಮರ್ಥ್ಯಕ್ಕನುಗುಣವಾಗಿ ಬೋಧಿಸಲು ಆಗುತ್ತಿಲ್ಲ.

iv. ಪದ್ಯ ಸರಳವಾಗಿದ್ದರೆ ಮಕ್ಕಳು ಬೇಗನೆ ಅರ್ಥ ಮಾಡಿಕೊಳ್ಳುತ್ತಾರೆ.

v. ವಿದ್ಯಾರ್ಥಿಗಳ ಆಸಕ್ತಿ ಹೆಚ್ಚಿಸುವುದು ಹಾಡುಗಾರಿಕೆಯಿಂದ.

vi. ಮಕ್ಕಳಿಗೆ ಮನಮುಟ್ಟುವ ಹಾಗೆ ಮತ್ತು ದೀರ್ಘಕಾಲ ನೆನಪಿನಲ್ಲಿಟ್ಟುಕೊಳ್ಳುವಂತೆ ಲಯಬದ್ದವಾಗಿ ಮತ್ತು ಸ್ವರದ ಮೂಲಕ ಹೇಳುವದು.

ಇತ್ಯಾದಿಯಾಗಿ ಪ್ರತಿಕ್ರಿಯಿಸಿರುವರು. ಇದು ಶಿಕ್ಷಕರಲ್ಲಿ ಮಕ್ಕಳಿಗೆ ಅರ್ಥವಾಗುವಂತೆ ಹಾಗೂ ಆಸಕ್ತಿ ಮೂಡುವಂತೆ ಬೋಧಿಸುವಲ್ಲಿ ಹಾಡುಗಾರಿಕೆ ಬರಲಾರದ್ದು, ಹಳೆಗನ್ನಡ ಸರಿಯಾಗಿ ಅರ್ಥವಾಗಲಾರದ್ದು ಇತ್ಯಾದಿಯಿಂದ ಪದ್ಯ ಬೋಧನೆ ಬಗ್ಗೆ ಹೆದರಿಕೆ ಇರುವದು ಕಂಡುಬರುತ್ತದೆ.

**5. ವಿದ್ಯಾರ್ಥಿಗಳು ಸ್ವತಂತ್ರವಾಗಿ ವಿಚಾರ ಮಾಡುವುದನ್ನು ಪ್ರದರ್ಶಿಸಲು ಸಾಧ್ಯವಾಗುವಂತೆ ಶಿಕ್ಷಕರಿಗೆ ಅರ್ಥಪೂರ್ಣವಾಗಿ ಬೋಧನೆ ಮಾಡಲು ಸಾಧ್ಯವಾಗುತ್ತಿದೆಯೇ ?**

ಮಕ್ಕಳು ಸೃಜನಶೀಲರಾಗಿದ್ದು, ಅವರು ಕಲ್ಪನೆ ಮಾಡುವರು ಹಾಗೂ ಸ್ವತಂತ್ರವಾಗಿ ವಿಚಾರ ಮಾಡುವುದನ್ನು ತರಗತಿಯಲ್ಲಿ, ಬೇರೆಡೆಯಲ್ಲಿ ಪ್ರದರ್ಶಿಸಲು ಸಾಧ್ಯವಾಗುವಂತೆ ಮಕ್ಕಳಲ್ಲಿ ಆತ್ಮವಿಶ್ವಾಸ ಮೂಡಿಸುವಂತೆ ಶಿಕ್ಷಕರಿಗೆ ಬೋಧಿಸಲು ಸಾಧ್ಯವಾಗುತ್ತಿದೆಯೇ ಎಂಬುದನ್ನು ಗಮನದಲ್ಲಿರಿಸಿಕೊಂಡು ಈ ಪ್ರಶ್ನೆಯನ್ನು ಕೇಳಲಾಗಿತ್ತು.

ಇದಕ್ಕೆ 1 ಶಿಕ್ಷಕರು ಸಾಧ್ಯವಾಗುತ್ತಿಲ್ಲವೆಂದು ಹಾಗು 1 ಶಿಕ್ಷಕರು ಕೆಲವೊಂದು ಪದ್ಯಗಳಿಗೆ ಮಾತ್ರ ಇದು ಸಾಧ್ಯವೆಂದು ಪ್ರತಿಕ್ರಿಯಿಸಿದ್ದು ಮಕ್ಕಳು ಸ್ವತಂತ್ರವಾಗಿ ವಿಚಾರ ಮಾಡುವುದನ್ನು ಪ್ರದರ್ಶಿಸಲು ಸಾಧ್ಯವಾಗುವಂತೆ ಶಿಕ್ಷಕರಿಗೆ ಬೋಧಿಸುವಲ್ಲಿ ಕಷ್ಟವಾಗುತ್ತಿದೆಎಂಬುದು ತಿಳಿದು ಬರುತ್ತದೆ.

**6. ಏಕೆ ?**

ಈ ಮೇಲಿನ ಪ್ರಶ್ನೆಗೆ ಪೂರಕವಾಗಿ ಉಪಪ್ರಶ್ನೆ ಏಕೆ ಎಂದುಅವರ ವಿಚಾರವನ್ನು ತಿಳಿಯಲು ಕೇಳಲಾಯಿತು. ಇದಕ್ಕೆ ಶಿಕ್ಷಕರಲ್ಲಿ ವಿಷಯದ ಆಳವಾದ ತಿಳುವಳಿಕೆ ಇಲ್ಲದಿರುವುದರಿಂದ ಇದು ಸಾಧ್ಯವಾಗುತ್ತಿಲ್ಲ. ಜೊತೆಗೆ ಪೌರಾಣಿಕ ಘಟನೆಗಳ ಜೊತೆಗೆ ಪದ್ಯ ಸಮೀಕರಿಸಿ ಹೇಳುವದು , ಪ್ರಕೃತಿಯಜೊತೆ ಸೇರಿಸಿಕೊಂಡು, ನಿತ್ಯಜೀವನಕ್ಕೆ ಹೋಲಿಕೆ ಮಾಡಿ ಹೇಳುವುದು ಕಷ್ಟಕರವೆಂದು ಪ್ರತಿಕ್ರಿಯೆ ನೀಡುವರು.

ಇದು ಶಿಕ್ಷಕರಿಗೆ ಹೆಚ್ಚಿನ ವಿಷಯಗಳ ಬಗ್ಗೆ ಮಾಹಿತಿ ಇರದೇ ಇರುವುದು, ಪದ್ಯದಲ್ಲಿ ಬರುವ ಪದಗಳನ್ನು, ವಿಷಯಗಳನ್ನು ಇನ್ನೊಂದರೊಂದಿಗೆ ಹೋಲಿಸಿ ಬೋಧಿಸುವುದರಲ್ಲಿ ಕಷ್ಟವಾಗುತ್ತಿದ್ದುದ್ದು ಆ ಮೂಲಕ ವಿದ್ಯಾರ್ಥಿಗಳ ಸ್ವತಂತ್ರವಾಗಿ ವಿಚಾರ ಮಾಡಿ ಪ್ರದರ್ಶಿಸುವಂತೆ ಅರ್ಥಪೂರ್ಣವಾಗಿ ಬೋಧಿಸಲು ಶಿಕ್ಷಕರಿಗೆ ಕಷ್ಟವಾಗುತ್ತಿರುವದು ಕಂಡು ಬರುತ್ತದೆ.

**7. ಪದ್ಯ ಬೋದನೆಯಲ್ಲಿ ಪರಿಣಾಮಕಾರಿಯಾಗಿ ಸಾಧನಗಳನ್ನು ಬಳಸಿಕೊಳ್ಳುವಂಥ ವಾತಾವರಣ ತರಗತಿಯಲ್ಲಿ ಇದೆಯೇ ?**

ಮಕ್ಕಳ ಸೃಜನಶೀಲತೆಗೆ, ಕಲ್ಪನೆಗೆ ಹಾಗೂ ಅವರಲ್ಲಿ ಪದ್ಯ ಕುರಿತು ಆಸಕ್ತಿ ಮೂಡಲು ಶಿಕ್ಷಕರು ಬೋಧಿಸುವ ಪದ್ಯ ಪರಿಣಾಮಕಾರಿಯಾಗಲು / ಮಕ್ಕಳ ಮೇಲೆ ಪರಿಣಾಮ ಬೀರಲು ಇತರ ಸಾಧನಗಳನ್ನು, ಆಡಿಯೋ, ವೀಡಿಯೋ, ಪೇಂಟಿಂಗ್ , ಆಕರ ಗ್ರಂಥಗಳು ಹಾಗೂ ಕವನ ಸಂಕಲನಗಳು ಇತ್ಯಾದಿ

ಸಾಧನಗಳನ್ನು ತರಗತಿಯಲ್ಲಿ ಬಳಸಲು ಸೌಲತ್ತುಗಳು ಹಾಗೂ ತರಗತಿಯಲ್ಲಿ ಪೂರಕ ವಾತಾವರಣ ಇದೆಯೇ ಎಂಬುದನ್ನು ಗಮದಲ್ಲಿರಿಸಿ ಈ ಪ್ರಶ್ನೆಯನ್ನು ಕೇಳಲಾಗಿತ್ತು.

ಇದಕ್ಕೆ ಎಲ್ಲ ಶಿಕ್ಷಕರು ತರಗತಿಯಲ್ಲಿ ಸಾಧನಗಳನ್ನು ಬಳಸುವಂಥಹ ವಾತಾವರಣ ಇದೆಯೆಂದು ಆದರೆ ಸಾಧನ ಸಲಕರಣೆಗಳ ಕೊರತೆ ಇರುವುದೆಂದು ಪ್ರತಿಕ್ರಿಯಿಸಿರುವುದು ಶಿಕ್ಷಕರು ಪರಿಣಾಮಕಾರಿಯಾಗಿ ಬೋಧಿಸಲು ಇತರ ಸಾಧನ ಸಲಕರಣೆಗಳ ಕೊರತೆಯನ್ನು ಅನುಭವಿಸುತ್ತಿರುವದು ಕಂಡು ಬರುತ್ತಿದೆ.

**8. ಇಲ್ಲದಿದ್ದರೆ ಏಕೆ ಇಲ್ಲ ?**

ಈ ಉಪಪ್ರಶ್ನೆಗೆ ಕೇವಲ ಒಬ್ಬ ಶಿಕ್ಷಕರು ಪ್ರತಿಕ್ರಿಯಿಸಿದ್ದು ಸಾಧನ ಸಲಕರಣೆಗಳು ಇರದಿದ್ದರೆ ಕವಿಯ ಕವನ ಸಂಕಲನ, ಕವಿಯ ಆಶಯ ಹಾಗೂ ಕವನದ ಒಳಾರ್ಥ ತಿಳಿಯಲು ಸಾಧ್ಯವಾಗುವುದಿಲ್ಲವೆಂದು ಪ್ರತಿಕ್ರಿಯಿಸಿರುವರು. ಕಾರಣ ತರಗತಿಯಲ್ಲಿ ಸಾಧನ ಸಲಕರಣೆಗಳನ್ನು ಬಳಸುವಂತಹ ವಾತಾವರಣವಿದ್ದರೂ ಶಾಲೆಯಲ್ಲಿ ಅವುಗಳ ಕೊರತೆ ಇರುವುದು ಶಿಕ್ಷಕರಿಗೆ ಪದ್ಯವನ್ನು ಮಕ್ಕಳಿಗೆ ಕವಿಯ ಆಶಯ ಮತ್ತು ಕವನದ ಒಳಾರ್ಥದೊಂದಿಗೆ ಬೋಧಿಸುವಲ್ಲಿ ಕಷ್ಟವಾಗುತ್ತಿರುವದು ಎಂದು ತಿಳಿದು ಬರುತ್ತದೆ.

**9. ಮಕ್ಕಳು ಪದ್ಯ ಕಲಿಕೆಯಲ್ಲಿ ಆಸಕ್ತಿ ತೋರುತ್ತಿದ್ದಾರೆಯೇ ?**

ಮಕ್ಕಳು ಸೃಜನಶೀಲರು. ಅವರ ಕಲ್ಪನೆ, ಸಂವೇದನೆಗಳು ಜಗತ್ತನ್ನು ಹೊಸದಾಗಿಕಾಣುವಂತದ್ದು. ಇವರ ಕಲ್ಪನೆ, ಸೃಜನಶೀಲತೆಗೆ, ಸಂವೇದನೆಗಳಿಗೆ ಪ್ರಚೋದನೆ ನೀಡುವಂತೆ ಶಿಕ್ಷಕರು ಬೋಧಿಸಿದರೆ ಮಕ್ಕಳಿಗೆ ಪದ್ಯ ಕಲಿಕೆಯಲ್ಲಿ ಆಸಕ್ತಿ ಮೂಡುವುದು ಎಂಬುದನ್ನು ಗಮನದಲ್ಲಿಟ್ಟು ಈ ಪ್ರಶ್ನೆಯನ್ನು ಕೇಳಲಾಗಿತ್ತು.

ಇದಕ್ಕೆ ಪದ್ಯದಲ್ಲಿಯ ಭಾಷೆಯ ಶೈಲಿ, ಅದರಲ್ಲಿಯ ಬಳಸಿದ ಪದಗಳು ಮಕ್ಕಳಿಗೆ ತಿಳಿದರೆ ಮಕ್ಕಳಿಗೆ ಪದ್ಯದಲ್ಲಿ ಆಸಕ್ತಿ ಮೂಡುವದು ಎಂಬ ಪ್ರತಿಕ್ರಿಯೆಯನ್ನು ಶಿಕ್ಷಕರು ನೀಡುವರು. ಪದ್ಯ ಬೋಧನೆಯಲ್ಲಿ ಹಾಡುವುದು, ಇತರ ಸಾಧನ ಸಲಕರಣೆಗಳನ್ನು ಬಳಸಿದಾಗ ಮಕ್ಕಳು ಪದ್ಯ ಕಲಿಕೆಯಲ್ಲಿ ಆಸಕ್ತಿ ತೋರುವರು, ಆದರೆ ಪದ್ಯವನ್ನು ಹಾಡಿ ಬೋಧಿಸುವುದು ಎಲ್ಲ ಶಿಕ್ಷಕರಿಂದ ಕಷ್ಟ ಹಾಗೂ ಶಾಲೆಗಳಲ್ಲಿ ಸಾಧನ ಸಲಕರಣೆಗಳ ಕೊರತೆಯು ಶಿಕ್ಷಕರ ಪದ್ಯ ಬೋಧನೆಯನ್ನು ಮಕ್ಕಳಲ್ಲಿ ಆಸಕ್ತಿ ಮೂಡಿಸುವ ಮಟ್ಟಿಗೆ ಪರಿಣಾಮಕಾರಿ ಆಗದೇ ಇರುವುದು ತಿಳಿದು ಬರುತ್ತದೆ.

10. **ಪದ್ಯ ಬೋಧನೆಯಿಂದ ಹೊಸ ಪದಗಳ ಪರಿಚಯ ಮಾಡಲು ಸಾಧ್ಯವಾಗುತ್ತಿದೆಯೇ** ?

ಪದ್ಯ ಭಾಷೆಯ ಬೆಳವಣಿಗೆಗೆ ಸಹಾಯಕಾರಿಯಾದುದು. ಪದ್ಯರಚನೆಯಿಂದ, ಪದ್ಯ ಬೋಧನೆ, ವಾಚನದಿಂದ, ಅನೇಕ ವೇಳೆ ಹೊಸ ಪದಗಳು ಹುಟ್ಟುವವು. ಇದು ಮಕ್ಕಳಲ್ಲಿ ಆಸಕ್ತಿ ,ಉತ್ಸಾಹ ಮೂಡಿಸಲು ಸಹಾಯಕಾರಿಯಾಗುವದು ಎಂಬುದನ್ನು ಗಮನದಲ್ಲಿರಿಸಿ ಈ ಪ್ರಶ್ನೆಯನ್ನು ಕೇಳಲಾಯಿತು.

ಇದಕ್ಕೆ ಎಲ್ಲ ಶಿಕ್ಷಕರು ಸಾಧ್ಯವಾಗುವುದೆಂದು ಪ್ರತಿಕ್ರಿಯಿಸಿರುವರು. ಆದರೆ ಅವರ ಸೇವಾ ಅವಧಿಯಲ್ಲಿ ಈ ರೀತಿ ಯಾವುದಾದರೂ ಹೊಸ ಪದಗಳ ಉಗಮ ಅವರಿಂದ ಅಥವಾ ಮಕ್ಕಳಿಂದ ಆಗಿರುವ ಬಗ್ಗೆ ಚರ್ಚೆಯಲ್ಲಿ ಬಂದಾಗ ಅವರತ್ತಿರ ಉತ್ತರವಿರಲಿಲ್ಲ. ಪದ್ಯ ಬೋಧನೆಯಿಂದ ಹೊಸ ಪದಗಳ ಪರಿಚಯ ಮಾಡಲು ಸಾಧ್ಯವಾಗುತ್ತದೆ ಎಂಬ ನಂಬಿಕೆ ಅವರಿಗಿದ್ದರು ಈ ದಿಶೆಯಲ್ಲಿ ಪ್ರಯತ್ನ ಆಗಿರದ್ದು ಕಂಡುಬರುತ್ತದೆ.

**11**. **ಕನ್ನಡ ಭಾಷೆಯಜ್ಞಾನವನ್ನು ಹೊಂದಲು ಇದು ಸಹಾಯಕವಾಗಿದೆಯೇ** ?

ಭಾಷಾಜ್ಞಾನವನ್ನು ಹೆಚ್ಚಿಸುವಲ್ಲಿ ಭಾಷಾ ಶಿಕ್ಷಕರ ಪಾತ್ರ ಪ್ರಮುಖವಾದುದು. ಪದ್ಯ ಸಾಹಿತ್ಯ, ಹೊಸಹೊಸ ಪದಗಳ ಬಳಕೆ, ಭಾಷೆಯ ಬಳಕೆ, ಅದರ ಹೊರ–ಒಳ ಅರ್ಥ ಇವು ಕನ್ನಡ ಭಾಷೆಯ ಜ್ಞಾನವನ್ನು ಹೆಚ್ಚಿಗೆ ಮಾಡುವಲ್ಲಿ ಸಹಾಯಕಾರಿಯಾದುದು ಎಂಬುದನ್ನು ಗಮನದಲ್ಲಿಟ್ಟು ಈ ಪ್ರಶ್ನೆಯನ್ನು ಕೇಳಲಾಯಿತು.
ಇದಕ್ಕೆ ಎಲ್ಲ ಶಿಕ್ಷಕರು ಪದ್ಯರಚನೆ, ಬೋಧನೆ ಇತ್ಯಾದಿಗಳಿಂದ ಭಾಷಾಜ್ಞಾನವನ್ನು ಹೊಂದಲು ಸಹಾಯಕವಾಗುವುದೆಂದು ಹಾಗೂ ಓದುವುದರಿಂದಲೂ ಭಾಷಾಜ್ಞಾನ ಹೆಚ್ಚಿಸಲು ಸಹಕಾರಿಯಾಗುವದು ಎಂದು ಅಭಿಪ್ರಾಯ ವ್ಯಕ್ತ ಪಡಿಸುವರು. ಈ ದಿಶೆಯಲ್ಲಿ ಶಿಕ್ಷಕರು ಪಠ್ಯಪುಸ್ತಕದೊಂದಿಗೆ ಇತರ ಸಾಹಿತ್ಯವನ್ನು ಓದುವದು ಅವಶ್ಯಕವೆಂಬುದು ತಿಳಿದುಬರುತ್ತದೆ.

**12**. **ಪದ್ಯ ಬೋಧನೆ ಮಕ್ಕಳಿಗೆ ಆನಂದಕೊಡುವುದೇ** ? **ಹಾಗೂ ಸ್ವತಂತ್ರವಾಗಿ ಅರ್ಥ ಕಲ್ಪಿಸಿಕೊಳ್ಳುವಂಥ ಮತ್ತು ಅದನ್ನು ಪ್ರದರ್ಶಿಸುವ ಸ್ವಾತಂತ್ರ್ಯ ತರಗತಿ ಕೋಣೆಯಲ್ಲಿ ವಿದ್ಯಾರ್ಥಿಗಳಿಗೆ ಇದೆಯೇ** ?

ಮಗುವಿನಲ್ಲಿನ ಸೃಜನಶೀಲತೆಗೆ ಮಾರ್ಗದರ್ಶನ, ಪ್ರೋತ್ಸಾಹ ತರಗತಿಯಲ್ಲಿ ಭಾಷಾ ಶಿಕ್ಷಕರಿಂದಲೇ ಪ್ರಮುಖವಾಗಿ ಆಗಬೇಕಾದುದು. ಶಿಕ್ಷಕರು ಹಾಡುವುದರ ಮೂಲಕ, ಅರ್ಥಪೂರ್ಣವಾಗಿ ವಾಚನ ಮಾಡುವುದರ ಮೂಲಕ ಮಕ್ಕಳಲ್ಲಿ ಪದ್ಯ ಆನಂದ ಮೂಡಿಸುವುದು. ಇದರಿಂದ ಅವರು ಸ್ವತಂತ್ರವಾಗಿ ಅರ್ಥ

ಕಲ್ಪಿಸಿಕೊಳ್ಳುವದಕ್ಕೆ ಸಹಾಯಕಾರಿಯಾಗುವದು. ಕಾರಣ ಪದ್ಯ ಪ್ರತಿಯೊಬ್ಬರಿಗೂ ಬೇರೆ ಬೇರೆ ಅರ್ಥಕೊಡುವದು. ಆದರೆ ಶಿಕ್ಷಕರು ಸಮಯದ ಅಭಾವ, ದಾಖಲೀಕರಣ , ಹಾಡುಗಾರಿಕೆ ಬರಲಾರದ್ದು, ನಿರುತ್ಸಾಹ , ಪಠ್ಯ ಮುಗಿಸುವ ಆತುರ ಇತ್ಯಾದಿ ಕಾರಣಗಳಿಂದ ಅವರ ಬೋಧನೆ ಮಕ್ಕಳಿಗೆ ಆನಂದ ಕೊಡುವುದೇ ಹಾಗೂ ಮಕ್ಕಳು ಸ್ವತಂತ್ರವಾಗಿ ಅರ್ಥ ಕಲ್ಪಿಸಿಕೊಳ್ಳುವಂಥ ಮತ್ತು ತರಗತಿಯಲ್ಲಿ ಅಭಿವ್ಯಕ್ತಿಗೆ ಅವಕಾಶ ನೀಡುವರೆ ಎಂಬುದನ್ನು ಗಮನದಲ್ಲಿಟ್ಟು ಈ ಪ್ರಶ್ನೆಯನ್ನು ಕೇಳಲಾಯಿತು.

ಇದಕ್ಕೆ ಮಕ್ಕಳಿಗೆ ಹಾಡಿ ಪದ್ಯವನ್ನು ಬೋಧಿಸಿದರೆ ಅವರಿಗೆ ಆಸಕ್ತಿ ಆನಂದ ಮೂಡುವದು, ಅನೇಕ ಮಕ್ಕಳಿಗೆ ಪದ್ಯದ ಅರ್ಥ್ ಕಲ್ಪಿಸಿಕೊಳ್ಳಲು ಕಷ್ಟವಾಗುವದು. ಕಾರಣ ಮಕ್ಕಳ ಆಡು ಮಾತು ಮತ್ತು ಗ್ರಾಂಥಿಕ ಭಾಷೆ ಬೇರೆ ಬೇರೆ ಆಗಿದ್ದು ಗ್ರಾಂಥಿಕ ಪದಗಳನ್ನು ಅರ್ಥ ಮಾಡಿಕೊಳ್ಳಲು ಮಕ್ಕಳಿಗೆ ತೊಂದರೆಯಾಗುವದು. ಅನೇಕ ವಿದ್ಯಾರ್ಥಿಗಳು ತಮ್ಮ ಸ್ವತಂತ್ರ ವಿಚಾರಗಳನ್ನು ತರಗತಿಕೋಣೆಯಲ್ಲಿ ವ್ಯಕ್ತ ಪಡಿಸಲು ಹಿಂಜರಿಯುವರು ಎಂಬ ಶಿಕ್ಷಕರ ಅಭಿಪ್ರಾಯದಿಂದ ಶಿಕ್ಷಕರು ಹಾಡುಗಾರಿಕೆಯಲ್ಲಿ ಕಷ್ಟ ಅನುಭವಿಸುವರು ಎಂದು ತಿಳಿದುಬರುತ್ತದೆ.

**13. ಶಿಕ್ಷಕರು ವಿದ್ಯಾರ್ಥಿಗಳಿಗೆ ಪದ್ಯವನ್ನು ಒಂದಕ್ಕಿಂತ ಹೆಚ್ಚು ವೇಳೆ ಓದುವದಕ್ಕೆ, ಪ್ರತಿಸಾರಿ ಓದಿದ ನಂತರ ಮೂಡುವ ಹೊಸ ಅರ್ಥ, ವಿಚಾರ ಹಾಗೂ ಅನುಭವ ಕುರಿತು ತಿಳುವಳಿಕೆ ಮೂಡಿಸಲು ಆಗುತ್ತಿದೆಯೇ ?**

ಪದ್ಯ ಪ್ರತಿಯೊಬ್ಬರಿಗೂ ಹೊಸ ಅರ್ಥ ಕೊಡುವದು, ಪದ್ಯವನ್ನು ಒಂದಕ್ಕಿಂತ ಹೆಚ್ಚು ವೇಳೆ ಓದುವದರಿಂದ ವಿದ್ಯಾರ್ಥಿಗಳಲ್ಲಿ ಸ್ವತ: ಅರ್ಥ ಮಾಡಿಕೊಳ್ಳುವಂಥ, ಅನುಭವಿಸುವಂಥ ಮತ್ತು ವಿಚಾರ ಮಾಡುವಂಥ ಸಾಮರ್ಥ್ಯ ಬರುವದು. ಪ್ರಯುಕ್ತ ಶಿಕ್ಷಕರು ಈ ತಿಳುವಳಿಕೆ ಮಕ್ಕಳಿಗೆ ಪದ್ಯ ಬೋಧನೆಯೊಂದಿಗೆ ನೀಡುವರೇ ಎಂದು ತಿಳಿಯಲು ಈ ಪ್ರಶ್ನೆಯನ್ನು ಕೇಳಲಾಯಿತು.

ಇದಕ್ಕೆ ಒಬ್ಬ ಶಿಕ್ಷಕಿ ಇಲ್ಲ ಎಂಬ ಪ್ರತಿಕ್ರಿಯೆ ನೀಡುವರು. ಪ್ರಯುಕ್ತ ವಿದ್ಯಾರ್ಥಿಗಳಿಗೆ ಸ್ವತಂತ್ರವಾಗಿ ಪದ್ಯವನ್ನು ಒಂದಕ್ಕಿಂತ ಹೆಚ್ಚು ವೇಳೆ ಓದುವುದಕ್ಕೆ , ಮೂಡುವ ಹೊಸ ಅರ್ಥ, ವಿಚರ ಮತ್ತು ಅನುಭವ ಇತ್ಯಾದಿ ಹೆಚ್ಚಿನ ವಿಷಯ ತಿಳಿಸುವಲ್ಲಿ ಶಿಕ್ಷಕರಿಗೆ ಆಗುತ್ತಿಲ್ಲವೆಂಬುದು ಕಂಡು ಬರುವದು.

**14. ಪದ್ಯಗಳ ಮೂಲಕ ವಿದ್ಯಾರ್ಥಿಗಳನ್ನು ಸ್ವತಂತ್ರವಾಗಿ ವಿಚಾರ ಮಾಡುವಂತೆ ಮಾಡಲು ಸಾಧ್ಯವಾಗುತ್ತಿದೆಯೇ ?**

ಮಕ್ಕಳಲ್ಲಿ ಆಸಕ್ತಿ, ಕಲ್ಪನೆ, ಹಾಗೂ ಸಂವೇದನೆಗಳು ಜಾಗೃತವಾಗಿರುವದರಿಂದ ಅವರ ಆ ಸಾಮರ್ಥ್ಯವನ್ನು ತಿಳಿದುಕೊಂಡು ಪದ್ಯಗಳ ಮೂಲಕ ಅವರು ಸ್ವತಂತ್ರವಾಗಿ ವಿಚಾರ ಮಾಡುವಂತೆ ಮಾಡಿ ಮಕ್ಕಳ ಸೃಜನಶೀಲತೆಗೆ ಪ್ರಚೋದಿಸುವರೆಎಂಬುದನ್ನು ಗಮನದಲ್ಲಿರಿಸಿ ಈ ಪ್ರಶ್ನೆಯನ್ನು ಕೇಳಲಾಯಿತು.

ಇದಕ್ಕೆ ಒಬ್ಬ ಶಿಕ್ಷಕರು ಇಲ್ಲವೆಂದರೆ, ಇನ್ನೋರ್ವರು ಸ್ವಲ್ಪಕಷ್ಟವೆನ್ನುವರು. ಮಕ್ಕಳಲ್ಲಿ ಸ್ವತಂತ್ರವಾಗಿ ವಿಚಾರ ಮಾಡುವಂತೆ ಬೋಧಿಸಲು ಶಿಕ್ಷಕರಿಗೆ ಕಷ್ಟವಾಗುವುದು ಎಂಬುದು ಕಂಡುಬರುತ್ತದೆ.

**15. ಪದ್ಯ ಬೋಧನೆ ಕುರಿತು ನಿಮ್ಮ ಅವಶ್ಯಕತೆಗಳೇನು ?**

ತರಗತಿಯಲ್ಲಿ ಪದ್ಯ ಬೋಧನೆ ಕೇವಲ ಬೋಧನೆ ಆಗದೆಅದು ಮಕ್ಕಳ ಸೃಜನಶೀಲತೆಯನ್ನು ಪ್ರೋತ್ಸಾಹಿಸುವಂತೆ ಇರಬೇಕು. ಅವರ ಆಸಕ್ತಿ, ಕಲ್ಪನೆ ಮತ್ತು ಸಂವೇದನೆಗಳನ್ನು ಪ್ರಚೋದಿಸುವಂತೆ ಶಿಕ್ಷಕರು ಪದ್ಯ ಬೋಧಿಸಿದರೆ ಉತ್ತಮ. ಆದರೆ ಶಿಕ್ಷಕರು ಅನೇಕ ಸವಾಲುಗಳನ್ನು ಎದುರಿಸುವದರಿಂದ ಅವರ ವಿಚಾರದಲ್ಲಿ ಇದಕ್ಕೆ ಸಹಾಯಕವಾಗುವಂತೆ ಅವರ ಅವಶ್ಯಕತೆ ಅಥವಾ ಬೇಡಿಕೆ ಏನಿರಬಹುದು ಎಂಬುದನ್ನು ಗಮನದಲ್ಲಿರಿಸಿ ಈ ಪ್ರಶ್ನೆಯನ್ನು ಕೇಳಲಾಯಿತು.

ಇದಕ್ಕೆ ಶಿಕ್ಷಕರು,

i. ಕವಿ ಪರಿಚಯದ ಸಿ.ಡಿ ಗಳು,

ii. ಕವಿಗಳು ಬರೆದ ಕೃತಿಗಳು,

iii.. ನಿಘಂಟು,

iv. ಪದ್ಯಗಳನ್ನು ಹೊಂದಿರುವ ಆಡಿಯೋ, ವೀಡಿಯೋಗಳು

v. ಪದ್ಯದ ಭಾಷೆ, ಪದಗಳು ಸರಳವಾಗಿರಬೇಕು,

vi. ಶಿಕ್ಷಕರಿಗೆ ಹಳೆಗನ್ನಡ ತರಬೇತಿಯಾಗಬೇಕು.

vii. ಆಕರ ಕೃತಿಗಳು, ಪದ್ಯ ಸಂಬಂಧಿತ ಗ್ರಂಥಗಳು

ಇತ್ಯಾದಿ ತಮ್ಮ ಅವಶ್ಯಕತೆಗಳನ್ನು ತಿಳಿಸಿರುವುದನ್ನು ಗಮನಿಸಿದರೆ ಪದ್ಯಬೋಧನೆಯಲ್ಲಿ ಶಿಕ್ಷಕರು ಅನೇಕ ಸವಾಲುಗಳನ್ನು ಎದುರಿಸುತ್ತಿರುವದು ಕಂಡುಬರುತ್ತದೆ.

## (ಇ) ಫೋಟೋಗಳು :

















SHOT ON REDMI NOTE 7
MI DUAL CAMERA






ಹಿರಿಯ ಪ್ರಾಥಮಿಕ ಶಾಲೆ.
ತಾ/ಜಿ/ ಕಲಬುರಗಿ.




SHOT ON REDMI NOTE 7
MI DUAL CAMERA

